ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 02
ಜನವರಿ 08, 2012

ಪುಟ 16 ರೂ. 5/-







ಕೈಗಾ ಸಂತ್ರಸ್ತರ ತೀರದ ಬವಣೆ ನಡೆದಿದೆ ನಿರಂತರ ಪ್ರತಿಭಟನೆ



ಜಾತೀಯತೆ-ಭ್ರಷ್ಟಾಚಾರದ ಕೂಪವಾಗಿರುವ ಬೆಂಗಳೂರು ವಿ.ವಿ.

ಬೆಳ್ತಂಗಡಿಯ ನಿವೇಶನ ರಹಿತರು ಕೆಂಬಾವುಟ ಹಿಡಿದ ಕತೆ



ಭೂಸ್ವಾಧೀನ ಮಸೂದೆ : ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ ತಡೆಯಿಲ್ಲ

ಬಳ್ಳಾರಿ ಎಂಬೋ ಲೂಟಿಕೋರರ 'ಗಣ(ಣಿ)ರಾಜ್ಯ'ದೊಳಗೆ...



ಸಿಪಿಐ(ಎಂ) ಅಖಂಡ ಧಾರವಾಡ 9ನೇ ಜಿಲ್ಲಾ ಸಮ್ಮೇಳನ

ಭ್ರಷ್ಟಾಚಾರದಲ್ಲಿ ಕಾಂಗ್ರೆಸ್-ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು


ಸಿಪಿಐ(ಎಂ) ನ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲಾ ಪ್ರದೇಶಗಳ 9ನೇ ಜಿಲ್ಲಾ ಸಮ್ಮೇಳನ ಡಿಸೆಂಬರ್-13, 14 ರಂದು ಗದಗ ನಗರದ ಕಾ॥ ಜ್ಯೋತಿ ಬಸು ನಗರದ ಕಾಂ॥ ಎಂ.ಕೆ. ಫಂದೆ ವೇದಿಕೆಯಲ್ಲಿ (ಅಕ್ಕನ ಬಳಗದ ಆವರಣದಲ್ಲಿ) ಯಶಸ್ವಿಯಾಗಿ ನಡೆಯಿತು.

ಜಿಲ್ಲಾ ಸಮ್ಮೇಳನದ ಅಂಗವಾಗಿ ನಡೆದ ಭಹಿರಂಗ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ನಿತ್ಯಾನಂದಸ್ವಾಮಿ ಮಾತನಾಡಿ ಕಾಂಗ್ರೆಸ್ ತನ್ನ ಚಾರಿತ್ರ್ಯದುದ್ದಕ್ಕೂ ಹರಣಗಳ ಸರಮಾಲೆಯನ್ನೆ ಕಟ್ಟಿಕೊಂಡು ಬಂದಿದೆ. ಅದು ಭ್ರಷ್ಟಾಚಾರದ ಗಂಗೋತ್ರಿ. ಆದರೆ ನಾವು ಶುದ್ಧ ಹಸ್ತರು, ಪ್ರಮಾಣಿಕರು, ದೇಶಪ್ರೆಮಿಗಳೆಂದು ಬಡಾಯಿ ಕೊಚ್ಚಿಕೊಂಡು ದಕ್ಷಿಣ ಭಾರತದಲ್ಲಿ ಮೊದಲ ಸರಕಾರ ಎನ್ನುವ ಹೆಮ್ಮೆಯೊಂದಿಗೆ ಅಧಿಕಾರಕ್ಕೆ ಬಂದ ರಾಜ್ಯ ಬಿಜೆಪಿ ಭ್ರಷ್ಟಾಚಾರವನ್ನೆ ಅಧಿಕಾರವೆಂದು ತಿಳಿದಿದೆ. ಗಣಿ ದುಡ್ಡಿನಿಂದಲೇ ಅಧಿಕಾರಕ್ಕೆ ಬಂದ ಬಿಜೆಪಿಗರು ಗಣಿ ಹಗರಣದಿಂದಲೇ ಜೈಲೂ ಸೇರಿದ್ದಾರೆ ಹೀಗಾಗಿ ಭ್ರಷ್ಟಾಚಾರದಲ್ಲಿ ಕಾಂಗ್ರೆಸ್-ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು ಎಂದರಲ್ಲದೇ ಬಿಜೆಪಿ-ಕಾಂಗ್ರೆಸ್ ನ ಬಾವುಟದ ಬಣ್ಣಗಳು ಬೇರೆಯಾಗಿವೆ ಆದರೆ ಬಂಡವಾಳ ಹೂಡಿ ಚುನಾವಣೆ ನಡೆಸಿ ಅಧಿಕಾರಕ್ಕೆ ಬಂದಾಗ ಸಾರ್ವಜನಿಕ ಹಣ, ನಿಸರ್ಗ ಸಂಪತ್ತು ಲೂಟಿ ಹೊಡೆಯುವಲ್ಲಿ ಹಾಗೂ ಕೃಷಿ, ಆರ್ಥಿಕ, ಉದಾರೀಕರಣ ನೀತಿಗಳ ಜಾರಿಯಲ್ಲಿ ಎರಡು ಪಕ್ಷಗಳು ಸಾಮ್ಯತೆ ಕಾಯ್ದುಕೊಂಡು ಬಂದಿವೆ ಎಂದು ಟೀಕಿಸಿದರು.

3ನೇ ಶಕ್ತಿಯಾಗಿ ಎಡಪಕ್ಷಗಳು: ಬಂಡವಾಳಶಾಹಿ ಹಾಗೊ ಭೂಮಾಲಿಕ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಲೇ ದೇಶದ ಬಡವರ-ದಲಿತರ ಹಾಗೂ ದುಡಿಯುವ ವರ್ಗದ ಪರವಾಗಿ ನಾವು ಕೆಲಸಮಾಡುವದರೊಂದಿಗೆ 3ನೇ ಶಕ್ತಿಯಾಗಿದ್ದೇವೆ. ಆದರೆ ನಮ್ಮ ಜನಪರ ಕಾಳಜಿಯನ್ನು ಜನರ ಬಳಿ ಕೊಂಡೊಯ್ಯುವ ಪ್ರಯತ್ನ ಸಾಲದು ಈ ಸಮ್ಮೇಳದ ಮುಖಾಂತರ ಈ ಪ್ರದೇಶದಲ್ಲಿ ಪಕ್ಷವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಿದ್ದೇವೆ. ಜನ ಒಮ್ಮೆ ನಮ್ಮ ಪಕ್ಷವನ್ನು ಗುರುತಿಸಿದರೆ ಎಂದೂ ಕೈಬಿಡುವದಿಲ್ಲ ಎಂದು ನಿತ್ಯಾನಂದಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಭ್ರಷ್ಟಾಚಾರವೇ ಕೈಲಾಸ: ಕಾಯಕವೇ ಕೈಲಾಸ ಎಂದು ಹೇಳಿದ ಬಸವಣ್ಣನ ಈ ನಾಡಿನಲ್ಲಿ ಅವನ ಹೆಸರೇಳಿ ಅಧಿಕಾರಕ್ಕೆ ಬಂದ ರಾಜ್ಯ ಬಿಜೆಪಿ ಸರಕಾರ " ಭ್ರಷ್ಟಾಚಾರವೇ ಕಾಯಕ, ಭ್ರಷ್ಟಾಚಾರವೇ ಕೈಲಾಸ" ಎಂದು ವಚನ ಬದಲಾಯಿಸಿಕೊಂಡಿದೆ. ದೇವರ ಹಾಗೂ ಭಕ್ತರ ಅನುಸಂಧಾನಕರೆಂದು ನಂಬಿರುವ, ಜನ ಗೌರವದಿಂದ ಕಾಣುವ ಮಠಾಧೀಶರು ಕೂಡಾ ಇದಕ್ಕೆ ಪ್ರೇರಕವಾಗಿ ನಿಂತಿರುವುದು ವಿಷಾದನೀಯ. ಮಠಾಧೀಶರು ಯಡಿಯೂರಪ್ಪ ನೀಡಿದ ಹಣದಿಂದಾಗಿ ಜನರಿಗೆ ಪ್ರಜಾಪ್ರಭುತ್ವ ವಿರೋಧಿಯಾಗಿ ಮೋಸಮಾಡುತ್ತಿದ್ದಾರೆ. ಪೂಜ್ಯ ಭಾವನೆಯ ಕಾವಿ ಬಟ್ಟೆಗೂ ಭ್ರಷ್ಟಾಚಾರದ ಸೊಂಕು ತಗುಲಿದೆ ಎಂದು ಮುಖ್ಯ ಅಥಿತಿಯಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಎಸ್. ಪ್ರಸನ್ನಕುಮಾರ ಮಾತನಾಡಿ





ಗದುಗಿಗೆ ಬಳ್ಳಾರಿ ಜಳ: ಅವರು ಮುಂದುವರೆದು ಮಾತನಾಡಿ ಗದಗ ಜಿಲ್ಲೆಗೆ ಬಳ್ಳಾರಿ ಜಳ ತಾಕಿದೆ. ಅಲ್ಲಿಯ ಗಣಿ ಹಣ ಇಲ್ಲಿಯೂ ಹರಿದಾಡುತ್ತಿದೆ. ಗಣಿ ವ್ಯಾಪಾರದಿಂದ ರಾಜಕೀಯ ವ್ಯಾಪಾರಕ್ಕೆ ಬಂದಿರುವ ರೆಡ್ಡಿಗಳು ಶ್ರೀರಾಮುಲುಗೆ ಮುಖವಾಡ ಹಾಕಿ ಇಲ್ಲಿ ಬಿಟ್ಟಿದ್ದಾರೆ. ಸಾಮೂಹಿಕ ವಿವಾಹ, ಸೀರೆ ಹಂಚುವದು ನಡೆಸಿದ್ದಾರೆ. ಆದರೆ ಅವರಿಗೇ ನಿಜವಾಗಿಯೂ ಕಳಕಳಿ ಇದ್ದರೆ ಸರಕಾರದ ವಿರುದ್ಧ ಹೋರಾಟ ಮಾಡಿ ಅಸಂಘಟಿತ ಕಾರ್ಮಿಕರಿಗೆ ಮಾಸಿಕ ರೂ. 10 ಸಾವಿರ ಕನಿಷ್ಟ ಕೂಲಿ, ಉದ್ಯೋಗ ಕೊಡಿಸಲಿ ಆಗ ನಾವೇ ಅವರಿಗೆ ಸೀರೆಯನ್ನು ಕೊಡುಗೆಯಾಗಿ ನೀಡುತ್ತೇವೆ ಎಂದ ಅವರು ಗದಗ ಜನತೆ ಅವರ ಸಹವಾಸದಿಂದ ದೂರವಿಬೇಕೆಂದು ಕಾಂ॥ ಪ್ರಸನ್ ಹೇಳಿದರು.

ನೀರಾವರಿ ಯೋಜನೆ ಪೂರ್ಣಗೊಳಿಸಲು ಒತ್ತಾಯ : 5 ದಶಕಗಳಿಂದ ಕುಂಟುತ್ತಾ ಸಾಗಿರುವ 1.11 ಲಕ್ಷ ಎಕರೆ ಭೂಮಿಗೆ ನೀರು ಉಣಿಸುವ ಗುರಿ ಹೊಂದಿರುವ ಗದಗ ಜಿಲ್ಲೆಯ ರೋಣ ತಾಲೂಕಿನ ಕೊನೆಯಂಚಿನ ಮಲಪ್ರಭಾ ನೀರಾವರಿ ಯೋಜನೆ ಶೀಘ್ರ ಪೂರ್ಣಗೊಳಿಸಬೇಕು. ಜಿಲ್ಲೆಯ ಶಿಂಗಟಾಲೂರು ಏತ ನೀರಾವರಿ ಕಾಮಗಾರಿ ಬೇಗನೇ ಮುಕ್ತಾಯಗೊಳಿಸಿ ಭೂಮಿಗೆ ನೀರು ಹರಿಸಬೇಕು. ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ಮೂರು ಗ್ರಾಮಗಳ ರೈತರಿಗೆ 10 ಲಕ್ಷ ರೂ. ಪರಿಹಾರ ಮತ್ತು ಸಮರ್ಪಕ ಪುರ್ನವಸತಿ ಕಲ್ಪಿಸಬೇಕು. ಸಮ್ಮೇಳನದ ಭಹಿರಂಗ ಸಭೆ ಪ್ರಮುಖ ನಿರ್ಣಯ ಅಂಗೀಕರಿಸಿತು.

ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಕಾಂ॥ ಬಿ.ಎಸ್. ಸೊಪ್ಪಿನ ವಹಿಸಿದ್ದರು. ಮಾಹಾಗುಂಡಪ್ಪ ಅಂಗಡಿ ಸ್ವಾಗತಿಸಿದರು, ಎಂ.ಎಸ್.ಹಡಪದ ಪ್ರಾಸ್ತಾವಿಕವಾಗಿ ಮಾತನಾಡಿದರು, ಬಸವರಾಜ ಮಂತೂರ ವಂದಿಸಿದರು, ವಿಠ್ಠಲ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ಮಹೇಶ ಪತ್ತಾರ, ಬಿ.ಐ.ಈಳಿಗೇರ, ನಾರಾಯಣ ಕಾಳೆ, ಆರ್.ಎಚ್.ಆಯಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೆರವಣಿಗೆ: ಬಹಿರಂಗ ಸಭೆಗೂ ಮೊದಲು ನಗರದ ಮುನ್ಸಿಪಲ್ ಕಾಲೇಜು ಮೈದಾನದಿಂದ ತೋಂಟದಾರ್ಯ ಮಠದವರೆಗೆ ಕಾರ್ಮಿಕರು, ರೈತರು, ವಿದ್ಯಾರ್ಥಿ-ಯುವಜನರು ಪಕ್ಷದ ಸದಸ್ಯರು ಪಕ್ಷದ ಧ್ವಜ ಹಿಡಿದು ಘೋಷಣೆ ಕೂಗುತ್ತ ಆಕರ್ಷಕ ಮೆರವಣಿಗೆ ನಡೆಸಿದರು.

ವಿದ್ಯಾರ್ಥಿ ನಾಯಕರಿಗೆ ಅಭಿನಂದನೆ: ಗಂಗಾವತಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಾಲೆಗಳನ್ನ ಮುಚ್ಚುವ ಹಾಗೂ ವಿಲಿನಗೊಳಿಸು ಸರಕಾರದ ಕ್ರಮ ಖಂಡಿಸಿ ನಡೆದ ಹೋರಾಟದಲ್ಲಿ ಮುಖ್ಯಮಂತ್ರಿಗಳ ಎದುರಲ್ಲೆ ಪೋಲಿಸರ ದೌರ್ಜನ್ಯಕ್ಕೆ ಒಳಗಾಗಿ ಜೈಲು ಸೇರಿದ್ದ ವಿದ್ಯಾರ್ಥಿ ಹೋರಾಟಗಾರರಾದ ಕಾಂ॥ ಬಸವರಾಜ ಪೂಜಾರ, ಕಾಂ॥ ಮಾರುತಿ ಅಂಬಿಗೇರ, ಕಾಂ॥ ರೇಣುಕಾ ಕಹಾರ, ಕಾಂ॥ ಪೀರು ರಾಠೋಡ, ಕಾಂ॥ ನೀಲಮ್ಮ, ಕಾಂ॥ ಬಾರ್ಕಿ ಮುಂತಾದವರನ್ನು ಸಮ್ಮೇಳನದಲ್ಲಿ ಅಭಿನಂದಿಸಲಾಯಿತು.

ಪ್ರತಿನಿಧಿ ಅಧಿವೇಶನ: ಹಿರಿಯ ಸದಸ್ಯರಾದ ಕಾಂ॥ ಆರ್.ಎಚ್.ಆಯಿ ಧ್ವಜಾರೋಹಣ ನೆರವೇರಿಸಿದರು. ನಂತರ ಹುತಾತ್ಮ ಸ್ಥಂಭಕ್ಕೆ ಗೌರವಾರ್ಪಣೆ ಮಾಡಲಾಯಿತು. ಕಾಂ॥ ಆರ್.ಎಚ್.ಆಯಿ, ಕಾಂ॥ ಬಿ.ಎನ್.ಪೂಜಾರಿ ಹಾಗೂ ಕಾಂ॥ ಜ್ಯೋತಿ ಪುಟ್ಟರಡ್ಡೇರ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮ್ಮೇಳನದ ಕಲಾಪಗಳನ್ನು ನಡೆಸಿಕೊಟ್ಟಿತು. ಗಜೇಂದ್ರಗಡ ಸಂಗಾತಿಗಳು ಕ್ರಾಂತಿ ಗೀತೆ ಹಾಡಿದರು. ಕಾಂ॥ ಮಹೇಶ ಪತ್ತಾರ ಶ್ರದ್ಧಾಂಜಲಿ ಹಾಗೂ ಸಂತಾಪದ ಗೊತ್ತುವಳಿಯನ್ನು ಮಂಡಿಸಿದರು. ಈ

ಪುಟ 15 ಕ್ಕೆ



'ಕೈಗಾ' ಸಂತ್ರಸ್ತರ ತೀರದ ಬವಣೆ

ನಿರಂತರ ಹೋರಾಟ... 18 ದಿನಗಳು ...

'ಕೈಗಾ ಸುತ್ತಲ ಜನರಿಗೆ ಸುರಕ್ಷಿತ ಜೀವನ, ಪುನರ್ವಸತಿ ಬೇಕಾಗಿದೆ ಆದರೆ ಅದು ದೊರಕುತ್ತಿಲ್ಲ'.

ಯಮುನಾ ಗಾಂವ್ಕರ್
ಕಾರವಾರ

ಕಾರವಾರದಲ್ಲಿ ಕೈಗಾ ಅಣುಸ್ಥಾವರ ನಿರ್ಮಾಣ ಆಗುತ್ತದೆ ಎಂದಾಗ ಅದರ ವಿರುದ್ಧ ಅತ್ಯಂತ ದೊಡ್ಡ ಚಳುವಳಿ ನಡೆದಿತ್ತು. ಅದರೆ ಸರ್ಕಾರ ಎಲ್ಲಾ ರೀತಿಯ ಸುರಕ್ಷಾ ಕ್ರಮವನ್ನು ಕೈಗೊಳ್ಳುವುದಾಗಿಯೂ ಮತ್ತು ಅಲ್ಲಿ ವಿಕಿರಣದ ವ್ಯಾಪ್ತಿಗೆ ಸೇರುವ ಎಲ್ಲಾ ಜನ, ಕುಟುಂಬಗಳಿಗೆ ಸುರಕ್ಷಿತ ಬದುಕು ಕಲ್ಪಿಸಿಕೊಡುವ ಭರವಸೆ ನೀಡಿತ್ತು. ಆದರೆ, ಅಣುಸ್ಥಾವರ ಘಟಕ ನಿರ್ಮಾಣ ಕಾರ್ಯ ಪ್ರಾರಂಭವಾದಾಗಿನಿಂದ (1988) ಇಲ್ಲಿಯ ವರೆಗೆ ನಡೆದ ಬೆಳವಣಿಗೆ ತೀರಾ ನಿರಾಶಾದಾಯಕವಾದುದು. ಮಾತ್ರವಲ್ಲ ಕೊಟ್ಟಮಾತಿಗೆ ತಪ್ಪಿನಡೆದ ದುರಂತವನ್ನು ನಾವಿಲ್ಲಿ ಕಾಣುತ್ತೇವೆ.

ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಅಗತ್ಯ ಸುರಕ್ಷಾ ಕ್ರಮ ಕೈಗೊಳ್ಳುವುದಕ್ಕೆ ಯಾಕೆ ಹಿಂದೇಟು ಹಾಕುತ್ತಿದೆ ಗೊತ್ತಿಲ್ಲ. ಅವರೇ ಗುರುತಿಸಿದ ವೃತ್ತಗಳಾದ ಎಕ್ಸ್ಲೂಜಿವ್ ಝೋನ್, ಸ್ಟೆರಲೈಜ್ಡ ಝೋನ್ 5 ಕಿ.ಮೀ. ವ್ಯಾಪ್ತಿ ಹಾಗೂ ಇನ್ನೊಂದು 10 ಕಿ.ಮೀ. ವ್ಯಾಪ್ತಿಯ ವಲಯಗಳನ್ನು ಗುರುತು ಮಾಡಿದೆ. 5 ಕಿ.ಮೀ ತ್ರಿಜ್ಯದ ವ್ಯಾಪ್ತಿಯು ಮಾನವ, ಜಾನುವಾರುಗಳು ವಾಸಿಸುವ ಅಥವಾ ಬದುಕುವ ಪ್ರದೇಶಗಳಲ್ಲ ಎಂದು ಸ್ವತಃ ವಿಕಿರಣದ ಜ್ಞಾನವಿರುವ ವಿಜ್ಞಾನಿಗಳೇ ಹೇಳಿದ್ದಾರೆ. 5 ಕಿ.ಮೀ. ವ್ಯಾಪ್ತಿಗೆ ಬರುವ ಹರಟುಗಾ, ಬಾಳೇಮನಿ, ಹರೂರು, ಬೆಳ್ಸೆ ಮುಂತಾದ ಪ್ರದೇಶಗಳಲ್ಲಿ ಇನ್ನೂ ಜನ ವಸತಿ ಇದೆ. ಎಲ್ಲರೂ ತಮ್ಮ ಭೂಮಿ ಹೊಂದಿದ್ದು ಕೃಷಿಕಾರ್ಯದಲ್ಲಿರುವವರು. ಅವರನ್ನು ಸ್ಥಳಾಂತರ ಮಾಡುವ ಕಾರ್ಯವನ್ನು ಒಪ್ಪಿಕೊಳ್ಳದಿರುವುದು ವಿಶಾದಕರ.

1996ರಿಂದ 1999ರ ತನಕ ಕರ್ನಾಟಕ ಪ್ರಾಂತ ರೈತ ಸಂಘ ಮಾಡಿದ ನಿರ್ಣಾಯಕ ಹೋರಾಟದಿಂದಾಗಿ ಸರ್ಕಾರದ ಪುನರ್ವಸತಿ ಸಮಿತಿ ಸಭೆಯಲ್ಲಿ ಈ ವ್ಯಾಪ್ತಿಗೆ ಸೇರಿದ ಹರಟುಗಾ, ಬಾಳೆಮನಿ, ದೇವಕಾರ ಗ್ರಾಮವನ್ನು ಸ್ಥಳಾಂತರಿಸಿ, ಪರಿಹಾರ-ಪುನರ್‌ವಸತಿ ನೀಡುವ ನಿರ್ಣಯವಾಗಿತ್ತು. ಆದರೆ, ಕಳೆದ ಒಂದು ದಶಕದಲ್ಲಿ ದೇವಕಾರ ಗ್ರಾಮದ ಸ್ಥಳಾಂತರಕ್ಕೆ ಕ್ರಮವಹಿಸಿದ್ದು ಬಿಟ್ಟರೆ ಉಳಿದ ಊರಿನವರು ಭಯ-ವ್ಯಾಕುಲದಲ್ಲಿ ದಿನದೂಡುವಂತಾಗಿದೆ.

ಕಳೆದ 12ವರ್ಷಗಳಿಂದಲೂ ಮನವಿ ನೀಡುತ್ತಾ, ಸರ್ಕಾರಗಳ ಗಮನ ಸೆಳೆಯುತ್ತಾ ಬಂದಾಗಲೂ ಬೇಡಿಕೆ ಈಡೇರಿಸದಿದ್ದಾಗ ಹೋರಾಟದ ಮಾರ್ಗ ಅನಿವಾರ್ಯವಾಗಿ ಜಿಲ್ಲಾಡಳಿತದ ಎದುರು ಅನಿರ್ದಿಷ್ಟಾವಧಿ ಧರಣ ನಡೆಸುತ್ತಿದ್ದಾರೆ. ಇದಕ್ಕೊಂದು ಹೋರಾಟ ಸಮಿತಿ ರಚಿಸಿಕೊಂಡಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘ ಒಳಗೊಂಡಂತೆ ಹಲವು ಸಂಘಗಳು ಬೆಂಬಲ ನೀಡಿವೆ. ಹಲವು ಲೇಖಕ, ಸಾಹಿತಿಗಳು ಬೆಂಬಲಿಸಿದ್ದು ಒಳ್ಳೆಯ ಬೆಳವಣಿಗೆ.

ಹೋರಾಟ ನಿರತರ ಮನವಿ ಇಷ್ಟೇ. ಆಲಿಸಿ

ಕೈಗಾ ಅಣುಸ್ಥಾವರದ ಅತೀ ಸಮೀಪದ ಹಳ್ಳಿಗಳಾದ ಬಾಳೆಮನೆ, ಹರಟುಗಾ, ಹರೂರು, ಬೋಳಸೆ, ಕುಚೇಗಾರ, ಸುಳಗೇರಿ, ಮುಂತಾದ ಹಳ್ಳಿಗರು ನೂರಾರು ವರ್ಷಗಳಿಂದ ಮನೆ, ಜಮೀನು, ಕೃಷಿ, ಪಶುಪಾಲನೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ಹಳ್ಳಿಗಳು ಕಳೆದ 25 ವರ್ಷಗಳಿಂದಲೂ ಕೈಗಾ ಅಣುಸ್ಥಾವರದ ವಿಕಿರಣದ ಭೀತಿಯಲ್ಲಿವೆ. ಇದು ಸ್ಟೆರಲೈಜ್ಡ ಝೋನ್ ವ್ಯಾಪ್ತಿಗೆ ಬರುವುದರಿಂದ ಸ್ಥಾವರದ ಸುರಕ್ಷತೆಯ ದೃಷ್ಟಿಯಿಂದ ಈ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಹಿಂದಿನ ಕೈಗಾ ಯೋಜನಾಧಿಕಾರಿಗಳಾದ ಡಾ. ತಿವಾರಿಯವರು ತಿಳಿಸಿದ್ದರು.

ಆದರೆ ಭೂಮಿ ಸ್ವಾಧೀನ ಪ್ರಕ್ರಿಯೆ ನಡೆಯದಿರುವುದನ್ನು ಖಂಡಿಸಿ, ಪುನರ್ ವಸತಿ ಮತ್ತು ಉದ್ಯೋಗಾವಕಾಶ ನೀಡಲು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ನಿರಂತರ ಹೋರಾಟ ನಡೆಸಿತ್ತು. ಆ ಸಂದರ್ಭದಲ್ಲಿ ದಿ. 12-6-1996 ರಂದು ನಡೆದ ಪುನರ್ ವಸತಿ ಸಮಿತಿ ಸಭೆಯು 3 ಹಳ್ಳಿಗಳ ಭೂಸ್ವಾಧೀನಕ್ಕೆ ಠರಾವು ಪಾಸು ಮಾಡಿತ್ತು. ಅದರ ಜಾರಿಗೆ ಮತ್ತೆ ಪ್ರಾಂತ ರೈತ ಸಂಘವು 29-10-1999ರಿಂದ ಅನಿರ್ದಿಷ್ಟಾವಧಿ ಹೋರಾಟ ನಡೆಸಿತು. ಕಾಳಿ ಜಲವಿದ್ಯುತ್ ಯೋಜನೆಯಲ್ಲಿ ನಿರಾಶ್ರಿತರಾದ ಕೆಲವು ಭಾಗದವರಿಗೆ ಒಂದು ರೀತಿಯ ನ್ಯಾಯ ಈ ಭಾಗದವರಿಗೆ ಇನ್ನೊಂದು ರೀತಿಯ ನಿರ್ಣಯವನ್ನು ಅಂದು ತೆಗೆದುಕೊಳ್ಳಲಾಗಿತ್ತು. ಇದರಿಂದ ಅನ್ಯಾಯಕ್ಕೊಳಗಾದವರಲ್ಲಿ ನಮ್ಮ ಹಳ್ಳಿಗರು ಹೆಚ್ಚು. ಕದ್ರಾದಲ್ಲಿ ಜಲವಿದ್ಯುತ್ ಘಟಕವನ್ನು ಲೋಕಾರ್ಪಣೆ ಮಾಡುವ ಕಾರ್ಯಕ್ರಮವನ್ನೇ ಮುಂದೂಡಿಸುವಂತಹ ಹೋರಾಟವನ್ನು ರೈತಸಂಘದ ವತಿಯಿಂದ ಮಾಡಲಾಗಿತ್ತು. ಅಂತೂ ಆ ಸಂದರ್ಭದಲ್ಲಿ ದೇವಕಾರ ಗ್ರಾಮದ ಪುನರ್ ವಸತಿಗೆ ಕ್ರಮ ವಹಿಸಿದರು. ಉಳಿದ ಹಳ್ಳಿಗಳ ಭೂಸ್ವಾಧೀನಕ್ಕೆ ಅಂದು ಒಪ್ಪಿದ್ದರಿಂದ ಹೋರಾಟದ ತೀವ್ರತೆಯನ್ನು ಹಿಂತೆಗೆದುಕೊಳ್ಳಲಾಗಿತ್ತು. ಆ ನಂತರ ಹಲವು ಬಾರಿ ಮನವಿಗಳನ್ನು ಕೊಡಲಾಗಿದೆ. ಆದಾಗ್ಯೂ ಇನ್ನೂ ತನಕ ಯಾವ ಕ್ರಮವನ್ನೂ ವಹಿಸಿಲ್ಲ. (ಈ ಕುರಿತು ಅಗತ್ಯ ದಾಖಲೆಗಳನ್ನು ಒದಗಿಸಲಾಗಿದೆ).

ಆದರೆ, ನೀಡಿದ ಆಶ್ವಾಸನೆಯಂತೆ ಅಧಿಕಾರಿಗಳು ಮತ್ತು ಕೈಗಾ ಯೋಜನಾಧಿಕಾರಿಗಳು ಪುನರ್ ವಸತಿ ಸಮಿತಿ ಸಭೆಯಲ್ಲಿ ನಡೆದ ತೀರ್ಮಾನಗಳ ಕಾರ್ಯರೂಪಕ್ಕೆ ತರುವಲ್ಲಿ ಅಕ್ಷಮ್ಯ ವಿಳಂಬ ಮಾಡಿದರು. ಈಗ ಕೈಗಾದಲ್ಲಿ 1-4 ಘಟಕಗಳು ಪ್ರಾರಂಭಗೊಂಡಿವೆ. ಹಾಗೂ 5-6ನೇ ಘಟಕವನ್ನು ಸ್ಥಾಪಿಸಲು ತಯಾರಿ ನಡೆಸುತ್ತಿದ್ದಾರೆ. ಇದನ್ನು ನಾವು ಬಲವಾಗಿ ವಿರೋಧಿಸುತ್ತಿದ್ದೇವೆ. ನಿಷೇಧಿತ ಮತ್ತು ಯಾವುದೇ ತರಹದ ಅಸ್ವಾಭಾವಿಕ ಅಭಿವೃದ್ಧಿಗೆ ಅವಕಾಶವಿಲ್ಲದ ಹರ್ಟುಗಾ, ಬಾಳೆಮನೆ, ಹರೂರು ಬಳಸೆ, ಕುಚೇಗಾರ ಹಾಗೂ ಸುಳಗೇರಿ ಇತರೇ ಹಳ್ಳಿಗಳಲ್ಲಿ ಜನಜೀವನ ನಡೆಸುವುದು ಕಷ್ಟಕರವಾಗಿದೆ. ಈ ಭಾಗದ ರೈತರು ಸಂವಿಧಾನದತ್ತ ಬದುಕುವ ಹಕ್ಕನ್ನು ಕೇಳಿ ಈವರೆಗೆ ಮಾಡಿದ ವಿನಂತಿ, ಮನವಿ, ಅವರು ನೀಡಿದ ಭರವಸೆಗಳು ಈಡೇರದಿರುವುದರಿಂದ ಅನಿರ್ದಿಷ್ಟಾವಧಿ ಧರಣ ನಡೆಸಲು ತೀರ್ಮಾನಿಸಿ ದಿನಾಂಕ: 5-12-2011ರಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಇಂದಿನವರೆಗೂ ಹಗಲು ರಾತ್ರಿ ಧರಣ ಸತ್ಯಾಗ್ರಹ ನಡೆಯುತ್ತಲೇ ಇದೆ. ನಮ್ಮ ಹಳ್ಳಿಗಳಿಗಿಂತ ಇದೇ ಸೂಕ್ತ-ಸುರಕ್ಷಿತ ಸ್ಥಳ ಎಂದು ನಾವು ಭಾವಿಸಿದ್ದೇವೆ. ಕಾರಣ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ವಿನಂತಿಸುತ್ತೇವೆ.



1. ಹರ್ಟುಗಾ, ಬಾಳೆಮನೆ, ಕುಚೇಗಾರ, ಬಳಸೆ, ಹರೂರು, ಸುಳಗೇರಿ ಮುಂತಾದ ಹಳ್ಳಿಗಳ ರೈತರ ಜಮೀನು ಸರ್ಕಾರವೇ ಸ್ವಾಧೀನ ಪಡಿಸಿಕೊಳ್ಳಲಿ.
2. ಕೃಷಿ ಭೂಮಿಗೆ ಪರ್ಯಾಯ ಕೃಷಿಯೋಗ್ಯ ಭೂಮಿ ನೀಡಬೇಕು.
3. ಈ ಜನರಿಗೆಲ್ಲ ಸೂಕ್ತ ಪರಿಹಾರ, ಪುನರ್ ವಸತಿ ನೀಡಬೇಕು.
4. ಮನೆಗೊಂದು ಖಾಯಂ ಸರ್ಕಾರಿ ಉದ್ಯೋಗ ನೀಡಬೇಕು.
5. ತಕ್ಷಣ ಈ ಕುರಿತು ಈ ಭಾಗದ ಜನರ ಜೊತೆಗೆ ಜಂಟಿ ಸಭೆ ಕರೆಯಬೇಕು. ಈ ಭಾಗದ ಜನರನ್ನೂ ಒಳಗೊಂಡ ಪುನರ್ವಸತಿ ಸಮಿತಿ ರಚಿಸಬೇಕು. ಹಿಂದಿನ ಪುನರ್ವಸತಿ ಸಭೆಯ ತೀರ್ಮಾನ ಜಾರಿಯಾಗಬೇಕು.
6. ಅಣುಸ್ಥಾವರ ಬಾಧಿತ ಪ್ರದೇಶಗಳಾದ ಹರ್ಟುಗಾದಲ್ಲಿ ಸುಮಾರು 140 ಕುಟುಂಬಗಳು, ಬಾಳೆಮನಿಯಲ್ಲಿ 100, ಸುಳಗೇರಿಯಲ್ಲಿ 115, ಹರೂರಿನಲ್ಲಿ 80, ಬಳಸೆಯಲ್ಲಿ 80, ಕುಚೇಗಾರದಲ್ಲಿ 70 ಹೀಗೆ ಒಟ್ಟು ಸುಮಾರು 500 ಕುಟುಂಬಗಳಿಗೆ ಪರ್ಯಾಯ ಕೃಷಿ ಭೂಮಿ, ಪುನರ್ವಸತಿ, ಪರಿಹಾರ, ಉದ್ಯೋಗ ನೀಡಬೇಕು.

ಉಸ್ತುವಾರಿ ಸಚಿವರೇ, ಸಂಸದರೇ ನೀವು ಬರಲೇ ಬೇಕು...ನಮ್ಮ ಸಂಕಷ್ಟ ಆಲಿಸಲೇ ಬೇಕು..

ಕೈಗಾ ವಿಕಿರಣ ಬಾಧಿತ ಪ್ರದೇಶಗಳ ಜನತೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಕಳೆದ 18 ದಿನಗಳಿಂದ ನಡೆಸುತ್ತಿರುವ ಅಹರ್ನಿಶಿ ಹೋರಾಟವು ಇನ್ನಷ್ಟು ತೀವ್ರಗೊಳ್ಳಲಿದೆ. ಮೊದಲ ದಿನ ಅಂದರೆ 5-12-2011 ರಂದು ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್ ಬೆಂಬಲದ ಮಾತುಗಳೊಂದಿಗೆ ಈ ಹೋರಾಟ ಪ್ರಾರಂಭವಾಯಿತು. ಎಲ್ಲ ರೀತಿಯ ಅಡೆ-ತಡೆಗಳಿಗೂ ಹೆದರದೇ ಹೋರಾಟ ಸಮಿತಿಯ ಜೊತೆಗೆ ಹೆಗಲು ಕೊಟ್ಟು ನಿಲ್ಲಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ನಿರಂತರ ಶ್ರಮದಿಂದಾಗಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೊಂದಿಗೆ ದಿ. 17-12-2011ರಂದು ಸಂಜೆ 4 ಗಂಟೆಗೆ ಹೋರಾಟ ನಿರತರ ನಿಯೋಗ ಸಮಾಲೋಚಿಸಲು ಸಾಧ್ಯವಾಯಿತು. ಈಗಾಗಲೇ ಹಳಿಯಾಳ-ಜೋಯಿಡಾ ಶಾಸಕರಾದ ಸುನಿಲ್

ಪುಟ 4 ಕ್ಕೆ

'ಕೈಗಾ' ಸಂತ್ರಸ್ತರ ತೀರದ ಬವಣೆ......

ಪುಟ 3 ರಿಂದ

ಹೆಗಡೆಯವರು 15-12-2011 ರಂದು ಸದನದಲ್ಲಿ ಪ್ರಶ್ನೆಯನ್ನೂ ಕೇಳಿದ್ದಾರೆ. ಹೀಗೆ ಹಲವು ಮಹತ್ವದ ಬೆಳವಣಿಗೆಗಳು ಜರುಗುತ್ತಿವೆ.

ಇಷ್ಟೆಲ್ಲಾ ಆದರೂ ಜಿಲ್ಲಾ ಕೇಂದ್ರದಲ್ಲಿ ನಡೆಯುತ್ತಿರುವ ಬಡ ಜನತೆಯ ಅಹವಾಲು ಆಲಿಸಲು ಜಿಲ್ಲೆಯ ಜವಾಬ್ದಾರಿಯ ಭಾಗವಾಗಿ ಉಸ್ತುವಾರಿ ಸಚಿವರು ಹೋರಾಟ ನಿರತ ಸ್ಥಳಕ್ಕೆ ಬರದಿರುವುದು ಬೇಸರ ತಂದಿದೆ. ಈ ವಾರ ಅವರು ಶಿರಸಿಗೆ ಬಂದು ಹೋಗಿದ್ದಾರೆ ವಿನಃ ಅತ್ಯಂತ ಸಂಕಷ್ಟದಲ್ಲಿರುವ ತಮ್ಮನ್ನು ವಿಚಾರಿಸಲು ಬಂದಿಲ್ಲ. ಸಂಸದರು ತಲೆಹಾಕಲಿಲ್ಲ. ರಾಜ್ಯ-ಕೇಂದ್ರ ಸರ್ಕಾರಗಳು ವಿಕಿರಣ ಬಾಧೆಗೆ ಒಳಗಾದ ಜನತೆಯನ್ನು ಹೀಗೆ ಸತಾಯಿಸುವುದು ನಿಜಕ್ಕೂ ಅಮಾನವೀಯ. ಈಗಲಾದರೂ ಬಂದು ತಕ್ಷಣ ರಾಜ್ಯ-ಕೇಂದ್ರಗಳ ಅಭಿಪ್ರಾಯವೇನೆಂದು ತಿಳಿಸಬೇಕೆಂಬುದು ಹೋರಾಟಗಾರರ ಅಭಿಪ್ರಾಯ.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾ. ಮಾರುತಿ ಮಾನ್ಪಡೆ, ಸಿಪಿಐಎಂ ದ ಜಿಲ್ಲಾ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ತಿಲಕ ಗೌಡ, ಮಂಜುನಾಥ ಪುಲ್ಕರ್, ಸುಭಾಸ್ ಕೊಪ್ಪಿಕರ್, ಪ್ರಾಂತ ರೈತ ಸಂಘದ ಕಾರವಾರ ತಾಲೂಕು ಅಧ್ಯಕ್ಷರಾದ ವಿಷ್ಣು ನಾಯ್ಕ ಮಾಸ್ತರರು, ಸಿಐಟಿಯುನ ಜಿಲ್ಲಾ ಅಧ್ಯಕ್ಷರಾದ ಹರೀಶ ನಾಯ್ಕ, ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್, ಗ್ರಾಮ ಪಂಚಾಯ್ತಿ ನೌಕರ ಸಂಘದ ಮುತ್ತಾ ಪೂಜಾರಿ ಬೆಂಬಲಿಸಿ ಭಾಗವಹಿಸಿದ್ದಾರೆ.

ಈ ಭಾಗದ ಶಾಸಕರು ಹಾಗೂ ವಿಜ್ಞಾನ-ತಂತ್ರಜ್ಞಾನ ಮಂತ್ರಿಗಳಾದ ಆನಂದ ಅಸ್ನೋಟಿಕರ್, ಹಳಿಯಾಳ ಜೋಯಿಡಾ ಶಾಸಕರಾದ ಸುನಿಲ್ ಹೆಗಡೆ, ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಉದಯ ನಾಯ್ಕ, ಜಿ.ಪಂ. ಸದಸ್ಯರಾದ ಮಧುಕರ ನಾಯ್ಕ, ಜಿಲ್ಲಾಧಿಕಾರಿಗಳು ಹಾಗೂ ಸ್ಥಾನಿಕ ಸಹಾಯಕರು, ಕಾಂಗ್ರೆಸ್ ಮುಖಂಡರಾದ ಪ್ರಭಾಕರ ರಾಣೆ, ಸತೀಶ ಸೈಲ್, ದೀಪಕ್ ವೈಂಗಣಕರ್, ರಘು ನಾಯ್ಕ, ಅನು ಕಳಸ್, ಪಿ.ಎಂ. ತಾಂಡೇಲ್, ಕೆ.ಆರ್. ದೇಸಾಯಿ, ಸಂಜಯ್ ಸಾಳುಂಕೆ ಹಾಗೂ ಗೋಕರ್ಣ ಸಂರಕ್ಷಣಾ ಸಮಿತಿಯ ರಾಜು ಅಡಿ, ಪ್ರಸನ್ನರವರು, ಕದ್ರಾ ಗ್ರಾಮ ಪಂಚಾಯ್ತಿಯ ಅಶ್ವಿನಿ ಪೆಡ್ನೇಕರ್, ನಫೀಸಾ, ರಾಜೇಶ್ ನಾಯ್ಕ, ದೇವಳಮಕ್ಕಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ವಿ.ಡಿ. ದೇಸಾಯಿ, ಜನಶಕ್ತಿ ವೇದಿಕೆಯ ಮಾಧವ ನಾಯಕ, ಅನು ಕಳಸ, ಗೋವಾದ ಪೊಲಿಟೆಕ್ನಿಕ್ ಕಾಲೇಜಿನ ಮುಖ್ಯಸ್ಥರಾದ ವಿನೋದ ಪವಾರ್, ಓಯು ಉಪನ್ಯಾಸಕರ ಸಂಘ ಮುಂತಾದವರು ಸ್ಥಳಕ್ಕೆ ಆಗಮಿಸಿ ಬೆಂಬಲಿಸಿದ್ದಾರೆ. ಇವರೆಲ್ಲರ ನಿರಂತರ ಬೆಂಬಲ ಈ ಚಳುವಳಿಗೆ ಇನ್ನಷ್ಟು ಸಿಗುತ್ತದೆಂದು ನಾವು ಭಾವಿಸಿದ್ದೇವೆ ಎಂದು ಹೋರಾಟ ಸಮಿತಿ ಆಶೆ ವ್ಯಕ್ತಪಡಿಸಿದೆ.

ಹೋರಾಟ ನಿರತರಿಗೆ ಪ್ರಾಂತ ರೈತ ಸಂಘದ ನಿರಂತರ ಬೆಂಬಲ-ಮಾರುತಿ ಮಾನ್ಪಡೆ

ಅಣುಸ್ಥಾವರ ಆಸುಪಾಸಿನ ಜನತೆಯು ಕಳೆದ 16 ದಿನಗಳಿಂದ ನಡೆಸುತ್ತಿರುವ ಅಹೋರಾತ್ರಿ ಧರಣ ಸತ್ಯಾಗ್ರಹಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಆಗಮಿಸಿ ನಿರಂತರ ಬೆಂಬಲವನ್ನು ಸೂಚಿಸಿ ಹೋರಾಟಕ್ಕೆ ಸ್ಫೂರ್ತಿ ನೀಡಿದರು. ದಿ:17-12-2011ರಂದು ಹೋರಾಟ ಸಮಿತಿಯ ನಿಯೋಗವನ್ನು ಬೆಂಗಳೂರಿಗೆ ಕರೆಯಿಸಿಕೊಳ್ಳುವಲ್ಲಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಜಿ.ಸಿ. ಬೈಯ್ಯಾರೆಡ್ಡಿ ಹಾಗೂ ಸಿಪಿಎಂ ಪಕ್ಷದ ರಾಜ್ಯ ಸಮಿತಿಯ ಪ್ರಯತ್ನ ಸ್ಮರಣೀಯ. ಅಂದು ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಗಳೊಂದಿಗೆ ಚರ್ಚಿಸಿ, ಸಮಸ್ಯೆಯ ಆಳವನ್ನು ಮನವರಿಕೆ ಮಾಡಿಕೊಟ್ಟಿದ್ದರು. ಮುಖ್ಯಕಾರ್ಯದರ್ಶಿಗಳಿಂದ ಕೈಗಾ ಅಣುಸ್ಥಾವರದ ಸುತ್ತಲಿರುವ ಭೂಮಿ ಸ್ವಾಧೀನ ಪಡೆದು, ಪರ್ಯಾಯ ಕೃಷಿ ಭೂಮಿ, ಪುನರ್ವಸತಿ ಕುರಿತು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಸಕಾರಾತ್ಮಕ ಉತ್ತರವನ್ನೂ ಪಡೆದುಕೊಳ್ಳಲಾಗಿತ್ತು.



ಆನಂತರ ಕಾರವಾರಕ್ಕೆ ಹೋರಾಟ ನಿರತರನ್ನು ಭೇಟಿಮಾಡಲು ಆಗಮಿಸಿದ ಮಾನ್ಪಡೆಯವರು ಪ್ರಾರಂಭದಲ್ಲಿ ವಿಜ್ಞಾನ ತಂತ್ರಜ್ಞಾನ ಮಂತ್ರಿಗಳಾದ ಮಾನ್ಯ ಆನಂದ ಅಸ್ನೋಟ್ಕರ್ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಜಿಲ್ಲಾ ಕಾರ್ಯದರ್ಶಿಗಳಾದ ಶಾಂತಾರಾಮ ನಾಯಕ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್, ಹೋರಾಟ ಸಮಿತಿಯ ಅಧ್ಯಕ್ಷ ಶಾಮನಾಥ ನಾಯ್ಕ, ಕಾರ್ಯದರ್ಶಿ ಸಂತೋಷ ಗೌಡ, ಕಾಮಣ್ಣ ಗೌಡ, ಕೃಷ್ಣ ಗೌಡ, ಸಂತೋಷ ಬಾಂದೇಕರ್, ಅಬ್ದುಲ್ ಲತೀಫ್, ಅಂಕಿತಾ ಮಯೇಕರ್, ಸಂಜೀವ ದೇಸಾಯಿ ಮುಂತಾದವರ ಉಪಸ್ಥಿತಿಯೊಂದಿಗೆ ವಿವರವಾಗಿ ಚರ್ಚಿಸಿದರು.

ನಂತರ ಬಹಿರಂಗ ಸಭೆಯನ್ನುದ್ದೆಶಿಸಿ ಮಾತನಾಡಿದರು. ಸೂಕ್ತ ಚಳುವಳಿಯ ಮುಂದಿನ ಮಾರ್ಗೋಪಾಯಗಳ ಕುರಿತು ಹೋರಾಟನಿರತರೊಂದಿಗೆ ಚರ್ಚಿಸಿದರು. ಕೇಂದ್ರ ಸರ್ಕಾರದ ಗಮನ ಸೆಳೆಯಲು ಹಾಗೂ ಅಣುಶಕ್ತಿ ಕುರಿತ ಪಾರ್ಲಿಮೆಂಟರಿ ಕಮಿಟಿ ಭೇಟಿಯಾಗಲು ಹೋರಾಟ ಸಮಿತಿಗೆ ಸಂಪೂರ್ಣ ಮಾರ್ಗದರ್ಶನ ನೀಡಿದರು.

ಹೋರಾಟಗಾರರನ್ನುದ್ದೇಶಿಸಿ ಮಾತನಾಡಿದ ಅವರು ಅತ್ಯಂತ ಹಿಂದುಳಿದ ಜನ ವಿಭಾಗ ವಾಸಿಸುವ ಈ ಹರ್ಟುಗಾ, ಬಾಳೆಮನಿ, ಸುಳಗೇರಿ, ಕುಚೇಗಾರ, ಹರೂರು, ಬಳಸೆ ಮುಂತಾದ ಹಳ್ಳಿಗರನ್ನು ವಿಕಿರಣ ಬಾಧೆಗೊಳಪಡಿಸಿ, ಪ್ರಯೋಗಾಲಯ ಮಾಡುವ ಹುನ್ನಾರ ವಿದೆಯೇ ಎಂದು ಬಹಿರಂಗವಾಗಿ ಪ್ರಶ್ನಿಸಿದರು. ಇಲ್ಲದಿದ್ದರೆ ನೌಕರಸ್ಥರ ಕಾಲೋನಿಗಳು ಅಷ್ಟು ದೂರದಲ್ಲಿ ಯಾಕೆ? ಅಭಿವೃದ್ಧಿಗೆ ಆಸ್ಪದವಿಲ್ಲದ, ನಿರಂತರ ಭಯದ ನೆರಳಿನಲ್ಲಿ, ಆತಂಕದಲ್ಲಿ ಬದುಕು ಕಳೆಯುವಂತೆ ಮಾಡುತ್ತಿರುವುದಾದರೂ ಯಾಕೆ? ದೇಶದಲ್ಲಿ ಎಲ್ಲಿಯೇ ಭಯೋತ್ಪಾದಕರ ಧಾಳಿಯ ಸೂಚನೆಯಿದ್ದರೂ ಈ ಪ್ರದೇಶಗಳಲ್ಲಿರುವ ಜನರ ಮನೆ ಮುಂದೆ ಭಯೋತ್ಪಾದನಾ ನಿಗ್ರಹ ದಳ ಅಥವಾ ಪೋಲೀಸರು ಬಂದು ನಿಂತು ಭಯ ಹುಟ್ಟಿಸುವುದಾದರೂ ಯಾಕೆ? ಕಳೆದ 20 ವರ್ಷಗಳಿಂದ ನಿರಂತರವಾಗಿ ಈ ಸಮಸ್ಯೆಯನ್ನು ಸಮಸ್ಯೆಯಾಗಿಯೇ ಉಳಿಸಿಕೊಂಡು ಬಂದ ಹಿನ್ನೆಲೆಯನ್ನು ನೋಡಿದರೆ ಶೋಷಣೆಯ ಪರಮಾವಧಿ ಎತ್ತಿ ತೋರುತ್ತದೆ. ಕೂಡಲೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೆಮ್ಮದಿಯ, ನಿಶ್ಚಿಂತ ಬದುಕಿಗೆ ದಾರಿ ಮಾಡಿಕೊಡಲು ಮುಂದಾಗದಿದ್ದಲ್ಲಿ ಇನ್ನಷ್ಟು ತೀವ್ರ ಚಳುವಳಿಗೆ ಧುಮುಕಬೇಕಾದೀತು. ಸ್ಥಳೀಯ ಎಲ್ಲಾ ಜನ ವಿಭಾಗದ ಬೆಂಬಲದೊಂದಿಗೆ ಸಂವಿಧಾನಾತ್ಮಕ ಹಕ್ಕು ರಕ್ಷಣೆಯ ಹೋರಾಟಕ್ಕೆ ತೊಡಗಬೇಕಾಗುತ್ತದೆ ಎಂದರು.

ಪಾರ್ಲಿಮೆಂಟರಿ ಕಮಿಟಿ ಭೇಟಿಯಾಗುವ ತನಕ ಹೋರಾಟ ಸಮಿತಿಯು ಪ್ರತಿನಿತ್ಯ ಧರಣ ಮುಂದುವರಿಸುವ ನಿರ್ಧಾರ ಕೈಗೊಂಡಿದೆ.

ಕಿಮ್ ಜೊಂಗ್ ॥ ನಿಧನ - ಸಿಪಿಐ(ಎಂ) ತೀವ್ರ ಶೋಕ

ಕೊರಿಯ ವರ್ಕ್‌ರ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣತಂತ್ರದ (ಡಿಪಿಆರ್‌ಕೆ-ಉ.ಕೊರಿಯ) ಅಧ್ಯಕ್ಷರಾದ್ದ ಕಿಮ್ ಜೊಂಗ್ 11 ಅವರ ನಿಧನದ ಬಗೆಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಆಳವಾದ ಶೋಕವನ್ನು ವ್ಯಕ್ತಪಡಿಸಿದೆ. ಕಾಂ॥ ಕಿಮ್ ಜೊಂಗ್-2 ಅವರು ಫೆಬ್ರವರಿ 16, 1942 ರಂದು ಜನಿಸಿದರು. ಡಿಸೆಂಬರ್ 17ರಂದು ನಿಧನರಾದರು. ಅಮೇರಿಕಾ ದೇಶವು ಹೇರಿದ ಅತ್ಯಂತ ಅಮಾನವೀಯ ದಿಗ್ಬಂಧನ ಮತ್ತು ಅದರ ಪರಿಣಾಮವಾದ ಗಂಬೀರ ಆರ್ಥಿಕ ಬಿಕ್ಕಟ್ಟಿನಿಂದಾದ-ಜಗತ್ತಿನ ಇತಿಹಾಸದಲ್ಲೇ ಅತ್ಯಂತ ಸಂಕಷ್ಟಕರವಾದ ಸನ್ನಿವೇಶಗಳಲ್ಲಿ ಕಿಮ್ ಜೊಂಗ್ ಅವರು ತಮ್ಮ ದೇಶ ಮತ್ತು ಪಕ್ಷವನ್ನು ಮುನ್ನಡೆಸಿದರು. ತಮ್ಮ ಸಾವಿನವರೆಗೆ ಅವರು ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಸಮಾಜವಾದದ ಸಂರಕ್ಷಣೆಯ ಪರವಾಗಿ ನಿಂತರು.

ಕಿಮ್-2 ಸಂಗ್ ಅವರ ಪರಂಪರೆ ಮತ್ತು ಅವರ 'ಜ್ಯೂಚೆ' ಸಿದ್ಧಾಂತದಲ್ಲಿ ಮುಂದುವರಿಯುತ್ತ ಕಿಮ್ ಜೋಂಗ್ 11 ಅವರು 'ಶೋಗುನ್' ಸಿದ್ಧಾಂತವನ್ನು ತಮ್ಮ ದೇಶದ ಪರಿಸ್ಥಿತಿಗೆ ಅನ್ವಯಿಸಿದರು.

ಸಿಪಿಐ(ಎಂ) ಕೇಂದ್ರ ಸಮಿತಿಯು ಅಗಲಿದ ನಾಯಕನ ನೆನಪಿನಲ್ಲಿ ತನ್ನ ಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸುತ್ತದೆ. ಮತ್ತು ಕೊರಿಯಾದ ಕಾರ್ಮಿಕ ಪಕ್ಷ ಮತ್ತು ಉತ್ತರ ಕೊರಿಯಾದ ಜನತೆ ಮತ್ತು ಕಿಮ್ ಜೋಂಗ್ 11 ಅವರ ಕುಟುಂಬದ ಸದಸ್ಯರಿಗೆ ತನ್ನ ಆಳವಾದ ಸಹಾನುಭೂತಿಯನ್ನು ವ್ಯಕ್ತ ಪಡಿಸುತ್ತದೆ.

ಸಮಾಜವಾದಿ ಹಾದಿಯ ಪಯಣಕ್ಕೆ ಮಾರ್ಕ್ಸವಾದ ಲೆನಿನ್‌ವಾದಕ್ಕೆ ಬದ್ಧರಾಗಿ ಉಳಿಯುವುದೇ ಅಗಲಿದ ನೇತಾರನಿಗೆ ನಾವು ಸಲ್ಲಿಸುವ ನೈಜ ಶ್ರದ್ಧಾಂಜಲಿ ಎಂದು ಸಿಪಿಐ(ಎಂ) ಪಕ್ಷ ಭಾವಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬೆಳ್ತಂಗಡಿಯಲ್ಲಿ ಮನೆ ಇಲ್ಲದ ಮನೆ ಕಟ್ಟುವ ಜಾಗವಿಲ್ಲದ ಬಡವರು ಕೆಂಬಾವುಟ ಹಿಡಿದು ಬೀದಿಗಿಳಿದಿದ್ದಾರೆ

ಬೆಳ್ತಂಗಡಿಯ ನಿವೇಶನರಹಿತರು ಕೆಂಬಾವುಟ ಹಿಡಿದ ಕತೆ



ಒಂದು ಕಡೆ ಸಾವಿರಾರು ಎಕ್ರೆ ಭೂಮಿಯ ಕೊಳ್ಳೆ ಹೊಡೆಯುತ್ತಿರುವ . ಭೂಗಳ್ಳರ ಬಗ್ಗೆ ಮೌನವಾಗಿರುವ ಸರಕಾರ, ಇನ್ನೊಂದೆಡೆ ವಾಸ್ತವ್ಯಕ್ಕಾಗಿ ಒಂದು ಮನೆಯನ್ನು ಕಟ್ಟಿಕೊಳ್ಳಲು 5 ಸೆಂಟ್ಸ್ ನಿವೇಶನ ಕೂಡಾ ಸಿಗದ ಸಾವಿರಾರು ಕುಟುಂಬಗಳ ಬಗ್ಗೆ ಕೂಡಾ ಸರಕಾರ ಮೌನದಿಂದ ಇದೆ. ಈ ದೇಶದಲ್ಲಿ 5 ಸೆಂಟ್ಸ್ ಜಮೀನಿನ ಹಕ್ಕು ಪಡೆಯಲು ಸಾಧ್ಯವಾಗದೇ ಬಾಳಿ ಸಾಯುವ ಸಾವಿರಾರು ಕುಟುಂಬಗಳ ಮನಸ್ಥಿತಿಯನ್ನು ಜನಪ್ರತಿನಿಧಿಗಳಾಗಿ ಆಯ್ಕೆ ಆಗಲು ಬಯಸುವ ಜನರಿಗೆ ಅರ್ಥವಾಗದಿದ್ದರೆ ಚುನಾವಣೆ ಸಮಯ ಕೋಟ್ಯಾಂತರ ರೂ ಹಣ ಖರ್ಚುಮಾಡುವವರಿಗೆ ಜನರ ಭಾವನೆಗಳ ಬಗ್ಗೆ ಗಮನ ನೀಡಲು ಸಾಧ್ಯವೇ?

ಬೆಳ್ತಂಡಿ ತಾಲೂಕಿನಲ್ಲಿ 81 ಗ್ರಾಮಗಳಿವೆ. ಪ್ರತಿ ಗ್ರಾಮದಲ್ಲೂ ನಿವೇಶನ ರಹಿತರ ಉದ್ದದ ಪಟ್ಟಿಯೇ ಇದೆ. ಕಂದಾಯ ಇಲಾಖೆ , ಪಂಚಾಯ್ತೂ ಇಲಾಖೆಯನ್ನೂ, ಪಂಚಾಯ್ತು ಇಲಾಖೆ ಕಂದಾಯ ಇಲಾಖೆಯನ್ನು ಬೆರಳು ತೋರಿಸುತ್ತಾ ನಿವೇಶನ ನೀಡದೇ ಸತಾಯಿಸುತ್ತಿದೆ. ಕಂದಾಯ ಇಲಾಖೆ ಜಮೀನು ನೀಡಿದರೆ ನಾವು ನಿವೇಶನ ನೀಡಲು ಸಿದ್ದ ಎನ್ನುವ ಪಂಚಯ್ತು ಇಲಾಖೆಗೆ, ಕಂದಾಯ ಇಲಾಖೆ ದಿಟ್ಟತನದ ಉತ್ತರ ನೀಡುತ್ತಿದೆ ಏನೆಂದರೆ, ಪಂಚಾಯ್ತು ಇಲಾಖೆ ತಮ್ಮಲ್ಲಿ ಭೂಮಿಯನ್ನೇ ಕೇಳಿಲ್ಲ, ನಿವೇಶನಕ್ಕಾಗಿ ಮೀಸರಿಸಲು ಭೂಮಿ ಗುರುತಿಸಿ ನಿರ್ಣಯ ಮಾಡಿಲ್ಲ ಎನ್ನುತ್ತಿದೆ ಒಂದೆಡೆ ಸರ್ವೆ ಇಲಾಖೆ ಕೂಡ ಭೂಮಿ ತೋರಿಸಲು ಆಸಕ್ತಿ ವಹಿಸುತ್ತಿಲ್ಲ.

ಈ ದ್ವಂದ ಯಾಕೆ ಬಂತೆಂದರೆ ನಿವೇಶನ ನೀಡಲು ಇಲ್ಲದೆ, ವಾಸ್ತವ್ಯದ ಭದ್ರತೆ ಇಲ್ಲದೆ ಒದ್ದಾಡುವವರಿದ್ದಾರೆ. ಉಣಲು ಆಹಾರ, ಉಡುಪು ಉಡುಪು, ವಾಸ್ತವ್ಯಕೊಂದು ಮನೆ ನಿರ್ಮಿಸಲು ನಿವೇಶನ ಇದು ಮಾನವನ ಅಗತ್ಯಗಳಲ್ಲಿ ಪ್ರಮುಖವಾದವುಗಳು, ನಿವೇಶನ ಹಕ್ಕು ಪತ್ರ ಇಲ್ಲದೆ ಈ ಕುಟುಂಬಗಳು ಸರಕಾರದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವಂತಿದೆ. ಸರ್ಕಾರಿ ಭೂಮಿಯನ್ನು ಗುರುತಿಸಿ ಆಕ್ರಮಿಸಿ ವಾಸ್ತವ್ಯದ ಮನೆ ಕಟ್ಟಿ ಕುಳಿತ, ಆಕ್ರಮಿತ ನಿವೇಶನದಾರರಿಗೆ, ಪಂಚಾಯ್ತು ಮನೆ ನಂಬ್ರ ನೀಡಿ ತೆರಿಗೆ ವಿಧಿಸುತ್ತಿಲ್ಲ. ಮನೆ ನಂಬ್ರ ಇಲ್ಲದೆ ರೇಶನ್ ಕಾರ್ಡ್, ವಿದ್ಯುತ್ ಸಂಪರ್ಕ ಇವರಿಗೆ ಸಮಸ್ಯೆಯಾಗಿ ಪರಿಣಮಿಸಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿ.ಪಿ.ಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿಯು ಇಂತಹ ನಿವೇಶನ ರಹಿತರ ಪರ ಹೋರಾಡಲು ಮಧ್ಯ ಪ್ರವೇಶಮಾಡಿತು. ಕಳೆದ 1 ವರ್ಷದಿಂದ ಸಿ.ಪಿ.ಐ.(ಎಂ) ಬೆಳ್ತಂಗಡಿ ತಾಲೂಕು ಸಮಿತಿ ನಿರಂತರ ಹೋರಾಡ ನಡೆಸುತ್ತಾ ಬಂದಿದೆ.

ನಿವೇಶನ ರಹಿತರು, ಖಾಲಿ ಸರಕಾರಿ ಭೂಮಿಯಲ್ಲಿ ಮನೆಕಟ್ಟಿ ಕುಳಿತವರನ್ನು ಒಕ್ಕಲೆಬ್ಬಿಸಲು ಕೂಡಾ ಸರಕಾರ ಮುಂದಾಗಿದೆ. ಎಕ್ರೆ ಗಟ್ಟಲೆ ಆಕ್ರಮಣ ಮಾಡಿದವರ ಬಗ್ಗೆ ಯಾವ ಕ್ರಮ ಕೈಗೊಳ್ಳದ ತಾಲೂಕು ಕಛೇರಿ ನಿವೇಶನ ಆಕ್ರಮಿಸಿದವರಿಗೆ ಕನಿಷ್ಠ ನೋಟಿಸ್ ಕೂಡ ನೀಡದೆ ಒಕ್ಕಲೆಬ್ಬಿಸಲು ಮುಂದಾಗಿದೆ. ಬೆಳ್ತಂಗಡಿ ತಾಲೂಕಿನಲ್ಲಿ ಸರಕಾರದ ಲೆಕ್ಕಚಾರದಂತೆ ಸುಮಾರು 20,000 ನಿವೇಶನರಹಿತರಿದ್ದಾರೆ ಎಂದು ಹೇಳುತ್ತಿದೆ. ನಿಜವಾದ ನಿವೇಶನ ರಹಿತರ ಪಟ್ಟಿ ಇಲಾಖೆಗಳಲ್ಲಿ ಇಲ್ಲದಿದ್ದರೂ, ಸರಕಾರದ ಬಳಿ ಇರುವ ಪಟ್ಟಿ ಏರುತ್ತಿದೆ ವಿನಃ ಅವರಿಗೂ ನಿವೇಶನ ಒದಗಿಸಲು ಸರಕಾರ ಕ್ರಮ ವಹಿಸುತ್ತಿಲ್ಲ.

ಸಿ.ಪಿ.ಐ(ಎಂ) ಈ ಬಗ್ಗೆ 2 ಹಂತದ ಪಂಚಾಯ್ತು ಹೋರಾಟ ನಡೆಸಿತು. 2 ಹಂತದಲ್ಲಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ 1500 ನಿರಾಶ್ರಿತರಿಂದ ನಿವೇಶನಕ್ಕಾಗಿ ಅರ್ಜಿ ಸಲಲಿಸಿತು. ಸರಕಾರ ಲೆಕ್ಕದಲ್ಲಿ ಇವರ್‍ಯಾರು ನಿರಾಶ್ರಿತರಲ್ಲ. ಯಾಕೆಂದರೆ ಸರಕಾರಿ ಪಟ್ಟಿಯಲ್ಲಿ ಇವರ ಹೆಸರೇ ಇಲ್ಲ. ಹೋರಾಟದ ನಂತರ ನಿರಾಶ್ರಿತರ ಪಟ್ಟಿಗೆ ಸೇರ್ಪಡೆ ಗೊಳಿಸುವಂತೆ ಮಾಡಲು ಪಕ್ಷಕ್ಕೆ ಸಾಧ್ಯವಾಗಿದೆ.

ಮೊದಲು ಪಕ್ಷದ ಕಾರ್ಯಕರ್ತರು ಆಯ್ದ ಗ್ರಾಮಪಂಚಾಯ್ತು ವ್ಯಾಪ್ತಿಯಲ್ಲಿ (43 ಪಂಚಾಯ್ತುಗಳ ಪೈಕಿ 12 ಗ್ರಾಮ ಪಂಚಾಯ್ತು ವ್ಯಾಪ್ತಿಯಲ್ಲಿ) ಪ್ರಚಾರ ನಡೆಸಿ, ಪೀಡ್ಡ್ ಮಾಡಿ ಪಂಚಾಯ್ತುನಲ್ಲಿ ಧರಣಿ ನಡೆಸಿತು. ನಿರಾಶ್ರಿತರ ಪಟ್ಟಿಗೆ ಈ ನಿವೇಶನ ರಹಿತರ ಹೆಸರು ಸೇರ್ಪಡೆಗೆ ಒತ್ತಾಯಿಸಿತು. ಆಕ್ರಮಿತ ಸರಕಾರಿ ಭೂಮಿಯನ್ನೇ ನಿವೇಶನಕ್ಕಾಗಿ ಕಾದಿರಿಸಲು ನಿರ್ಣಯ ಮಾಡಿ, ಹಕ್ಕುಪತ್ರ ನೀಡಲು ಒತ್ತಾಯಿಸಿತು. ಈ ರೀತಿ 12 ಪಂಚಾಯ್ತುಗಳಲ್ಲಿ. ಹೋರಾಟ ನಡೆಸಿ 3-7-2007 ರಂದು ತಾಲೂಕು ಕಚೇರಿಗೆ ಸುಮಾರು 1000 ಜನ ನಿವೇಶನ ರಹಿತರ ಮುತ್ತಿಗೆಹಾಕಲಾಯಿತು. ಈ ಸಂದರ್ಭ 786 ಅರ್ಜಿಗಳನ್ನು ಸಿ.ಪಿ.ಐ(ಎಂ) ಪಕ್ಷದ ಮೂಲಕ ನಿವೇಶನ ರಹಿತರಿಂದ, ಆಕ್ರಮಿತರಿಂದ ನೀಡಲಾಯಿತು.

ಹೋರಾಟದ ಸ್ಥಳಕ್ಕೆ ಬಂದ ತಹಶೀಲ್ದಾರ್ ಅವರ ಅರ್ಜಿ ಸ್ವಿಕರಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಸ್ವೀಕೃತಿಯನ್ನು ಕೂಡ ಪ್ರತಿಯೊಬ್ಬರಿಗೂ ನೀಡಿದರು. ಆದರೆ ಹೋರಾಟಗಾರರು ತಮಗೆಲ್ಲ 2-10-11 ರ ಒಳಗೆ ಹಕ್ಕು ಪತ್ರ ನೀಡಬೇಕೆಂದು, ಇಲ್ಲದಿದ್ದರೆ 3-10-2011 ರಂದು ಪುನ: ಇಲ್ಲಿಗೆ ಬರುವೆವೆಂದೂ ಎಚ್ಚರಿಸಿದರು.

ತಹಶೀಲ್ದಾರ್ ಅವರು ನಿವೇಶನ ಹಕ್ಕು ಪ್ರತ್ರಕ್ಕಾಗಿ ಬಂದ ಅರ್ಜಿಗಳನ್ನು ತಾಲೂಕು ಪಂಚಾಯ್ತಿಗೆ ಕಳುಹಿಸಿದರು, ತಾಲುಕು ಪಂಚಾಯ್ತಿನವರು ಪರಿಶೀಲನೆಗಾಗಿ ಗ್ರಾಮಪಂಚಾಯಿತಿಗೆ ಕಳುಹಿಸಿದರು.



ಪಂಚಾಯ್ತಿನವರು ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಗ್ರಾಮ ಪಂಚಾಯ್ತು ವ್ಯಾಪ್ತಿಯಲ್ಲಿ ಸಪ್ಟಂಬರ್ ತಿಂಗಳಲ್ಲಿ 2 ನೇ ಹಂತದ ಹೋರಾಟ ನಡೆಸಲಾಯಿತು. ಇದರಿಂದ ಎಲ್ಲಾ ಪಂಚಾಯ್ತುಗಳು ಸದ್ರಿ ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳ ತೊಡಗಿದರು. ಭೂಮಿ ಗುರುತಿಸಿ, ನಿವೇಶನಕ್ಕಾಗಿ ಮೀಸಲಿಡಲು ನಿರ್ಣಯ ಕೈಗೊಂಡರು.

2-10-2011 ರ ಒಳಗೆ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ 3-10-2011 ರಂದು .ಸುಮಾರು 2000 ಜನ ಬೆಳ್ತಂಗಡಿ ತಾಲೂಕ ಕಚೇರಿಗೆ ಮುತ್ತಿಗೆ ಹಾಕಿ ಹಕ್ಕು ಪತ್ರಕ್ಕೆ ಒತ್ತಾಯಿಸಿದರು. ಕಚೇರಿ ಕೆಲಸಕ್ಕೆ ತೊಂದರೆ ಆಗುತ್ತಿದೆ. ದೂರ ಹೋಗಿ ಎಂದು ತಹಶೀಲ್ದಾರರಿಂದ ಆದೇಶ ಬಂದಾಗ, ನಿವೇಶನ ಕೊಡಿ ಅಲ್ಲಿಗೆ ಹೋಗುತ್ತೇವೇಂದು ಪಟ್ಟು ಹಿಡಿದರು. ಭಾರತ ದೇಶದಲ್ಲಿ 5 ಸೆಂಟ್ಸ್ ಜಮೀನು ಹೊಂದಲು ನಾವೆಲ್ಲ ಅನರ್ಹರೇ ಹೇಳಿ? ಎಂಬುದೇ ಹೋರಾಟಗ್ಾರರ ಪ್ರಶ್ನೆಯಾಗಿತ್ತು.

ನಾವೇನು ಸಾವಿರಾರು ಎಕ್ರೆ ಕೇಳುತ್ತಿಲ್ಲ. ಮನೆ ಕಟ್ಟಿ ಕೊಳ್ಳಲು 5 ಸೆಂಟ್ಸ್ ಕೊಡಿ ಎಂದಷ್ಟೆ ಹೇಳುತ್ತಿರುವುದು ನಿವೇಶನ ಹಕ್ಕುಪತ್ರ ಕೊಡದೇ ಕದಲಲಾರೆವು ಎಂದಾಗ ತಹಶೀಲ್ದಾರರು ಸ್ಥಳಕ್ಕೆ ಆಗಮಿಸಿ ನಿಮ್ಮ ಅರ್ಜಿಗಳನ್ನು ತಾಲೂಕು ಪಂಚಾಯ್ತಿಗೆ ಕಳುಹಿಸಲಾಗಿದೆ, ತಾಲೂಕು ಪಂಚಾಯ್ತಿ ಮೂಲಕ ನಿಮಗೆ ಹಕ್ಕು ಪತ್ರ ನೀಡಲಾಗುವುದು. ನಿಮ್ಮ ಹೆಸರುಗಳನ್ನು ನಿವೇಶನ ರಹಿತರ ಪಟ್ಟಿಗೆ ಸೇರ್ಪಡೆಮಾಡಲಾಗಿದೆ ಎಂದರು. ಈ ಸಂದರ್ಭ 800ಕ್ಕೂ ಮಿಕ್ಕಿ ಅರ್ಜಿಗಳನ್ನು ತಹಶೀಲದಾರರಿಗೆ ಪುನಃ ನೀಡಲಾಯಿತು. ಆ ಅರ್ಜಿಗಳನ್ನು ತಾಲೂಕು ಪಂಚಾಯ್ತಿಗೆ ಕಳುಹಿಸಿ ಕೊಡುವುದಾಗಿ ತಿಳಿಸಿದರು. ತಾಲೂಕು ಪಂಚಾಯ್ತಿ ಅಧಿಕಾರಿ ಇಲ್ಲಿಗೆ ಬರಲಿ ಎಂದು ಪ್ರತಿಭಟನಾಕಾರರು ಒತ್ತಾಯಿಸಿದಾಗ ಅವರು ಜಿಲ್ಲಾಪಂಚಾಯ್ತಿಗೆ ಹೋದ ವಿಚಾರ ತಿಳಿದು 31-12-2011 ರವರೆಗೆ ಸಮಯಾವಕಾಶ ನೀಡುತ್ತೇವೆ. ಅದರೊಳಗೆ ನಿವೇಶನ ಹಕ್ಕು ಪತ್ರ ಕೊಡಿಸಿ, ಸಿಗದಿದ್ದರೆ 2-1-2012 ರಂದು ತಾಲೂಕು ಪಂಚಾಯ್ತಿಗೆ ಮುತ್ತಿಗೆ ಹಾಕುತ್ತೇವೆ. ಹಕ್ಕು ಪತ್ರ ಸಿಗದೆ ಹಿಂತಿರುಗಲಾರೆವು ಎಂದು ಪ್ರತಿಜ್ಞೆ ಮಾಡಿ 2ನೇ ಹಂತದ ಹೋರಾಟ ನಿಲ್ಲಿಸಲಾಯಿತು.

ಇದೀಗ ಇನ್ನಷ್ಟು ನೂತನ ಜನರ ಅರ್ಜಿಗಳೊಂದಿಗೆ, ಈಗಾಗಲೇ ಅರ್ಜಿ ಸಲ್ಲಿಸಿದ 1500 ಜನರೊಂದಿಗೆ ಸುಮಾರು 3000 ಜನ 2-1-2012 ರಂದು ಬೆಳ್ತಂಗಡಿ ತಾಲೂಕು ಪಂಚಾಯ್ತಿಯ ಎದುರು ಧರಣಿ ನಡೆಸಲು ಜನ ತಯಾರಾಗಿ ವ್ಯಾಪಕ ಪ್ರಚಾರ ನಡೆಸುತ್ತಿದ್ದಾರೆ.

ಈ ಎಲ್ಲಾ ಹೋರಾಟಗಳಲ್ಲಿ ಸಿ.ಪಿ.ಐ.(ಎಂ) ತಾಲೂಕು ಕಾರ್ಯದರ್ಶಿ ಶಿವಕುಮಾರ, ಸಿ.ಪಿ.ಐ.(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಎಂ.ಭಟ್, ಯದವ ಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯರುಗಳಾದ ಹರಿದಾಸ, ತಾಲೂಕು ಸಮಿತಿ ಸದಸ್ಯರುಗಳಾದ ಸುಕನ್ಯ, ಜಯಂತಿ, ನೆಬಿಸ, ಜಯರಾಂ, ಶ್ಯಾಂರಾಜ್, ನೀಲೇಶ್, ವಸಂತ, ನಾರಾಯಣ, ಲಕ್ಷ್ಮಣಗೌಡ, ಶೇಖರ ನೇತೃತ್ವ ನೀಡಿ ಮುನ್ನಡೆಸುತ್ತಾ ಬರುತ್ತಿದ್ದಾರೆ. ಈ ಎಲ್ಲಾ ಜನರ ಬಳಿಗೆ ತೆರಳಿ ಅರ್ಜಿ ಸ್ವೀಕರಿಸುತ್ತಾ ಪ್ರಚಾರ ಮಾಡುತ್ತಾ ಇರುವ ತಾಲೂಕಿನ ಸಂಗಾತಿ ಗುಂಪುಗಳು, ಕಾರ್ಯಕರ್ತರುಗಳಾದ ಲೋಕೇಶ, ರೋಹಿಣಿ

ಪುಟ 12ಕ್ಕೆ

ಸರ್ಕಾರಿ ಶಾಲೆಗಳ ಉಳಿವಿಗಾಗಿ ಜಿಲ್ಲಾ ಪಂಚಾಯತು ಚಲೋ

ರಾಜ್ಯಾದ್ಯಂತ ಕನ್ನಡ ಸರಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಲು ಸರಕಾರ ನಿರ್ಧರಿಸಿರುವುದನ್ನು ಖಂಡಿಸಿ ಮತ್ತು ಏಕರೂಪದ ಶಿಕ್ಷಣ ನೀಡಬೇಕು ಎಂದು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ಎಫ್ಐ) ನೇತೃತ್ವದಲ್ಲಿ ವಿದ್ಯಾರ್ಥಿಗಳು ಡಿಸೆಂಬರ್ 23 ರಂದು ದ.ಕ.ಜಿಲ್ಲಾ ಪಂಚಾಯತು ಚಲೋ ಹಮ್ಮಿಕೊಂಡರು. ಈಗಾಗಲೇ ಮುಚ್ಚಿದ ಶಾಲೆಗಳನ್ನು ಪುನರಾರಂಭಿಸಬೇಕು, ಸರ್ಕಾರೀ ಶಾಲೆ ಮುಚ್ಚುವ ಆದೇಶ ವಾಪಸ್ ಹಿಂಪಡೆಯಬೇಕೆಂದು ಕೂಡಾ ಆಗ್ರಹಿಸಲಾಯಿತು.



ಸರಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರ ನೇಮಕ, ಕಟ್ಟಡ, ಮೈದಾನ, ಶೌಚಾಲಯ, ಕುಡಿಯುವ ನೀರು ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲು ಹಣ ಒದಗಿಸಬೇಕು; ಸರಕಾರಿ ಶಾಲೆಗಳನ್ನು ಬಲಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಶಿಕ್ಷಣ ತಜ್ಞರು, ಚಿಂತಕರು, ವಿದ್ಯಾರ್ಥಿ–ಶಿಕ್ಷಕರು, ಪ್ರಗತಿಪರ ಸಂಘಟನೆಗಳ ಸಂಯುಕ್ತ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಬೇಕು; ಅನಧಿಕೃತ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಮುಚ್ಚಬೇಕು ಮುಂತಾದ ಬೇಡಿಕೆಗಳನ್ನು ವಿದ್ಯಾರ್ಥಿಗಳು ಮುಂದಿಟ್ಟರು.

ಎಸ್ಎಫ್ಐ ರಾಜ್ಯ ಸಮಿತಿ ಸದಸ್ಯರಾದ ಜೀವನ್‌ರಾಜ್ ಕುತ್ತಾರ್, ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ಮನೋಜ್ ವಾಮಂಜೂರು, ದಿವ್ಯಾ ಬೋಳಾರ್, ರಫೀಕ್ ಮೊಂಟೆಪದವು, ತುಳಸೀದಾಸ್, ಅಶ್ಫಕ್ ಅಳೇಕಲ, ಭವ್ಯಾ ಕುತ್ತಾರ್, ಫಯಾಜ್ ಮಂಜನಾಡಿ ಮತ್ತಿತರರು 'ಚಲೋ' ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಜಿ.ಪಂ.ಕಾರ್ಯನಿರ್ವಾಹಣಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿಯನ್ನು ಸಲ್ಲಿಸಲಾಯಿತು.

ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಂಗಳೂರು ನಗರಪಾಲಿಕೆ ಉಪಚುನಾವಣೆ: ಸಿಪಿಎಂ ನಾಮಪತ್ರ

ಮಂಗಳೂರು ಮಹಾನಗರ ಪಾಲಿಕೆಯ 20ನೇ ವಾರ್ಡ್ ತಿರುವೈಲಿನಲ್ಲಿ ಸದಸ್ಯ ಹುದ್ದೆ ತೆರವಾಗಿದ್ದು, ಆ ಸ್ಥಾನಕ್ಕೆ ಜನವರಿ 10 ರಂದು ನಡೆಯಲಿರುವ ಉಪಚುನಾವಣೆಗೆ ಸಿಪಿಎಂನಿಂದ ಭವಾನಿ ಗಂಗಯ್ಯ ಅಮೀನ್ ಡಿಸೆಂಬರ್ 27 ರಂದು ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆ ವೇಳೆಗೆ ವಾರ್ಡಿನ ಪಕ್ಷದ ಬೆಂಬಲಿಗರಲ್ಲದೆ ಸಿಪಿಎಂ ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಕೆ.ಯಾದವ ಶೆಟ್ಟಿ, ಪಾಲಿಕೆ ಸದಸ್ಯೆ ಜಯಂತಿ ಬಿ.ಶೆಟ್ಟಿ ಅಲ್ಲದೆ ಸ್ಥಳೀಯ ಮುಖಂಡರಾದ ಲಿಂಗಪ್ಪ ಸಾಲ್ಯಾನ್, ಗಂಗಯ್ಯ ಅಮೀನ್, ಮುಂಡಪ್ಪ, ಬಾಬು ಸಾಲ್ಯಾನ್ ಮೊದಲಾದವರು ಜೊತೆಗಿದ್ದರು.



ವರದಿ: ವಾ.ಉ.

ಸುಳ್ಯದಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ:

ಯಾವುದೇ ಸೌಲಭ್ಯ ನೀಡದೆ, ಲಾಗ್ ಪುಸ್ತಕ ಕೂಡಾ ನೀಡದೇ ಕೇವಲ 100 ರೂಪಾಯಿ ವೇತನ ನೀಡಿ ಬೀಡಿ ಕಂಪೆನಿಗಳು ಸರ್ಕಾರ ಹಾಗೂ ಕಾರ್ಮಿಕರನ್ನು ವಂಚಿಸುತ್ತಿವೆ ಎಂದು ಆರೋಪಿಸಿ ಸಿಐಟಿಯು ನೇತೃತ್ವದ ಸುಳ್ಯ ತಾಲೂಕು ಬೀಡಿ ಕಾರ್ಮಿಕರ ಸಂಘದ ವತಿಯಿಂದ ಡಿಸೆಂಬರ್ 27 ರಂದು ಸುಳ್ಯ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ ಕಾರ್ಮಿಕರನ್ನು ಸೌಲಭ್ಯಗಳಿಂದ ವಂಚಿಸುತ್ತಿರುವ ಕಂಪೆನಿಗಳ ಮೇಲೆ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು.

ಪಟ್ಟಣದ ಶಾಸ್ತ್ರಿ ವೃತ್ತದಿಂದ ಮೆರವಣಿಗೆಯಲ್ಲಿ ಆಗಮಿಸಿದ ಬೀಡಿ ಕಾರ್ಮಿಕರು ತಾಲೂಕು ಕಚೇರಿ ಎದುರು ಸಮಾವೇಶಗೊಂಡರು. ಸಂಘದ ಪ್ರಧಾನ ಕಾರ್ಯದರ್ಶಿ ರಾಬರ್ಟ್ ಡಿಸೋಜ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಘದ ಅಧ್ಯಕ್ಷೆ ಕೆ.ಸರಸ್ವತಿ, ರಿಚರ್ಡ್ ಕ್ರಾಸ್ತಾ, ಜೂಲಿಯನ್ ಕ್ರಾಸ್ತಾ, ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಸಿಪಿಐ(ಎಂ) ತುಮಕೂರು ಜಿಲ್ಲಾ ಸಮ್ಮೇಳನ

ಮಠ ಮಂದಿರಗಳ ಕಪ್ಪುಹಣದ ಬಗ್ಗೆ ಅಡ್ವಾಣಿ ಮೌನ – ಶ್ರೀರಾಮರೆಡ್ಡಿ ಟೀಕೆ

ವಿದೇಶಿ ಕಪ್ಪುಹಣದ ಕುರಿತು ಮಾತನಾಡುವ ಬಿಜೆಪಿ ಮುಖಂಡ ಎಲ್.ಕೆ. ಅಡ್ವಾಣಿ ದೇಶದ ಮಠ ಮಂದಿರಗಳು ಹಾಗೂ ದೇಶೀಯ ಬ್ಯಾಂಕ್‌ಗಳಲ್ಲಿರುವ ಕಪ್ಪುಹಣದ ಬಗ್ಗೆ ಮೌನ ವಹಿಸಿರುವುದರ ಹಿಂದಿನ ಉದ್ದೇಶ ಏನು ಎಂದು ಪ್ರಶ್ನಿಸಿದ್ದಾರೆ.

ತುಮಕೂರಿನ ಟೌನ್‌ಹಾಲ್ ವೃತ್ತದಲ್ಲಿ ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗೆ, ಅಭಿವೃದ್ಧಿಗೆ ಒತ್ತಾಯಿಸಿ, ಭ್ರಷ್ಟಾಚಾರ ಕಡಿವಾಣಕ್ಕೆ ಆಗ್ರಹಿಸಿ, ಬೆಲೆ ಏರಿಕೆ ವಿರೋಧಿಸಿ ಹಮ್ಮಿಕೊಂಡಿದ್ದ ಸಿಪಿಐಎಂ 14ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ವಿದೇಶಿ ಕಪ್ಪು ಹಣ ಹೇಗೆ ಬಂತು ಎಂದು ಪ್ರಶ್ನಿಸುವ ಅಡ್ವಾಣಿ ಅವರಿಗೆ ದೇಶದ ಒಳಗಿನ ಅಕ್ರಮ ಸಂಪತ್ತು ಕಾಣುತ್ತಿಲ್ಲ. ಕೇಂದ್ರದಲ್ಲಿ ತಮ್ಮದೇ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಬಂಡವಾಳಗಾರರಿಗೆ ತೆರಿಗೆ ವಿನಾಯಿತಿ ನೀಡುವಂತ ಕಾನೂನು ಜಾರಿಗೊಳಿಸಿದ್ದರಿಂದಲೇ ವಿದೇಶಿ ಬ್ಯಾಂಕ್‌ಗಳಲ್ಲಿ ಕಪ್ಪು ಹಣ ಇಡುವವರ ಪ್ರಮಾಣ ಹೆಚ್ಚಾಯಿತು. ಕಪ್ಪುಹಣದ ತೊಟ್ಟಿಲು ಮಾರಿಷಸ್ ದ್ವೀಪದ ಮೂಲಕ ದೇಶದ ಹಣ ವಿದೇಶಕ್ಕೆ ಹರಿದು ಹೋಗುತ್ತಿದೆ. ಇದ್ಯಾವುದೂ ಅಡ್ವಾಣಿ ಅವರಿಗೆ ನೆನಪಾಗುತ್ತಿಲ್ಲ ಎಂದು ಟೀಕಿಸಿದರು.

ನಮ್ಮ ದೇಶದ ಬ್ಯಾಂಕ್‌ಗಳಲ್ಲಿ, ಮಠಗಳಲ್ಲಿ, ದೇವಾಲಯಗಳಲ್ಲಿ ಅಕ್ರಮ ಸಂಪತ್ತು, ಕಪ್ಪುಹಣ ಇರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದರ ಬಗ್ಗೆ ಬಿಜೆಪಿ ಮತ್ತು ಅಡ್ವಾಣಿಯಂಥ ನಾಯಕರು ಚಕಾರವೆತ್ತುತ್ತಿಲ್ಲ. ತಿರುಪತಿ, ಧರ್ಮಸ್ಥಳ, ಮಂತ್ರಾಲಯ, ಉಡುಪಿ, ತುಮಕೂರಿನ ಮಠಗಳ ಆಸ್ತಿ, ಇರುವ ಸಂಪತ್ತು ಎಷ್ಟು ಎಂಬ ಬಗ್ಗೆ ಲೆಕ್ಕವಿಲ್ಲ. ಯಾವ ಮಠಗಳು, ದೇವಾಲಯಗಳು ಎಷ್ಟು ತೆರಿಗೆ ಕಟ್ಟಿವೆ ಎಂಬುದನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಲಿ. ಸರ್ಕಾರಕ್ಕೆ ಲೆಕ್ಕ ಕೊಡದಿದ್ದರೆ ಅಲ್ಲಿ ಎಷ್ಟು ಸಂಪತ್ತಿದೆ ಎಂಬುದು ತಿಳಿಯುತ್ತದೆ. ಈ ಹಣವನ್ನು ಏನೆಂದು ಕರೆಯುತ್ತೇವೆ. ಇದಕ್ಕೆ ಬಿಜೆಪಿಯ ನಿಲುವು ಸ್ಪಷ್ಟಡಿಸಬೇಕು ಎಂದು ಒತ್ತಾಯಿಸಿದರು.



ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಜೈಲಿಗೆ ಹೋಗುತ್ತಿದ್ದಂತೆ ಸ್ವಾಮಿಗಳ ದಂಡು ಅಲ್ಲಿಗೆ ಹೋಗುತ್ತದೆ. ಆರೂವರೆ ಕೋಟಿ ಕನ್ನಡಿಗರಿಗೆ ಆಶೀರ್ವಾದ ಮಾಡಬೇಕಾದ ಕೆಲವು ಹಿರಿಯ ಸ್ವಾಮೀಜಿಗಳು ಕೇವಲ ಯಡಿಯೂರಪ್ಪ, ಸೋಮಣ್ಣನವರಿಗೆ ಮಾತ್ರ ಆಶೀರ್ವಾದ ಮಾಡುತ್ತಾರೆ. ಸ್ವಾರ್ಥ, ಸ್ವಜಾತಿ ಪ್ರೇಮ ಇಲ್ಲಿ ವ್ಯಕ್ತವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳೇ ಭ್ರಷ್ಟಾಚಾರ ವ್ಯಾಪಕವಾಗಲು ಕಾರಣ. ದೇಶದ ಆರ್ಥಿಕ ನೀತಿಗಳು ಬಡವರು, ಶ್ರೀಮಂತರ ನಡುವೆ ಅಗಾಧ ಅಂತರ ಸೃಷ್ಟಿ ಮಾಡುತ್ತಿವೆ. ಹೀಗಾಗಿ ಕೇಂದ್ರ ಸರ್ಕಾರದ ನೀತಿಗಳು ಬದಲಾಗದೆ ಭ್ರಷ್ಟಾಚಾರ ನಿಯಂತ್ರಣ ಮಾಡಲು ಸಾಧ್ಯವಿಲ್ಲ.

ದೇಶದ ಆರ್ಥಿಕ ವ್ಯವಸ್ಥೆ ದಿವಾಳಿ ಎದ್ದಿದೆ. ಸಂಪತ್ತು ಕೆಲವೇ ಕೆಲವು ಮಂದಿಯ ಕೈ ಸೇರುತ್ತಿದೆ. ಅವರ ಸಂಪತ್ತು ವೃದ್ಧಿಯಾಗುತ್ತಿದೆ. ಆದರೆ ಇದನ್ನೇ ತಲಾದಾಯ, ದೇಶದ ಅಭಿವೃದ್ಧಿ ಸೂಚ್ಯಂಕ ಎಂದು ಬಿಂಬಿಸಲಾಗುತ್ತಿದೆ. ಆದರೆ ನೂರಕ್ಕೆ ಶೇಕಡ 80 ಜನರಿಗೆ ಎರಡು ಹೊತ್ತಿನ

ಪುಟ 15ಕ್ಕೆ

ಹೋರಾಟಗಳಿಗೆ ಶುಭಾಶಯಗಳು

ಲೋಕಸಭೆ ಲೋಕಪಾಲ ಮಸೂದೆಯನ್ನು ಅಂಗೀಕರಿಸಿದೆ, ಅಣ್ಣಾ ಹಝಾರೆ ತಮ್ಮ ಉಪವಾಸವನ್ನು ನಿಲ್ಲಿಸಿದ್ದಾರೆ. ಆದರೆ ಭ್ರಷ್ಟಾಚಾರದ ವಿರುದ್ಧ ಪರಿಣಾಮಕಾರಿ ಹೋರಾಟ ಮುಂದುವರೆಯಬೇಕಾಗಿದೆ. ಏಕೆಂದರೆ ಭ್ರಷ್ಟಾಚಾರವನ್ನು ಎದುರಿಸುವುದು ಕೇವಲ ಒಂದು ನೈತಿಕ ಪ್ರಶ್ನೆಯಷ್ಟೇ ಅಲ್ಲ. ಇದು ಅಪಾರ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಸಾಮಾಜಿಕ ಅಭಿವೃದ್ಧಿಯಿಂದ ಬೇರೆಡೆಗೆ ತಿರುಗಿಸಿ ನಮ್ಮ ಜನಗಳಿಗೆ ಒಂದು ಉತ್ತಮ ಬದುಕು ಸಿಗದಂತೆ ಮಾಡುತ್ತದೆ. ಈ ಹೋರಾಟವನ್ನು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರಕ್ಕೆ ಇದುವರೆಗೆ ಕಂಡು ಕೇಳರಿಯದ ಹಾದಿಗಳನ್ನು ಸತತವಾಗಿ ತೆರೆದು ಕೊಡುತ್ತಿರುವ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟದೊಂದಿಗೆ ಬೆಸೆಯದಿದ್ದರೆ ಇದು ಪರಿಣಾಮಕಾರಿಯಾಗುವುದಿಲ್ಲ.

ಲೋಕಪಾಲ ವ್ಯಾಪ್ತಿಗೆ ಭಾರಿ ಬಂಡವಾಳಿಗರು ಬೇಡವೇಕೆ?

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಡಿಸೆಂಬರ್ 29 ಸಂಚಿಕೆಯ ಸಂಪಾದಕೀಯ

ನಾವು ಮುದ್ರಣಕ್ಕೆ ಹೋಗುವ ವೇಳೆಗೆ 2011 ಮುಗಿದು 2012 ಆರಂಭವಾಗುತ್ತಿದೆ. ಇದರೊಂದಿಗೆ ನಮ್ಮ ಬದುಕಿನ ಸ್ಥಾನಮಾನವನ್ನು ನಿರ್ಧರಿಸಲಿರುವ ಕನಿಷ್ಟ ಮೂರು ಮಹತ್ವದ ಬೆಳವಣಿಗೆಗಳು ಅನಾವರಣಗೊಳ್ಳುತ್ತಲಿವೆ.

ಮೊದಲನೆಯದಾಗಿ, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸಲು ಅಖಿಲ ಭಾರತ ಮಟ್ಟದಲ್ಲಿ ಲೋಕಪಾಲ ಮತ್ತು ರಾಜ್ಯ ಮಟ್ಟದಲ್ಲಿ ಲೋಕಾಯುಕ್ತ ಸಂಸ್ಥೆಗಳನ್ನು ರಚಿಸುವ ಶಾಸನವನ್ನು ಲೋಕಸಭೆ ಅಂಗೀಕರಿಸಿದೆ. ಈ ಸಂಸ್ಥೆಗಳ ರಚನೆಗೆ ಒಂದು ಮಸೂದೆ ಭಾರತೀಯ ಸಂಸತ್ತಿನ ಮುಂದೆ ಮೊದಲ ಬಾರಿಗೆ ಬಂದದ್ದು ಮೇ 9, 1968ರಲ್ಲಿ. ಆದರೆ ಆಯ್ಕೆ ಸಮಿತಿಯ ವರದಿಯ ಆಧಾರದ ಮೇಲೆ ಅದನ್ನು ಪಾಸು ಮಾಡುವ ಮೊದಲೇ ನಾಲ್ಕನೇ ಲೋಕಸಭೆಯ ಅವಧಿ ಮುಗಿದು ಹೋಯಿತು. ಅದೇ ರೀತಿ ಆಗಸ್ಟ್ 11, 1971ರಂದು ಮಂಡಿಸಿದ ಮಸೂದೆ ಐದನೇ ಲೋಕಸಭೆಯ ವಿಸರ್ಜನೆಯಿಂದಾಗಿ ರದ್ದಾಯಿತು. ತುರ್ತು ಪರಿಸ್ಥಿತಿಯ ನಂತರದ ಜನತಾ ಸರಕಾರದ ಅವಧಿಯಲ್ಲಿ ಜುಲೈ 28, 1977ರಂದು ಮಂಡಿಸಿದ ಮಸೂದೆ ಕೂಡ ಇನ್ನೊಂದು ಸೆಲೆಕ್ಟ್ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸುವ ಮೊದಲೇ ಆರನೇ ಲೋಕಸಭೆಯ ವಿಸರ್ಜನೆಯೊಂದಿಗೆ ಲುಪ್ತಗೊಂಡಿತು. ಮತ್ತೆ ಆಗಸ್ಟ್ 26, 1985ರಂದು ಮಂಡಿಸಿದ ಒಂದು ಮಸೂದೆಯೂ ಜಂಟಿ ಆಯ್ಕೆ ಸಮಿತಿಯ ಶಿಫಾರಸುಗಳ ಮೇಲೆ ಒಮ್ಮತವಿಲ್ಲದ್ದರಿಂದ ಬೆಳಕು ಕಾಣಲಿಲ್ಲ. ಬೊಫೋರ್ಸ್ ಹಗರಣದಿಂದಾಗಿ ರಾಜೀವ ಗಾಂಧಿ ಸರಕಾರದ ಸೋಲಿನ ನಂತರ ಸಿಪಿಐ(ಎಂ)ನ ಒತ್ತಾಯದಿಂದಾಗಿ ಡಿಸೆಂಬರ್ 29, 1989ರಂದು ಒಂದು ಲೋಕಪಾಲ ಮಸೂದೆಯನ್ನು ಮಂಡಿಸಲಾಯಿತು. ಇದು ಕೂಡ ಮಾರ್ಚ್ 1991ರಲ್ಲಿ ಲೋಕಸಭೆಯ ವಿಸರ್ಜನೆಯೊಂದಿಗೆ ರದ್ದುಗೊಂಡಿತು. 1996ರಿಂದ ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ, ಮತ್ತೆ ಸಿಪಿಐ(ಎಂ) ಮತ್ತು ಎಡಪಕ್ಷಗಳ ಒತ್ತಾಯದಿಂದ ಸಪ್ಟಂಬರ್ 13, 1996ರಂದು ಒಂದು ಮಸೂದೆಯ ಮಂಡನೆಯಾಯಿತು. ಅದರ ವಿವರವಾದ ಪರೀಕ್ಷಣೆ ನಡೆಸಿದ ಸಂಸದೀಯ ಸ್ಥಾಯೀ ಸಮಿತಿ ಮೇ 1997ರಲ್ಲಿ ತನ್ನ ವರದಿ ಸಲ್ಲಿಸಿತು. ಆದರೆ ಮತ್ತೆ ಇದನ್ನು ಪರಿಶೀಲಿಸುವ ಮೊದಲೇ ಹನ್ನೊಂದನೆ ಲೋಕಸಭೆಯ ವಿಸರ್ಜನೆಯಿಂದಾಗಿ ಇದೂ ರದ್ದಾಯಿತು.1996ರ 13 ದಿನಗಳ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದ ಮೊದಲ ಕಂತಿನ ನಂತರ 13 ತಿಂಗಳ ಎನ್‌ಡಿಎ ಸರಕಾರದ ಎರಡನೇ ಕಂತಿನಲ್ಲಿ ಆಗಸ್ಟ್ 1998ರಲ್ಲಿ ಒಂದು ಮಸೂದೆಯನ್ನು ಮಂಡಿಸಿತು. ಅದು ಕೂಡ ಎಪ್ರಿಲ್ 1999ರಲ್ಲಿ 12ನೇ ಲೋಕಸಭೆಯ ವಿಸರ್ಜನೆಯಿಂದಾಗಿ ರದ್ದಾಯಿತು. ಎನ್‌ಡಿಎ ಸರಕಾರದ ಮೂರನೇ ಕಂತಿನಲ್ಲಿ ಆಗಸ್ಟ್ 2001 ರಲ್ಲಿ ಮಂಡಿಸಿದ ಮಸೂದೆಯನ್ನು ಪ್ರಣಬ್ ಮುಖರ್ಜಿ ನೇತೃತ್ವದ ಸಂಸದೀಯ ಸ್ಥಾಯಿ ಸಮಿತಿ ವಿವರವಾಗಿ ಪರೀಕ್ಷಿಸಿತು. ಅದರ ವರದಿಯನ್ನು ಮಂಡಿಸಿದ ನಂತರ ಪೂರ್ಣ ಎರಡು ವರ್ಷಗಳ ಕಾಲ ಎನ್‌ಡಿಎ ಸರಕಾರ ಇದ್ದರೂ ಬಿಜೆಪಿ ಈ ಬಗ್ಗೆ ಶಾಸನ ಮಾಡುವ ಯೋಚನೆ ಮಾಡಲಿಲ್ಲ. ಇದೀಗ ಒಂಭತ್ತನೇ ಬಾರಿಗೆ ಲೋಕಪಾಲ ಮತ್ತು ಲೋಕಾಯುಕ್ತ



ಮಸೂದೆ ಸಂಸತ್ತಿನ ಮುಂದೆ ಬಂದಿತ್ತು. ಆದ್ದರಿಂದ, ಒಂದರ್ಥದಲ್ಲಿ ಅಂತಿಮವಾಗಿ ಈಗ ಪ್ರಗತಿಯಾಗಿದೆ, ಲೋಕಸಭೆ ಅದನ್ನು ಅಂಗೀಕರಿಸಿದೆ.

ಎರಡನೆಯದಾಗಿ, ಅದು ರಾಜ್ಯಸಭೆಗೆ ಪರಿಶೀಲನೆಗೆ ಬರುವುದರಿಂದ, ಸಿಪಿಐ(ಎಂ) ಈ ಸಂಸ್ಥೆಗಳನ್ನು ಹೆಚ್ಚು ಪರಿಣಾಮಕಾರಿಗೊಳಿಸಲು ಕನಿಷ್ಟ ನಾಲ್ಕು ವಿಷಯಗಳ ಮೇಲೆ ಮತದಾನದ ಮೂಲಕ ತಿದ್ದುಪಡಿಗಳಿಗೆ ಆಗ್ರಹ ಪಡಿಸಲಿದೆ. ಇದು, ಈ ಸಂಸ್ಥೆಗಳ ಸಿಬ್ಬಂದಿಯನ್ನು ಆಯ್ಕೆ ಮಾಡುವ ಮತ್ತು ನೇಮಿಸುವ ಪರಿಗೆ , ಆಮೂಲಕ ಅವನ್ನು ಹೆಚ್ಚು ಪ್ರಜಾಸತ್ತಾತ್ಮಕ ಮತ್ತು ಪ್ರಾತಿನಿಧಿಕಗೊಳಿಸುವುದಕ್ಕೆ, ಭ್ರಷ್ಟಾಚಾರದ ಪಿಡುಗನ್ನು ಎದುರಿಸಿ ತಪ್ಪಿತಸ್ಥರನ್ನು ಶಿಕ್ಷಿಸುವಾಗ ಹೊರಗಣ ಪ್ರಭಾವಗಳು ನಡೆಯದಂತೆ ಒಂದು ಪರಿಣಾಮಕಾರಿ ಮತ್ತು ಸ್ವತಂತ್ರ ತನಿಖಾ ವ್ಯವಸ್ಥೆಯನ್ನು ಒದಗಿಸುವುದಕ್ಕೆ ಸಂಬಂಧಪಟ್ಟದ್ದು; ಕಾರ್ಪೊರೇಟುಗಳನ್ನು ಮತ್ತು ವಿದೇಶಿ ನಿಧಿಯಿಂದ ನಡೆಯುವ ಎನ್‌ಜಿಒಗಳನ್ನು ಇದರ ವ್ಯಾಪ್ತಿಯೊಳಕ್ಕೆ ತರುವುದಕ್ಕೆ ಸಂಬಂಧಪಟ್ಟದ್ದು ಮತ್ತು ಒಂದು ಸಂಸದೀಯ ಶಾಸನದ ಮೂಲಕ ರಾಜ್ಯಗಳ ಸಂವಿಧಾನಿಕ ಹಕ್ಕುಗಳ ಅತಿಕ್ರಮಣ ಅಥವ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದಕ್ಕೆ ಸಂಬಂಧಿಸಿದ್ದು.

ಇವುಗಳಲ್ಲಿ ಒಂದು ಅಥವ ಹೆಚ್ಚು ತಿದ್ದುಪಡಿಗಳು ಅಂಗೀಕಾರವಾದರೆ, ಈ ಶಾಸನ ರಾಜ್ಯಸಭೆ ತಿದ್ದುಪಡಿಗೊಳಿಸಿದ ಸ್ವರೂಪದಲ್ಲಿ ಲೋಕಸಭೆಗೆ ಮತ್ತೆ ಹೋಗುತ್ತದೆ. ಆಗ ಸರಕಾರ ಈ ಸಂಸ್ಥೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಒಂದು ಜಂಟಿ ಆಯ್ಕೆ ಸಮಿತಿ ರಚಿಸಬಹುದು ಅಥವ ಇದನ್ನು ಪರಿಶೀಲಿಸಿ, ಅಂತಿಮವಾಗಿ ಅಂಗೀಕರಿಸಲು ಎರಡೂ ಸದನಗಳ ಜಂಟಿ ಅಧಿವೇಶನವನ್ನು ಕರೆಯ ಬಹುದು.

ಏನೇ ಆಗಲಿ, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸುವ ಸಂಸ್ಥೆಗಳನ್ನು ರಚಿಸುವ ನಾಲ್ಕು ದಶಕಗಳ ಹೋರಾಟದ ನಂತರ 2012ರಲ್ಲಿ ಕೊನೆಗೂ, ಅವನ್ನು ರಚಿಸಲು ಸಕಲ ಸಿದ್ಧತೆ ನಡೆದಿರುವಂತೆ ಕಾಣುತ್ತದೆ. ಅವಿರತ ಸಾರ್ವಜನಿಕ ಒತ್ತಡದ ಮೂಲಕ ಇದು ಸಂಭವಿಸುವಂತೆ ಮಾಡಬೇಕಾಗಿದೆ.

ಮೂರನೆಯದಾಗಿ, ನಾವು ಮುದ್ರಣಕ್ಕೆ ಹೋಗುತ್ತಿರುವಾಗ, ಅಣ್ಣಾ ಹಝಾರೆಯವರು ಸಂಸತ್ತಿನ ಅಧಿವೇಶನಕ್ಕೆ ಹೊಂದಿಕೊಂಡು ಆರಂಭಿಸಿದ್ದ ತಮ್ಮ ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದಾರೆ, ಹಾಗೂ ತಮ್ಮ ಜೈಲ್ ಭರೋ ಚಳುವಳಿಯನ್ನು ಅಮಾನತುಗೊಳಿಸಿರುವುದಾಗಿ ಪ್ರಕಟಿಸಿದ್ದಾರೆ. ಆದರೆ ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ತಾನು ಪ್ರಚಾರ ನಡೆಸುವುದಾಗಿ ಹೇಳಿದ್ದಾರೆ. ಇದು ಸ್ವಾಗತಾರ್ಹ. ಒಂದು ಪ್ರಜಾಪ್ರಭುತ್ವದಲ್ಲಿ, ಅದರ ಸ್ಪಂದನಶೀಲತೆ ಅವಲಂಬಿಸಿರುವುದು ರಾಜಕೀಯ ಪ್ರಕ್ರಿಯೆಯಲ್ಲಿ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸುತ್ತಾರೆ ಎಂಬುದನ್ನು. ಅಷ್ಟರ ಮಟ್ಟಿಗೆ ಶ್ರೀಯುತ ಹಝಾರೆ ಮತ್ತು ಅವರ 'ತಂಡ' ತಮ್ಮ ರಾಜಕೀಯ ನಿಲುವುಗಳನ್ನು ಬಹಿರಂಗವಾಗಿ ಮುಂದಿಟ್ಟು ಅವರು ಸರಿಯೋ ಅಲ್ಲವೋ ಎಂಬುದರ ನಿರ್ಧಾರವನ್ನು ಜನತೆಗೆ ಬಿಡುತ್ತಾರೆ ಎಂಬ ನಿರೀಕ್ಷೆಯನ್ನು ಇಟ್ಟು ಕೊಳ್ಳಬಹುದು.

ಆದರೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಈ ಸ್ವಾಗತಾರ್ಹ ಪ್ರಚಾರಾಂದೋಲನದಲ್ಲಿ ಕಾಣೆಯಾಗಿರುವ ಅಥವ ಬದಿಗೆ ತಳ್ಳಲ್ಪಟ್ಟಿರುವ ಒಂದು ನಿರ್ಣಾಯಕ ಪ್ರಶ್ನೆಯೆಂದರೆ, ನಾವಿಂದು ಕಾಣುತ್ತಿರುವ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಮತ್ತು ಮಹಾಹಗರಣಗಳಿಗೂ, ಕಳೆದ ಎರಡು ದಶಕಗಳಲ್ಲಿ ಅನುಸರಿಸಿರುವ ಆರ್ಥಿಕ ಸುಧಾರಣೆಗಳ ದಿಕ್ಪಥಕ್ಕೂ ನೇರ ಸಂಬಂಧವಿದೆ ಎಂಬ ಸಂಗತಿ. ಭ್ರಷ್ಟಾಚಾರ ಅನಾದಿ ಕಾಲದಿಂದ ನಮ್ಮ ಸಮಾಜಕ್ಕೆ ಅಂಟಿರುವ ಒಂದು ಶಾಪ. ಆದರೆ ನಾವಿಂದು ಕಾಣುತ್ತಿರುವ ಭ್ರಷ್ಟಾಚಾರ ಒಂದು ಗುಣಾತ್ಮಕವಾಗಿ ಭಿನ್ನವಾದದ್ದು, ಇನ್ನೂ ಮೇಲಿನ ಸ್ವರೂಪದ್ದು. ಈ ಆರ್ಥಿಕ ಸುಧಾರಣೆಗಳ ಫಲವಾಗಿ ನೀಚತನಕ್ಕೆ ಮತ್ತು 'ಬೇಗನೇ ಹಣ ಪೇರಿಸಲು' ತೆರೆದಿರುವ ಅವಕಾಶಗಳಿಗೆ ಸಂಬಂಧಪಟ್ಟ ಸ್ವರೂಪವಿದು. ಉನ್ನತ ಸ್ಥಾನಗಳಲ್ಲಿ ಇಂತಹ ಭ್ರಷ್ಟಾಚಾರದ ಭಾಗವಾಗಿರುವ ಕಾರ್ಪೊರೇಟ್‌ಗಳನ್ನು ಮತ್ತು ಖಾಸಗಿಯವರನ್ನು ಲೋಕಪಾಲದ ವ್ಯಾಪ್ತಿಯೊಳಗೆ ತರಬೇಕಾದ ಅಗತ್ಯವನ್ನು ಎತ್ತಿ ತೋರುತ್ತಿರುವುದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ. ಹೀಗೆ ಭ್ರಷ್ಟಾಚಾರವನ್ನು ಎದುರಿಸುವುದು ಕೇವಲ ಒಂದು ನೈತಿಕ ಪ್ರಶ್ನೆಯಷ್ಟೇ ಅಲ್ಲ. ಇದು ಅಪಾರ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಸಾಮಾಜಿಕ ಅಭಿವೃದ್ಧಿಯಿಂದ ಬೇರೆಡೆಗೆ ತಿರುಗಿಸಿ ನಮ್ಮ

ಪುಟ 15 ಕ್ಕೆ

ಸಿಪಿಐ(ಎಂ) ಪಕ್ಷದ ಬಳ್ಳಾರಿ ಜಿಲ್ಲಾ ಸಮ್ಮೇಳನ ಇತ್ತೀಚೆಗೆ ಯಶಸ್ವಿಯಾಗಿ ನಡೆದಿದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯ ಜನ ಜೀವನದ ಕುರಿತ ಗಂಭೀರ ವಿಶ್ಲೇಷಣೆ – ಚರ್ಚೆ ನಡೆದಿದೆ. ವರದಿ ಆಯ್ದ ಭಾಗ ನಿಮಗಾಗಿ

ಬಳ್ಳಾರಿ ಎಂಬೋ ಲೂಟಿಕೋರರ 'ಗಣಿ ರಾಜ್ಯ'ದೊಳಗೆ ದುರ್ಬರಗೊಂಡ ಜನರ ಬದುಕು

ಜಿಲ್ಲೆಗೆ ಆಗಮಿಸುತ್ತಿರುವ ಭಾರೀ ಬಂಡವಾಳ–ಅದರ ಪರಿಣಾಮಗಳು :


ಕರ್ನಾಟಕ ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಭಾರೀ ಕೈಗಾರಿಕೆ ಸ್ಥಾಪನೆ ಹೆಸರಿನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಕಳೆದ 2009 ರಲ್ಲಿ ಬೆಂಗಳೂರಿನಲ್ಲಿ ಸಂಘಟಿಸಿ ಹಲವು ಒಪ್ಪಂದಗಳನ್ನು ಮಾಡಿಕೊಂಡ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಗೆ ಮುಖ್ಯವಾಗಿ ಉಕ್ಕುವಲಯ ಬಲಪಡಿಸುವ ದಿಶೆಯಲ್ಲಿ ಸುಮಾರು 1.1/2 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಮತ್ತು ಇದಕ್ಕಾಗಿ ಸುಮಾರು 40,000 ಎಕರೆ ಭೂಪ್ರದೇಶದ ಸ್ವಾದಿನಕ್ಕೆ ಮುಂದಾಗಿದೆ. ಇದೇ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 53 ನ್ನು ಎಕ್ಸಪ್ರೆಸ್ ಹೆದ್ದಾರಿಯನ್ನಾಗಿಸುವ ಕೆಲಸಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ.

ಇದರಂತೆ ಈಗಾಗಲೇ ಸುಮಾರು 20,000 ಎಕರೆಗೂ ಅಧಿಕ ಭೂಮಿಯನ್ನು ಕೆ.ಐ.ಎ.ಡಿ.ಬಿ ಯು ಮಿಥ್ಥಾಲ್, ಬ್ರಾಹ್ಮಿಣಿ, ಜಿಂದಾಲ್ ಹಾಗೂ ಭೂಷಣ್ ಮುಂತಾದ ಸ್ಟೀಲ್‌ಗಾಗಿ ಸ್ಥಳ ವಶಪಡಿಸಿಕೊಳ್ಳಲಾಗಿದೆ. ಅದೇ ರೀತಿ ಕೆ.ಪಿ.ಸಿ.ಎಲ್ ಮತ್ತು ಎನ್.ಎಂ.ಡಿ.ಸಿ. ಗಾಗಿ ಯೂ ಭೂ ಸ್ವಾಧಿನ ಕಾರ್ಯಕ್ಕೆ ಸಕ್ರಿಯದಲ್ಲಿದೆ. ಇದು ಬಳ್ಳಾರಿಯ ಹಾಗೂ ಪ್ರದೇಶದಂತ ಆರಂಭವಾಗಿ ಹೊಸಪೇಟೆಯ ಅಥವಾ ಕೊಪ್ಪಳದ ಬಾರ್ಡರ್‌ವರೆಗೆ ಅದೇ ರೀತಿ ಹೊಸಪೇಟೆಯಿಂದ ಆರಂಭವಾಗಿ ಹಗರಿಬೊಮ್ಮನಹಳ್ಳಿಯವರೆಗೆ ಹಾಗೆಯೇ ತೋರಣಗಲ್ಲು ನಿಂದ ಆರಂಭವಾಗಿ ಸಂಡೂರು – ಯಶವಂತಪುರದವರೆಗೆ ವ್ಯಾಪಿಸಿದೆ ಮತ್ತು ಉಕ್ಕುವಲಯದ ಹಿನ್ನೆಯಲ್ಲಿ ಜಾಗನೂರು , ಸಿರಿವಾರ ಪ್ರದೇಶದಲಿ ಅಂತರಾಷ್ಟ್ರೀಯ ಗುಣಾಮಟ್ಟದ ವಿಮಾನ ನಿಲ್ದಾಣಕ್ಕಾಗಿಯೂ ಸುಮಾರು 600 ಕ್ಕೂ ಅಧಿಕ ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಇಲ್ಲಿ ಬರುವ ಕೈಗಾರಿಕೆಗಳಿಗಾಗಿ ತುಂಗಭದ್ರ ಜಲಾಶಯದ ನೀರನ್ನು ಬಳಕೆ ಮಾಡಲು ಉದ್ದೇಶಗಳು ಷ್ಪಷ್ಟಗೊಂಡವು.

ಈ ಬೆಳವಣಿಗೆಯ ಸಂದರ್ಭದ್ದಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಭಾರೀ ಸಂತೋಷ ಉಂಟಾಯಿತು. ಒಂದೆಡೆ ಬಂಡವಾಳದ ಭೂಸ್ವಾಧೀನದ ನೀತಿಯು , ಬಂಡವಾಳದ ಭೂ ಕಬಳಿಕೆಯು ಸ್ವಾರ್ಥವು ಮುಖಾಮುಖಿಯಾದರೆ, ಇನ್ನೊಂದೆಡೆ ಜಿಲ್ಲಾ ಉಸ್ತುವಾರಿ ಸಚಿವರ ಸರ್ವಾಧಿಕಾರ ಸ್ವಾರ್ಥ–ಸ್ವಜನಪಕ್ಷಪಾತ– ರೈತರ ಹಿತಾಸಕ್ತಿ ಜನತೆಯ ಪ್ರಜಾಸತ್ತೆತೆಯ ಹಕ್ಕುಗಳು ಇನ್ನೊದೆಡೇ ಮುಖಾಮುಖಿಯಾಗಿದ್ದವು. ಇವುಗಳು ಒಂದೆಡೆ ರಾಜ್ಯ ಹಾಗೂ ಅಖಿಲ ಭಾರತ ಬಿ.ಜೆ.ಪಿ – ಆರ್.ಎಸ್.ಎಸ್. ಮತ್ತು ಜನಾರ್ಧನ ರೆಡ್ಡಿ ಕುಟುಂಬದ ಲೂಟಿ ಕೋರತನವನ್ನು ಬಯಲುಗೊಳಿಸಿವೆ.

ಬೆಳೆದ ಗಣಿ ಲೂಟಿ, ಗಡಿ ಒತ್ತುವರಿ– ಗಣಿದಬ್ಬಾಳಿಕೆ– ಅರಣ್ಯನಾಶ

ಈ ಅವಧಿಯಲ್ಲಿ ರಾಜಕೀಯ ಅಧಿಕಾರವನ್ನು ದುರುಪಯೋಗಗೊಳಿಸಿಕೊಂಡ ಒ.ಎಂ.ಸಿ –ಎ.ಎಂ.ಸಿ ಹಾಗೂ ಡಿ.ಎಂ.ಸಿಗಳು ಮುಖ್ಯವಾಗಿ ವ್ಯಾಪಕವಾದ ಗಣಿಲೂಟಿಯಲ್ಲಿ ತೊಡಗಿದ್ದವು ಒ.ಎಂ.ಸಿ ಯು ಕರ್ನಾಟಕ ಭೂಪ್ರದೇಶವನ್ನು ಆಂದ್ರಕ್ಕೆ ಬರುವಂತೆ ಬದಲಾಯಿಸಿಕೊಂಡು ಕರ್ನಾಟಕದ ಗಣಿ ಸಂಪನ್ಮೂಲದ ಲೂಟಿ ಮಾಡಿದ ಆರೋಪ ಎದುರಿಸುತ್ತಿದೆ. ಅದು ಮಾತ್ರವೇ ಅಲ್ಲಾ ಸುಮಾರು 600 ಮೀಟರ್‌ಗಳಷ್ಟು ಎತ್ತರ ಪ್ರದೇಶದಲ್ಲಿ ನೆಲಮಟ್ಟದಿಂದ 200 ರಿಂದ 250 ಮೀಟರ್ ಎತ್ತರ ಪ್ರದೇಶದ ಗಡಿಯ ಆಂಧ್ರ ನೆಲದ ಮೇಲಿದ್ದ ಹಳೆಯ ಸುಗ್ಗಲಮ್ಮನ ದೇವಸ್ಥಾನವನ್ನು ಬ್ಲಾಸ್ಟ್‌ಮಾಡಿ ಅದರ ತಳದಲ್ಲಿಯೇ ಭಾರೀ ಗಣಿಗಾರಿಕೆ ನಡೆಸಿ ಸುಗ್ಗಲಮ್ಮ ಬೆಟ್ಟದ ಮೇಲ್ ತುಂದಿಯಿಂದ ಕೆಳಮಟ್ಟಕ್ಕೆ ಬಲವಂತವಾಗಿ ತಳ್ಳಲಾಗಿದೆ ಇಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಭೂನೆಲೆಯ ಸುಮಾರು 25ಕ್ಕೂ ಹೆಚ್ಚು ಗ್ರಾಮಗಳ ಹತ್ತಾರು ಸಾವಿರ ರೈತರ ಕುಟುಂಬಗಳಿಗೆ ಸಾವಿರಾರು ಕೋಟಿ ನಷ್ಟು ಉಂಟುಮಾಡಿದೆ. ಅದೇ ರೀತಿ ಇದು ಇತರೇ ಗಣಿಗಾರಿಕೆಯಲ್ಲಿ ತೊಡಗಿದ ಕಂಪನಿಗಳ ಗಣಿಭೂಪ್ರದೇಶಗಳನ್ನು ಒತ್ತುವರಿ ಮಾಡಿ ದೌರ್ಜನ್ಯ ಏಸಗಿದ ಆರೋಪಗಳನ್ನು ಎದುರಿಸುತ್ತಿದೆ.



ಮಾತ್ರವಲ್ಲ ಡಿ.ಎಂ.ಸಿ ಹಾಗೂ ಎ.ಎಂ.ಸಿ ಗಳೂ ಅದರ ಸಹೋದರ ಕಂಪನಿಗಳಾಗಿದ್ದು ಜಿಲ್ಲೆಯ ಇತರೇ 39 ಗಣಿಕಂಪನಿಗಳನ್ನು ತನ್ನ ಆರ್ಥಿಕ ಹಾಗೂ ತೋಳ್ಬಲ ಉಪಯೋಗಿಸಿ ಒತ್ತಡ ಹೇರಿ ರೈಸಿಂಗ್ ಕಂಸಟ್ ಪಡೆದಿವೆಯೆಂಬ ಆರೋಪಗಳನ್ನು ಹೊಂದಿವೆ ತನ್ನ ಜೊತೆ ಒಪ್ಪಂದಕ್ಕೆ ಬರದ ಕಂಪನಿಗಳನ್ನು ದಿಗ್ಬಂಧನ ಹಾಕಿ ಅದಿರನ್ನು ಮಾಯಮಾಡಿ ಬೆದರಿಸಿ ಆರೋಪಗಳು ಕೇಳಿಬಂದಿವೆ. ಬಲ್ದೋಟ ಕಂಪನಿಯು, ಮೋದಿ ಮತ್ತು ಟಪಲ್‌ರವರ ಕಂಪನಿಗಳು ಈ ದಿಕ್ಕಿನಲ್ಲಿ ಪ್ರತಿಭಟಿಸಿ ನಿಂತಿವೆ ಮತ್ತು ಕೆಲದೊಡ್ಡ ಕಂಪನಿಗಳು ಕಪ್ಪ ನೀಡಿ ರಾಜಿ ಮಾಡಿಕೊಂಡಿವೆಯೆನ್ನಲಾಗಿದೆ.

ಅದೇ ರೀತಿ ಸಂಡೂರಿನ ರಾಮಗಢ, ಸ್ವಾಮಿಮಲ್ಲೈ, ಪ್ರದೇಶದ ಸರ್ವೆಯೇ ಆಗದ ಪ್ರದೇಶದಲ್ಲಿ ಅರಣ್ಯ ಇಲಾಖೆ ಸರ್ವೆ ನಂಬರ್ ಇಲ್ಲಿ ಸರ್ವೆನಂಬರ್ ನೀಡಿ ಗಣಿಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

2000 ರಲ್ಲಿ ಕೇವಲ 12 ಲಕ್ಷ ಟನ್ ಮಾತ್ರ ಉತ್ಪಾದಿಸಲ್ಪಟ್ಟಿದ್ದ ಕಬ್ಬಿಣದ ಅದಿರು 2009–10 ರಲ್ಲಿ ಸಿಇಸಿ ಯು ಸುಪ್ರಿಂ ಕೋರ್ಟಿಗೆ ನೀಡಿದ ವರದಿಯಂತೆ ಸುಮಾರು 500 ಲಕ್ಷಟನ್ ಉತ್ಪಾದಿಸಲಾಗಿದೆ. ಇದರ ಜೊತೆ ಕಳ್ಳತನ ಮಾಡಲಾದ ಕಬ್ಬಿಣದ ಅದಿರಿನಿಂದಾಗಿ ಸರ್ಕಾರದ ಬೊಕ್ಕಸಕ್ಕಾದ ನಷ್ಟ 16,085 ಕೋಟಿ ಎಂದು ಕರ್ನಾಟಕದ ಲೋಕಾಯುಕ್ತರು ವರದಿ ನೀಡಿರುತ್ತಾರೆ.

132 ಬಳ್ಳಾರಿ ಜಿಲ್ಲೆಯ ಗಣಿಗಳಲ್ಲಿ 99 ಅರಣ್ಯ ಪ್ರದೇಶದಲ್ಲಿದ್ದು 1.38 ಲಕ್ಷಹೆಕ್ಟರ್‌ಗಳ ಅರಣ್ಯವನ್ನು 2009 ರಲ್ಲಿ ಸರ್ವೇ ಕೈಗೊಂಡಾಗ ಕೇವಲ 77,200 ಹೆಕ್ಟರ್ ಇರುವಂತೆ ಮಾಡಿವೆ ಎಂದು ಸಿ.ಇ.ಸಿ ಹೇಳಿದೆ. ಅವರಿಗೆ ನೀಡಲಾದ ಗಣಿಭೂಮಿ ಕೇವಲ 7220.8ಹೆಕ್ಟರ್ ಆದರೂ 10,792 ಹೆಕ್ಟರ್‌ನಷ್ಟು ಒತ್ತುವರಿ ಮಾಡಿಕೊಂಡಿವೆ ಎಂದು ಹೇಳಿದೆ ಒಟ್ಟಾರೇ ಸುಮಾರು 61ಸಾವಿರ ಹೆಕ್ಟರ್ ಅವರದೇ 1.52 ಲಕ್ಷ ಏಕರೆ ಅರಣ್ಯನಾಶ ಮಾಡಲಾಗಿದೆ.

ಬೇಲಿಕೆರೆ ಬಂದರಿನಲ್ಲಿ ಲೋಕಾಯುಕ್ತರು ಸುಮಾರು 8ಲಕ್ಷ ಟನ್ ಕಳ್ಳ ಅದಿರನ್ನೂ ಮುಟ್ಟುಗೋಲು ಹಾಕಿಕೊಂಡದನ್ನೇ ಅಗಲು ದರೋಡೆ ಮಾಡಿ ವಿದೇಶಗಳಿಗೆ ಸಾಗಿಸಲಾಗಿದೆ. ಮುಂದೇ ಗಣಿ ಲಾಭಿ ಎಂತಹ ಶಕ್ತಿಯುತವಾಗಿತ್ತು ಎಂಬುದನ್ನು ಹೇಳುತ್ತದೆ. ಸ್ವತಃ ಮುಖ್ಯಂತ್ರಿಗಳಾಗಿದ್ದ ಯಡಿಯೂರಪ್ಪನವರು ವಿಧಾನ ಸಭೆಯಲ್ಲಿ 2003–2009 ರಲ್ಲಿ 3.04 ಕೋಟಿ ಟನ್ ಕಳ್ಳತನ ಮಾಡಲಾಗಿದೆಯೆಂದು ಒಪ್ಪಿದ್ದಾರೆ. ಪರವಾನಿಗೆ ನೀಡಿದ್ದು 4,70,43,196 ಟನ್‌ಗಳಾದರೇ 7,75,33,925 ಟನ್ ರಫ್ತು ಮಾಡಲಾಗಿದೆಯೆಂದು ತಿಳಿಸಿದ್ದಾರೆ.

2005 ರಲ್ಲಿ 1,148 ಕೋಟಿ ಟನ್ ನಷ್ಟು ಕಬ್ಬಿಣದ ಅದಿರು ಇಲ್ಲಿ ಲಭ್ಯವಾಗಿದೆಯೆಂದು ಐಬಿಎಂ ಹೇಳಿದೆ ಹಾಲಿ ಇರುವ ಕೈಗಾರಿಕೆ ವರ್ಷಕ್ಕೆ 27 ಲಕ್ಷ ಟನ್ ಬೇಕಾಗಿದೆ ಮುಂಬರುವ ಕೈಗಾರಿಕೆಗಳಿಗೆ ಸುಮಾರು 500 ಲಕ್ಷಟನ್ ಬೇಕೆನ್ನಲಾಗಿದೆ ಒಟ್ಟು ಸೇರಿದರೆ 770 ಲಕ್ಷ ಟನ್ ಬೇಕಾಗಿದೆ ಇರುವ ಸಂಪನ್ಮೂಲ ಅದಕ್ಕೆ ಬಳಸಿದರೂ 10–15 ವರ್ಷಗಳಿಗಷ್ಟೇ ಸಲುವಂತಿದೆ ರಫ್ತು ಹೀಗೆಯೇ ಮುಂದುವರೆದರೇ ಕೆಲವೇ ವರ್ಷಗಳಲ್ಲಿ ಬರಿದಾಗಲಿದೆ.

ಬಲ್ಡೋಟಾ, ಜಿಂದಾಲ್ ನಂತಹ ಹಲವು ದೊಡ್ಡಕಂಪನಿಗಳು ಸೇರಿದಂತೆ ಎಲ್ಲಾ ಕಂಪನಿಗಳು ಕಳ್ಳತನದಲ್ಲಿ ತೊಡಗಿವೆಯೆಂದು ಸುಪ್ರೀಂ ಕೋರ್ಟ್ ಗಣಿಗಾರಿಕೆಯನ್ನು ತಾತ್ಕಲಿಕವಾಗಿ ನಿಶ್ಷೇಧಿಸಿದೆ.

ಜಿಲ್ಲೆಯಲ್ಲಿ ಸರ್ವಾಧಿಕಾರಿ ಆಡಳಿತ ಪ್ರತ್ಯೇಕ ಸಾರ್ವಭೌಮ ರಾಷ್ಟ್ರವಾಗಿದ್ದ ಬಳ್ಳಾರಿ:

ಬಳ್ಳಾರಿ ಜಿಲ್ಲೆಯ ಗಣಿಸಂಪನ್ಮೂಲದ ಲೂಟಿ ಹಾಗೂ ಮತಿಯಾ ಆಡಳಿತದಿಂದ ಜನತೆ ಅನುಭವಿಸಿದ್ದನ್ನು ಮುಂದೆ ಲೋಕಾಯುಕ್ತ ವರದಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಇರಲಿಲ್ಲ ಮಾತ್ರವಲ್ಲ ಅದೊಂದು ಪ್ರತ್ಯೇಕ ಸಾರ್ವಭೌಮ ರಾಷ್ಟ್ರವಾಗಿತ್ತೆಂದು ಹೇಳುವ ಮೂಲ ನಮ್ಮ ಅನುಭವವನ್ನು ರಾಜ್ಯಕ್ಕೆ, ದೇಶಕ್ಕೆ, ಜಗತ್ತಿಗೆ ತೋರಿಸಿಕೊಟ್ಟರು.

ಸ್ವತಃ ಲೋಕಾಯುಕ್ತರು ಮುಟ್ಟುಗೋಲು ಹಾಕಿಕೊಂಡಿದ್ದ ಸುಮಾರು 400 ಕೋಟಿ ರೂ ಮೌಲ್ಯದ 8ಲಕ್ಷ ಟನ್ ಅದಿರು ಬೇಲಿಕೆರೆಯಲ್ಲಿ ಮಾಯವಾದದೇ ಪ್ರಥಮ ಸಾಕ್ಷಿ. ಅದೇ ರೀತಿ ಗಡಿಯ ಮೂಲ ರೇಖೆಯನ್ನು ಅಳಿಸಿಹಾಕಿ ಕರ್ನಾಟಕ , ಗಣಿಸಂಪನ್ಮೂಲದ ಪ್ರದೇಶವನ್ನು ಆಂಧ್ರ ಮತ್ತು ಕರ್ನಾಟಕದಲ್ಲಿ ಗಡಿ ನಕ್ಷೆಗಳನ್ನು ತಿದ್ದು ಪಡಿಮಾಡಿದುದು 2ನೇ ಸಾಕ್ಷಿ. ವಿಧಾನ ಸಭೆಯಲ್ಲಿ ವಿರೋಧಪಕ್ಷದ ನಾಯಕನ್ನು ತೋಳೇರಿಸಿ ಬಳ್ಳಾರಿ ಜಿಲ್ಲೆಯಲ್ಲಿ ನೋಡಿಕೊಳ್ಳುತ್ತೇವೆಂದು ಬೆದರಿಸಿದ್ದು ಮತ್ತು ಲೋಕಾಯುಕ್ತ ತನಿಖೆಯಲ್ಲಿ ತೊಡಗಿದ್ದ ಉನ್ನತ ಅಧಿಕಾರಿಯನ್ನು ಬೆದರಿಸಿದ್ದು ಪೋಲೀಸ್ ಕಂಪ್ಲೇಂಟ್ ಆಗದಂತೆ ನೋಡಿಕೊಂಡಿದು ಮತ್ತೊಂದು ಸಾಕ್ಷಿ , ಸ್ವತಃ ಮುಖ್ಯ ಮಂತ್ರಿಗಳನ್ನೇ ಅಳುವಂತೆ ಮಾಡಿದ್ದು ಇನ್ನೊಂದು ಸಾಕ್ಷಿ.

ಇದು ಹೀಗಿರುವಾಗಿ ಇಲ್ಲಿ ಆಡಳಿತ ಹಾಗೂ ಕಾನೂನು ಸುವ್ಯವಸ್ಥೆ ಹೇಗಿರಬೇಕಂದು ಹೇಳಿ.ಇಲ್ಲಿ ತಮಗೆ ಬೇಕಾದ ಐ.ಎ.ಎಸ್ ಹಾಗೂ ಐ.ಪಿ.ಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾಯಿಸಿದಂತೆ ತಮ್ಮ ಸಾಮರ್ಥ್ಯ ಹಾಕಿ ಸರ್ಕಾರದ ಮೇಲೆ ಬಿದ್ದಿರುವುದು ಕರ್ನಾಟಕದ ಜನತೆಗೆ ಗೊತ್ತಿದೆ. ಹೆಚ್ಚಿನವರು ಸ್ವಜಾತಿ ಅಧಿಕಾರಿ,

ಸಹಜವಾಗಿಯೇ ಇಲ್ಲಿಯ ಆಡಳಿತ ಗಣಿಲೂಟಿಕೋರರ ಸರ್ವಾಧಿಕಾರವಾಗಿತ್ತು. ಹುಚ್ಚೆದ್ದು ಕುಣಿದ ಗಣಿಬಂಡವಾಳ ಆಂಧ್ರ-ಕರ್ನಾಟಕ ಮಾತ್ರವಲ್ಲಾ ಕೇಂದ್ರ ಸರ್ಕಾರದ ಬೆದರಿಕೆಗೂ ಕಾರಣವಾಗಿತ್ತು ಕೇಂದ್ರದಲ್ಲಿ ಸುಷ್ಮಾಸ್ವರಾಜ್‌ರವರನ್ನು ಪ್ರಧಾನಮಂತ್ರಿ ಮಾಡಲು ಹೂಡುವ ಬಂಡವಾಳ ಅದರಿಂದಾಗಿ ಮುಂದೆ ದೇಶದಲ್ಲಾಗುವ ಪ್ರಜಾಪ್ರಭುತ್ವದ ನಾಶ ಎಲ್ಲರನ್ನೂ ಅದು ಹೇಗೆ ಬೆದರಿಸಿತ್ತು.

ಬಳ್ಳಾರಿಯಲ್ಲಂತೂ ಹಿಂದಿನ ಅವಧಿಯಲ್ಲಿ ಪೈಪೋಟಿಗೆ ನಿಂತ ಕಾಂಗ್ರೇಸ್ -ಜೆಡಿಎಸ್ ಗಳು ಬಾಯಿ ಮುಚ್ಚಿಕೊಂಡು ಮೂಲೆ ಸೇರುವಂತೆ ಮಾಡಿತ್ತು. ಕಾಂಗ್ರೆಸ್‌ಗೆ ಆಸರೆಯಾಗಿ ಬಂದ ಲಾಡ್‌ಗಣಿಗುಂಪು ಬಳ್ಳಾರಿಯಲ್ಲಿ ಮನೆ ತೆರೆದಾಗ ಅವರ ಮೇಲೆ ಹಾಡುಹಗಲೇ ಭಾರೀದಾಳಿ ನಡೆಸಿ ಬೆದರಿಸಿದ್ದು ಯೊರೊಬ್ಬರು ಇದನ್ನು ಖಂಡಿಸಲಾಗದ ಸ್ಥಿತಿ ಪರಿಸ್ಥಿತಿ ನಿರ್ಮಾಣಗೊಂಡಿತ್ತು.

ಸರ್ವಾಧಿಕಾರವನ್ನು ಎದುರಿಸಲಾಗದ ಸಾಮಾನ್ಯಜನತೆ ಕೊಟ್ಟಷ್ಟು ಪಡೆದು ಬಾರಿ ಆವರಣದಂತ ನಿರ್ವಾಣಕ್ಕೆ ಸಹಾಯ ಮಾಡಿತು. ಸರ್ವಾಧಿಕಾರವನ್ನು ಎದುರಿಸಲು ಮುಂದಾದ ಕಾಂಗ್ರೆಸ್ ಕಾರ್ಯಕರ್ತನೊಬ್ಬನನ್ನು ಪೋಲೀಸ್ ಬಲ ಉಪಯೋಗಿಸಿ ಬಾಯಲ್ಲಿ ಬಂದೂಕು ತೂರಿಸಿ ಕೊಲ್ಲುವ ಬೆದರಿಕೆ ಹಾಕಲಾಯಿತು. ಚಳುವಳಿಗೆ ಕೈಜೋಡಿಸಿದ್ದ ಮಾಜಿ ಜೆ.ಡಿ.ಎಸ್ ನಾಯಕನ್ನು ಕೋಟ್ಯಂತರ ಬೆಲೆಬಾಳುವ ಆಸ್ತಿಯನ್ನು ಲೂಟಿ ಮಾಡಲಾಯಿತು. ಸಿ.ಪಿ.ಐ(ಎಂ) ಪಕ್ಷದ ಮೇಲೆ ಸುಳ್ಳು ಕೊಲೆ ಮೊಕದ್ದಮೆ ಹೂಡಿ ಜೈಲು ಕಳುಹಿಸಲಾಯಿತು. ನಮ್ಮ ಮೇಲೆ ಪ್ರತಿಭಟನೆಯ ವೇಳೆ ಇಬ್ಬರು ಡಿ.ವೈ.ಎಸ್.ಪಿ. ಗಳು ದಾಳಿಗೆ ಮುಂದಾದರು ನಮ್ಮ ಮೇಲೆ ಹಾಳಿ ನಡೆಸಲು ಅವರ ನಡುವೆ ಹಲವು ಬಾರಿ ಇವಕಾಶ ಜಾಸ್ತಿಯಾಯಿತ್ತೆಂದು ಚರ್ಚೆ ನಡೆಸಲಾಗಿದೆ. ನಮ್ಮ ಸಂಗಾತಿಯನ್ನು ಗಡಿಪಾರು ಮಾಡಲು ಪ್ರಯತ್ನಿಸಿದ್ದಾರೇ ಚಾಗನೂರು ಚಳುವಳಿ ಮುಖಂಡರ ಮೇಲೆ ಪೊಲೀಸ್ ದಾಳಿ ನಡೆಸಿ ಬೆದರಿಸಲಾಗಿದೆ, ವಿರೋಧಿ ಗಣಿಗುತ್ತಿಗೆದಾರನ ಮೇಲೆ ರಾತ್ರೋರಾತ್ರಿಕೆಲವೇ ಗಂಟೆಗಳಲ್ಲಿ ರೌಡಿ ದಾಳಿ ನಡೆಸಲಾಗಿದೆ. ಬಳ್ಳಾರಿಗೆ ಪ್ರಾತಿನಿಧಿಕವಾಗಿದ್ದ ಗಡಗಿಚನ್ನಪ್ಪ ವೃತ್ತದ ಗಡಿಯಾರ ಕಂಬವನ್ನು ನಾಶ ಮಾಡಲಾಯಿತು. ಸ್ವತಃ ಬಳ್ಳಾರಿ ಮಹಾನಗರಪಾಲಿಕೆಯ ಮೇಯರ್‌ನ್ನು ಹಾಡುಹಗಲಲ್ಲಿ ಕೊಲೆಗಯ್ಯಲಾಯಿತು. ನಗರಪಾಲಿಕೆಯ ಇಂಜನೀಯರನೊಬ್ಬ ಕಾಣೆಯಾಗಿ ಹಲವು ವರ್ಷಗಳೇ ದಾಟಿವೆ. ಇಲ್ಲಿಯುವರೆಗೂ ಪೊಲೀಸ್‌ರು ಆರೋಪಿಗಳನ್ನು ಬಂಧಿಸಿಲ್ಲ. ವಿರೋಧಿಸಿದ ಹಲವರಿಗೆ ಪ್ರಾಣಬೆದರಿಕೆ ಮಾತ್ರವಲ್ಲಾ ಅವರ ಹೆಣ್ಣು ಮಕ್ಕಳನ್ನು ಅಪಹರಿಸುವ ಬೆದರಿಕೆಗಳು ಪ್ರಚಲಿತವಿದ್ದವು. ಕಛೇರಿಗಳಲ್ಲಿ ಅವರು ಹೇಳಿದ್ದೆ ಕಾನೂನಾಗಿತ್ತು, ಅವರು ಹೇಳಿದ್ದೇ ಕೆ.ಐ.ಎ.ಡಿ.ಬಿ ನಿಗದಿಸುವ ಭೂಬೆಲೆಯಾಗಿತ್ತು. ಇವರಿಂದ ಸಾವಿರಾರು ಕೋಟಿರೂ ರೈತರು ಕಳೆದುಕೊಳ್ಳುವಂತ್ತಾಗಿದೆ. ಪತ್ರಿಕೆಗಳು ಇವರ ವಿರುದ್ದವಾಗಿ ಬರೆಯಲು ಸಾಧ್ಯವಾಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಸೋತಿದ್ದರೂ ಗೆದ್ದರೆಂದು ಬಲವಂತವಾಗಿ ಪ್ರಕಟಿಸಿದ ಆರೋಪವೂ ಅವರ ಮೇಲಿದೆ, ಎಲ್ಲೆಲ್ಲೂ ಇವರದೇ ಮಾತು ಶಕ್ತಿಗಳದ್ದೇ ಆಡಳಿತವಾಗಿತ್ತು ಅಧಿಕಾರಿಗಳಾರು ಸ್ವಾತಂತ್ರವಾಗಿ ತಮ್ಮ ಕಾನೂನಿನಂತೆ ಕಾರ್ಯನಿರ್ವಹಿಸಲಿಲ್ಲ. ಜನಸಾಮಾನ್ಯರ ಅಹವಾಲು /ದೂರುಗಳನ್ನು ಕೇಳುವ ಸ್ಥಿತಿ ಇರಲಿಲ್ಲ.

ವಿಮಾನ ನಿಲ್ದಾಣಕ್ಕೆ ಜಮೀನು ಬಲವಂತವಾಗಿ ಪಡೆಯುವ ಮತ್ತು ಅಮಾಯಕರ ಮೇಲೆ ಲಾಠಿ ಚಾರ್ಜ್‌ಮಾಡಿ ಫೈರಿಂಗ್ ಮಾಡಿದುದನ್ನು ವಿರೋಧಿಸಿ ಕರೆನೀಡಿದ ಬಳ್ಳಾರಿ ಜಿಲ್ಲಾ ಬಂದ್ ಸಂದರ್ಭದಲ್ಲಿ ಶಾಂತ ರೀತಿಯಲ್ಲಿ ಧರಣಿ ನಡೆಸಿದ್ದ ವಿರೋಧಿ ನಾಯಕರನ್ನು ದೌರ್ಜನ್ಯಯುತವಾಗಿ ಬಂಧಿಸಿ ಜೈಲಲ್ಲಿ ದಿನವಿಡೀ ಇಡಲಾಯಿತು. ಲೋಕಾಯುಕ್ತರು ಸುಮಾರು 40 ಕಾನೂನುಗಳು ಇಲ್ಲಿ ಚಾಲ್ತಿಯಲ್ಲಿರಲಿಲ್ಲವೆಂದು ಪಟ್ಟಿಮಾಡಿರುತ್ತಾರೆ. ಮಾತ್ರವೇ ಅಲ್ಲಾ ಅಮಾಯಕ ಅಕ್ಷರದಾಸೋಹ ಕೆಲಸದಾರರನ್ನು ಬೀದಿಗಟ್ಟಿ ಅಕ್ಷರ ದಾಸೋಹದ ಕೆಲಸವನ್ನು ಇಸ್ಕಾನ್‌ಕಂಪನಿಗೆ ನೀಡಲಾಯಿತ್ತು. ನೀರಾವರಿ ಜಮೀನುಗಳ ಸ್ವಾಧೀನ ಮಾಡುವಾಗ ಬಂಜರು ಹಾಗೂ ಒಣ ಭೂಮಿಗಳೆಂದು ಪಹಣಿಗಳನ್ನು ಬರೆಯಿಸಲಾಗಿದೆ. ಕೆ.ಐ.ಎ.ಡಿ.ಬಿ ಯವರು ಭೂ ಬೆಲೆ ನಿಗದಿಸುವಾಗ ಎಲ್ಲಾ ನಿಯಮವಳಿಗಳನ್ನು ನಗ್ನವಾಗಿ ಉಲ್ಲಂಘಿಸಿರುತ್ತಾರೆ. ಒಟ್ಟಾರೇ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಬೀಗ ಜಡಿದಂತಾಹ ಪರಿಸ್ಥೀತಿ ನಿರ್ಮೀಸಲಾಗಿತ್ತು ಎಲ್ಲೆಲ್ಲೂ ಲೂಟಿಯದೇ ಕಾರುಬಾರಾಗಿತ್ತು.

ಅವಕಾಶವಾದ , ನಕ್ಸಲ್‌ವಾದ:


ಈ ಅವಧಿಯಲ್ಲಿ ಲೂಟಿ ಕೋರ ರಾಜಕಾರಣವು ಬೆಳೆದ ವ್ಯವಹಾರವು ಜಿಲ್ಲೆಯ ಬಹುತೇಕ ಜನತೆಯನ್ನು ಅವಕಾಶವಾದಿಗಳನ್ನಾಗಿಸಿತು. ಈ ಅವಕಾಶವನ್ನು ಬಳಸಿಕೊಂಡು ಲಾಭ ಮಾಡುವುದೇ ಶ್ರೇಷ್ಠವೆಂಬ ಅದು ನೈತಿಕವೋ, ಅನೈತಿಕವೋ ಅಭಿಪ್ರಾಯವನ್ನು ರೂಪಿಸಿತು ಎಲ್ಲೆಲ್ಲಿ, ಹೇಗೆ ಹೇಗೆ ಸಂಪಾದಿಸಲು ಸಾಧ್ಯವೋ ಆಯಾ ರೀತಿಯಲ್ಲಿ ಸಂಪಾದನೆ ಗಳಿವಂತೆ ಮುಖ್ಯವಾಗಿ ಲೂಟಿಗಣಿಗಾರಿಕೆ ಮೀತಿಮಿರಿಸಿತು.

ಲೂಟಿಕೋರ ಗಣಿಗಾರಿಕೆಯು ಮತ್ತೊಮ್ಮೆ ಬಯಲಾಯಿತು. ಲೂಟಿ ಮತ್ತು ಮಾಫಿಯಾ ಚಟುವಟಿಕೆಯೇ ಬಂಡವಾಳ ಕ್ರೋಢೀಕರಣದ ಆಧಾರವೆಂಬುದನ್ನು ಸಾಬೀತು ಪಡಿಸಿತು.

ಕೈಗಾರಿಕೆಗಾಗಿ ಭೂಸ್ವಾಧೀನದ ಸಂದರ್ಭದಲ್ಲಿ ಕೈಗಾರಿಕೆ ವಿರೋಧಿಯಾಗಿ, ಅಕ್ರಮ ಗಣಿಗಾರಿಕೆಯ ಸಂದರ್ಭದಲ್ಲಿ ಪರಿಸರವಾದಿಯಾಗಿ ನಕ್ಸಲ್‌ವಾದ ಕಾರ್ಯ ನಿರ್ವಹಿಸಿದ ಈ ಸಂದರ್ಭದಲ್ಲಿ ಜನಗಳ ನಡುವೆ ಕೈಗಾರಿಕಾ ವಿರೋಧಿ ಮನೋಭಾವ ಬರುವ ಹಾಗೆ ಕ್ರಮವಹಿಸಿದೆ ಸ್ವಯಂಸೇವಾ ಸಂಸ್ಥೆಗಳ ಜೊತೆ ಸೇರಿಕೊಂಡು ಮಧ್ಯ ಪ್ರವೇಶಿಸಿದೆ.

ಇದೀಗ ಎಲ್ಲವೂ ಸ್ತಬ್ಧ ! ?

ತಮ್ಮ ಅಂತಿಮ ಲೋಕಾಯುಕ್ತ ವರದಿಯನ್ನು ನ್ಯಾಯಮೂರ್ತಿಗಳಾದ ಶ್ರೀ.ಸಂತೋಷ ಹೆಗಡೆ ನೀಡುವುದರೊಂದಿಗೆ ಒಎಂಸಿ/ಎಎಂಸಿ/ಡಿಎಂಸಿ ಗಳು ಕಿಂಗ್ ಮೇಕರ್ ಆಗಿದ್ದ ಯಡಿಯೂರಪ್ಪನವರ ರಾಜ್ಯಸರ್ಕಾರ ಉರುಳಿಬಿದ್ದಿದೆ ಕಿಂಗ್ ಮೇಕರ್‌ಗಳಿಗ ಅಧಿಕಾರದಿಂದ



ಹೊರಗುಳಿದಿದ್ದಾರೆ.

ಸುಪ್ರೀಂಕೋರ್ಟ್ ಮಧ್ಯಪ್ರವೇಶದೊಂದಿಗೆ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದು ಲೂಟಿ ಮಾಡುತ್ತಿದ್ದ ಎಲ್ಲಾ ಕಂಪನಿಗಳನ್ನು ತಾತ್ಕಾಲಿಕವಾಗಿ ಗಣಿಗಾರಿಕೆ ಮಾಡದಂತೆ ನಿಷೇಧಿಸಿದೆ. ಆಂಧ್ರ ಸರ್ಕಾರ ನೀಡಿದ ಸಿಬಿಐ ತನಿಖೆಯಲ್ಲಿ ಜನಾರ್ಧನರೆಡ್ಡಿಯವರೀಗ ಜೈಲಲ್ಲಿ ಕುಳಿತಿದ್ದಾರೆ ಅವರ ಸಹವರ್ತಿಗಳು ಅವರ ಕುಟುಂಬದ ಸದಸ್ಯರು ಅದೇ ಹಾದಿಯಲ್ಲಿ ದಿನಗಳನ್ನೆಣಿಸುವಂತಾಗಿದೆ. ಸುಪ್ರೀಂ ಕೋರ್ಟ್ ಕರ್ನಾಟಕದ ಎಎಂಸಿ ಹಾಗು ಡಿಎಂಸಿ ಗಣಿಗಾರಿಕೆಯನ್ನು ಸಿಬಿಐ ಗೆ ವಹಿಸಿದೆ. ತನಿಖೆ ಪ್ರಗತಿಯಲ್ಲಿದೆ ಇದರೊಂದಿಗೆ ಜನತೇ ನಿಟ್ಟುಸಿರು ಬಿಡುವಂತಾಗಿದೆ.

ಆದರೆ ಅದೇ ಸಂದರ್ಭದಲ್ಲಿ ಗಣಿಗಾರಿಕೆ ಎನ್‌ಎಂಡಿಸಿ ಹೊರತು ಪಡಿಸಿದಂತೆ ಇಡೀಯಾಗಿ ನಿಷೇಧಿಸಿರುವುದು ಲಕ್ಷಾಂತರ ಜನರ ಉದ್ಯೋಗಕ್ಕೆ ದಕ್ಕೆ ತಂದಿದೆ. ಸುಮಾರು 35 ರಷ್ಟಿರುವ ಸಣ್ಣ ಕೈಗಾರಿಕಾ ಘಟಕಗಳು ದೊಡ್ಡ ಕೈಗಾರಿಕೆಗಳು ಅದಿರಿನ ಸಮಸ್ಯೆಯನ್ನು ಎದುರಿಸುತ್ತಿವೆ ಭಾರೀ ದೊಡ್ಡದಾಗಿ ಬೆಳೆದಿದ್ದು ಸಾರಿಗೆ ಕೈಗಾರಿಕೆ ಹೆಚ್ಚು ಕಡಿಮೆ ಶೇ99 % ರಷ್ಟು ನಿಂತುಹೋಗಿದೆ ಸುಮಾರು 25 ಸಾವಿರದಷ್ಟು ಕಾರ್ಮಿಕರು ಬೀದಿಗೆ ಬಂದಿದ್ದಾರೆ. ಈ ಸಂಬಂಧಿ ಇತರೇ ಕೈಗಾರಿಕೆಯು ಬಿಕ್ಕಟ್ಟಿನಲ್ಲಿದ್ದು ಕಾರ್ಮಿಕರನ್ನು ಹೊರದೂಡಿದೆ.

ಜನಸಂಖ್ಯೆ ಈ ಅವಧಿಯಲ್ಲಿ ಜಿಲ್ಲೆಯ ಜನಸಂಖ್ಯೆ 25,35,383 ಕ್ಕೆ (2011 ರ ಅಂಕಿ ಅಂಶಗಳಂತೆ) ಬೆಳೆದಿದೆ ಪುರುಷರ ಸಂಖ್ಯೆ ಮಹಿಳೆಯರ ಸಂಖ್ಯೆ ಎಸ್.ಸಿ/ಎಸ್.ಟಿ ಸಂಖ್ಯೆ ಅದೇ ರೀತಿ ದುಡಿಯುವವರ ಜನಸಂಖ್ಯೆಯು ಸುಮಾರು 11 ಲಕ್ಷಕ್ಕೆ ಬೆಳೆದಿದೆ ಎಂದು ಅಂದಾಜಿಸಬಹುದು ಕೃಷಿ ಕೂಲಿಕಾರರ ಸಂಖ್ಯೆಯು 4 ಲಕ್ಷದ ಗಡಿದಾಟಿದೆ. ಅದೇ ರೀತಿ ಗ್ರಾಮೀಣದ ಪ್ರದೇಶದ ಸಣ್ಣ-ಅತಿಸಣ್ಣ ರೈತರ ಸಂಖ್ಯೆಯು 2 ಲಕ್ಷದ ಸಮೀಪಕ್ಕೆ ಸರಿದಿದೆ ಅದೇ ರೀತಿ ಇವರು ಹೊಂದಿದ ಸರಾಸರಿ ಜಮೀನು ಒಂದು ಎಕರೆಗಿಂತಲೂ ಕಡಿಮೆ ಇದೆ. ಗಣಿ ಉದ್ಯಮ ಮತ್ತು ಇತರೇ ಕೈಗಾರಿಕೋದ್ಯಮ ಬೆಳೆದುದರಿಂದಾಗಿ , ಸಾರಿಗೆ ಕೈಗಾರಿಕೆಯೂ ವ್ಯಾಪಕವಾಗಿ ಬೆಳೆದಿದ್ದು ಸಾರಿಗೆ ಕಾರ್ಮಿಕರ ಸಂಖ್ಯೆಯು 1 ಲಕ್ಷಕ್ಕೂ ಅಧಿಕ ಸಂಖ್ಯೆಲ್ಲಿ ಬೆಳೆದಿದೆ. ಅದೇ ರೀತಿ ಗುತ್ತಿಗೆ ಕಾರ್ಮಿಕರ ಸಂಖ್ಯೆಯು 20 ಸಾವಿರದ ಗಡಿದಾಟಿದೆ 397 ಕೈಗಾರಿಕೆಗಳಲ್ಲಿ ಕಾರ್ಮಿಕರ ಸಂಖ್ಯೆಯು ಸುಮಾರು 40 ಸಾವಿರದ ಗಡಿದಾಟಿದೆ . 397 ಕೈಗಾರಿಕೆಗಳಲ್ಲಿ ಕಾರ್ಮಿಕರ ಸಂಖೆಯು ಸುಮಾರು 40 ಸಾವಿರಕ್ಕೆ ವಿಸ್ತರಿಸಲ್ಪಟ್ಟಿದೆ. ಇದೂ ಇನ್ನಷ್ಟು ಉಕ್ಕು ಉದ್ಯಮ ಬೆಳೆಯುವ ಹಿನ್ನೆಲೆಯಲ್ಲಿ ಮುಂದಿನ ಅವಧಿಯೊಳಗೆ ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚು ಕಡಿಮೆ 50,000 ಗಡಿ ತಲುಪಿದರೇ ಕೈಗಾರಿಕಾ ಕಾರ್ಮಿಕರ ಸಂಖ್ಯೆಯು 75 ಸಾವಿರದಾಚೆ ಸಾಗುವ ಸಾಧ್ಯತೆಗಳಿವೆ.

ಬೆಳೆದ ಜಿಲ್ಲೆಯ ಆದಾಯ ಹಾಗೂ ಆಳಗೊಂಡ ಅಸಮಾನತೆ:

ಜಿಲ್ಲೆಯ ಆದಾಯವು 2005 ರಲ್ಲಿ ಒಟ್ಟು 5901.19 ಕೋಟಿ ಆದರೇ ಅದು 2008 ರಲ್ಲಿ 9197.99 ಕೋಟಿ ಎಂದಿದೆ. ಅದೇ ರೀತಿ 2005 ರಲ್ಲಿ ಒಟ್ಟು ಕೃಷಿ ರಂಗದ ಆದಾಯ 853.95 ಕೋಟಿ ಮತ್ತು 2008 ರಲ್ಲಿ 1210.99 ಕೋಟಿ ಎಂದಿದೆ. ಅದೇ ರೀತಿ ಗಣಿಗಾರಿಕೆಯ ಆದಾಯ 2005 783.95 ಕೋಟಿ ಎಂದರೇ 2008 ರಲ್ಲಿ 2210.70 ಕೋಟಿ ಎಂದಿದೆ. ಆದರೆ ಈ ಅಂಕಿ-ಅಂಶಗಳು ವಾಸ್ತವವಾದವುಗಳಲ್ಲ. ಜಿಲ್ಲೆಯ 132 ಗಣಿಗಳ ಉತ್ಪಾದನೆಯು ಬಹಳ ದೊಡ್ಡದಿದೆ. 2010 ರಲ್ಲಿ ಕೋಟಿ ಟನ್ ಉತ್ಪಾದಿಸಲಾಗಿದೆ. ಕಾನೂನು ಬಾಹಿರ ಉತ್ಪಾದನೆ ಸೇರಿದರೆ ಇನ್ನೂ ಜಾಸ್ತಿಯಾಗುತ್ತದೆ ಕೇವಲ ಅದಿರಿನ ಉತ್ಪಾದನೆಯೇ ಅದರ ಮೌಲ್ಯವೇ ಟನ್‌ಗೆ 6000 ವೆಂದರೂ 5.5 ಕೋಟಿ ಟನ್ (0.5 ಕೋಟಿ ಟನ್ ಕಾನೂನು ಬಾಹಿರವೆಂದು ಸೇರಿಸಿದೆ) ಗೆ 33 ಸಾವಿರ ಕೋಟಿಯಾಗಲಿದೆ. ಹೀಗಾಗಿ ಉಕ್ಕು ಮತ್ತಿತರೇ ಕೈಗಾರಿಕೆಗಳ ಉತ್ಪಾದನೆಯು ಸೇರಿ ಒಟ್ಟು ಜಿಲ್ಲೆಯ ಉತ್ಪಾದನೆ 2010 ರಲ್ಲಿ 50,000 ಕೋಟಿ ಸಮೀಪವಿದೆ ಗಣಿಗಾರಿಕೆ ನಿಷೇಧದಿಂದಾಗಿ ಈ ವರ್ಷ ಅದಿರಿನ ಆದಾಯ ತೀವ್ರವಾಗಿ

ಪುಟ 10ಕ್ಕೆ-

ಕುಸಿಯಲಿದೆ. ಹಾಗೇ ಕೃಷಿಯ ಆದಾಯವು ಈ ಅವದಿಯಲ್ಲಿ ಸ್ಥಿರವಾಗಿಲ್ಲ.

ಗಣಿಗಾರಿಕೆಯು ವ್ಯಾಪಕಗೊಂಡಿದು ಕೈಗಾರಿಕೆಗಳು ಬೆಳೆದದು 1. ಹಲಕುಂದಿ , ಬೆಳಗಲ್ಲು, ಹರಗಿನಡೋಣಿ, ಮೆಟ್ರಿ ಹಾಗೂ 2. ಹಲಕುಂದಿ, ಬಳ್ಳಾರಿ , ಕುಡತಿನಿ, ತೋರಣಗಲ್ಲು, ಕಾರಿಗನೂರು, ಹೊಸಪೇಟೆ ಮರಿಯಮ್ಮನ ಹಳ್ಳಿ ಮತ್ತು 3.ತೋರಣಗಲ್ಲು, ತಾರಾನಗರ, ದೋಣಿಮಲ್ಯೆ , ಸಂಡೂರು, ಯಶವಂತಪುರ, ಅದೇ ರೀತಿ 4. ಸಂಡೂರು, ಸುಶೀಲಾನಗರ, ಕಲ್ಲಳ್ಳಿ, ಹೊಸಪೇಟೆ 5. ರಾಜಾಪುರ, ಉಬ್ಬಲಗಂಡಿ,ಬನ್ನಿಹಟ್ಟಿ , ನಾಗಲಾಪುರ 6. ಕುಡತಿನಿ, ಸೂತನಾಪುರ, ಅಂಚಾಪುರ, ಚಿಕ್ಕಂತಾಪುರ, ಕೋಡಾಲು ಈ ಪ್ರದೇಶದಲ್ಲಿ ಕೇಂದ್ರೀಕರಿಸಿತ್ತು ಒಟ್ಟರೇ ಜಿಲ್ಲೆಯ 60ಕ್ಕೂ ಅಧಿಕ ಗ್ರಾಮಗಳು ಬಳ್ಳಾರಿ-ಹೊಸಪೇಟೆ-ಸಂಡೂರು ಪಟ್ಟಣಗಳು ಒಳಗೊಂಡಿದ್ದವು ಇಲ್ಲಿ ಕೃಷಿ ಕೂಲಿಕಾರರಿಗೆ -ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸಿತು. ಸುಮಾರು 2ಲಕ್ಷ ಕ್ಕೂ ಅಧಿಕ ಜನರು ಇದರಲ್ಲಿ ತೊಗಿಸಿಕೊಂಡಿದ್ದರು ಅದೇ ರೀತಿ ರಿಯಲ್‌ಎಸ್ಟೇಟ್ ಬೆಳೆದುದು ಕಪ್ಪು ಹಣ ಜಿಲ್ಲೆಯಲ್ಲಿ ವ್ಯಾಪಕ ಗೊಂಡುದು ಕಟ್ಟಡ ನಿರ್ಮಾಣ ಉದ್ಯಮವನ್ನು ಬೆಳೆಸಿತು. ಇದಕ್ಕೂ ಮುಖ್ಯವಾಗಿ ಬಳ್ಳಾರಿ-ಹೊಸಪೇಟೆ ಹಾಗೂ ಉದ್ಯಮ ಬೆಳೆದ ಪರದೇಶದಲ್ಲಿ ಸುಮಾರು 40 ಸಾವಿರಕ್ಕೂ ಅಧಿಕ ಜನರಿಗೆ ಈ ಅವಧಿಯಲ್ಲಿ ಉದ್ಯೋಗ ಒದಗಿಸಿದೆ. ಹೀಗಾಗಿ 2008 ರಿಂದ 2010 ರ ವರೆಗೆ ಇಲ್ಲಿನ ಕೂಲಿಕಾರರು ಹಾಗೂ ಕೆಲಸಗಾರರ ಆದಾಯವು ಉಳಿದ ಗ್ರಾಮೀಣ ಪ್ರದೇಶದ ಕೂಲಿಕಾರರ ರೈತರ ಆದಾಯಕ್ಕೆ ಹೋಲಿಸಿದರೇ ಉತ್ತಮವಾಗಿತ್ತು. ಸರಾಸರಿ ವಾರ್ಷಿಕ 40 ಸಾವಿರದಷ್ಟಿತ್ತು ಆದರೆ ಅಲ್ಲಿನ ಒಟ್ಟು ಉತ್ಪಾದನೆಯ ಮೌಲ್ಯಕ್ಕೆ ಹೋಲಿಸಿದರೇ ಅದು ನಗಣ್ಯವಾಗಿತ್ತು. ಆದರೆ ಗಣಿಗಾರಿಕೆ ನಿಷೇಧ'ದಿಂದಾಗಿ ಈ ಎಲ್ಲರೂ ನಿರುದ್ಯೋಗಿಗಳಾಗಿದ್ದಾರೆ. ಈ ವರ್ಷದ ಆದಾಯ ತೀವ್ರವಾಗಿ ಕುಸಿಯುವಂತಾಗಿದೆ.

ಈ ಅವಧಿಯಲ್ಲಿ ಇಲ್ಲಿ ಬೆಳೆದ ಭಾರೀ ಆದಾಯದ ಹಂಚಿದೆ ಜಿಲ್ಲೆಯೊಳಗೆ ಆದಾಯದ ಅಸಮಾನತೆಯ ಅಂತರವನ್ನು ಇನ್ನಷ್ಟು ಆಳಗೊಳಿಸಿತು. ಇದೆಲ್ಲವನ್ನು ವಾಹನಗಳ ಖರೀದಿಯಲ್ಲಾದ ಬೆಳವಣಿಗೆಗಳಲ್ಲಿ ಕೆಳಕಂಡಂತೆ ಗುರುತಿಸ ಬಹುದಾಗಿದೆ.

2008 ರ ಜಿಲ್ಲೆಯಲ್ಲಿ ಮೋಟಾರ್ ಸೈಕಲ್‌ಗಳು 1,52,707 ಇದ್ದರೇ 2010 ರಲ್ಲಿ 2,06,506 ಕ್ಕೆ ಬೆಳದಿದೆ ಅಂದರೇ ಸುಮಾರು 47,000 ಹೆಚ್ಚಳಗೊಂಡಿದೆ. ಹಾಗೇಯೇ ಸರಕುಸಾಗಾಣಿಕೆ ವಾಹನಗಳು 2008 ರಲ್ಲಿ 11,056 ಇದ್ದವು 12,909 ಕ್ಕೆ ಬೆಳೆದಿದೆ. ಅಂದರೇ 1860 ಹೆಚ್ಚಿದೆ ಅದೇ ರೀತಿ ಟ್ರಾಕ್ಟರ್-ಟ್ರೆಲ್ಲರ್‌ಗಳು 2008 ರಲ್ಲಿ 15,991 ಇದ್ದರೇ 2010 ರಲಿ 19,271 ಕ್ಕೆ ಹೆಚ್ಚಳ ಗೊಂಡಿದೆ ಅಂದರೇ 3500 ಹೆಚ್ಚಿದೆ. ಹಾಗೇನೇ ಜಿಲ್ಲೆಯಲ್ಲಿ 2008 ರಲ್ಲಿ 104 ವಾಣಿಜ್ಯ ಬ್ಯಾಂಕ್‌ಗಳಿದ್ದು 4,937 ಕೋಟಿ ಠೇವಣಿ ಸಂಗಾಹಿಸಿದ್ದಾರೆ, ಈಗ 2010 ರಲ್ಲಿ ವಾಣಿಜ್ಯ ಬ್ಯಾಂಕುಗಳ ಸಂಖ್ಯೆ 227 ಕ್ಕೆ ಹೆಚ್ಚಳಗೊಂಡು 7,130 ಕೋಟಿ ಠೇವಣಿ ಸಂಗ್ರಹಿಸಿದೆ ಅದೇ ರೀತಿ ಗ್ರಾಮೀಣ ಬ್ಯಾಂಕ್‌ಗಳು ಈ ಮೂಲಕವು ಗುರುತಿಸ ಬಹುದಾಗಿದೆ. ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಕೆಎಸ್‌ಎಫ್‌ಸಿಗಲ ಶಾಖೆಗಳ ಸಂಖ್ಯೆ2008 ಕ್ಕೆ ಹೋಲಿಸಿದರೇ 2010 ರಲ್ಲಿ 07 ಕಡಿಮೆ ಆಗಿವೆಯಾದರೂ ಅವುಗಳ ಠೇವಣಿ 5.1/2 ಪಟ್ಟು ಜಾಸ್ತಿಯಾಗಿದೆ. 53 ಕೋಟಿಯಿಂದ 282 ಕೋಟಿ ಬೆಳೆದಿದೆ. 250 ಕ್ಕೂ ಗಣಿ ಹಾಗೂ ಕೈಗಾರಿಕಾ ಉದ್ದಿಮೆಗಳು ಈ ಅವಧಿಯಲ್ಲಿ ಸಾವಿರ ಕೋಟಿಯನ್ನು ಮೀರಿಸಿತ್ತು ಅದೇ ರೀತಿ ಇದರಲ್ಲಿ ಕೈಬೆರಳೆಣಿಕೆಯ ಕೆಲವರ ಆಸ್ತಿಯು ಸಾವಿರ ಕೋಟಿಯನ್ನು ದಾಟಿದೆ ವಿದೇಶಗಳಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಬಂಡವಾಳ ತೊಡಗಿಸಿದ್ದಾರೆ. ರೆಡ್ಡಿ ಕುಟುಂಬ ಭಾರೀ ಶ್ರೀಮಂತ-ಕುಟುಂಬವಾಗಿ ಹೊರಹೊಮ್ಮಿದೆ ಅದೇ ರೀತಿ ಲಾರಿ ಮಾಲೀಕರು , ಮಧ್ಯವರ್ತಿಗಳು, ಸಾಲಬಂಡವಾಳಗರು 1 ಸಾವಿರಕ್ಕೂ ಅಧಿಕ ಜನರು ಕೋಟ್ಯಾಧೀಶರಾಗಿದ್ದಾರೆ 5000 ದಷ್ಟು ಲಕ್ಷಾಧೀಶ ಗಣಿ ಹಾಗೂ ಕೈಗಾರಿಕಾ ಬೆಳವಣಿಗೆಗಳ ಲಾಭ 1500 ಜನರಿಗಷ್ಟೆ ಭಾರೀ ಲಾಭವನ್ನು ತಂದು ಕೊಟ್ಟರೇ ಅದರಲ್ಲಿ ನೇರವಾಗಿ ಹಾಗೂ ಅಪ್ರತ್ಯಕ್ಷವಾಗಿ ತೊಡಸಿಕೊಂಡಿದ್ದ ಕಾರ್ಮಿಕರಿಗೆ ಒಂದು ಸಾಮಾನ್ಯ ಹೊಟ್ಟೆ ಪಾಡನ್ನೂ ಮಾತ್ರವೇ ಒದಗಿಸಿತ್ತು.

ಅದಿರಿನ ಬೆಲೆಯು ಪ್ರತಿಟನ್‌ಗೆ 5000 ರಿಂದ 8000 ರ ವರೆಗೆ ಬೆಳೆಯಿತು. ಪ್ರತಿಟನ್ ಅದಿರನ ಉತ್ಪಾದನೆಗೆ ಗಣಿಗುತ್ತಿಗೆದಾರರಿಗೆ ತಗಲುವ ವೆಚ್ಚವು ಕೇವಲ 150 ರಿಂದ 400 ರೂ ಗಳಾಗಿತ್ತು. ಅಂದರೇ ಪ್ರತಿಟನ್‌ಗೆ ಸರಾಸರಿ 5000 ರೂಗಳಷ್ಟು ಲಾಭಾಂಶ ಪಡೆದಿದ್ದಾರೆ. ಪ್ರತಿದಿನ ಸಾವರಟನ್ ಉತ್ಪಾದಿಸಿದ ಗುತ್ತಿಗೆದಾರ 50 ಲಕ್ಷ ಲಾಭ ಪಡೆದಿದ್ದಾರೆ. ಇಲ್ಲಿ ಉತ್ಪಾದನೆಯಲ್ಲಿ ತೊಡಗಿದ ಕಾರ್ಮಿಕನಿಗೆ ಕನಿಷ್ಠ ವೇತನ ನೀಡ ಲಾಭಾಂಶವು ಒಳಗೊಂಡಿದೆ ಅದೇ ರೀತಿ ಜಾಗತಿಕ ಕಾರ್ಪೋರೇಟ್ ಕಂಪನಿಗಲೂ ತಮ್ಮ ಹೇರಳ ಲಾಭಕ್ಕಾಗಿ ಅದಿರಿನ ಬೆಲೆ ಹೆಚ್ಚಿಸಿದ್ದರಿಂದ ಜಗತ್ತಿನಾದ್ಯಂತ ಉಕ್ಕು ಕೊಳ್ಳುವ ಗ್ರಾಹಕರು ದುಬಾರಿ ಬೆಲೆನೀಡುವ ಮೂಲಕ ತಮ್ಮ ದುಡಿಮೆಯ ಉಳಿಕೆಯನ್ನು ಹೀಗೆ ವಿಶ್ವದಾದ್ಯಂತ ದುಡಿಯುವವರ ಮಿಗುತೆಯನ್ನು ನಮ್ಮ ಗಣಿಗುತ್ತಿಗೆದಾರರು ಸಂಗ್ರಹಿಸಿದ್ದಾರೆ.

ಕಳೆದ ಅವಧಿಗೆ ಹೋಲಿಸಿದರೇ ಈ ಅವಧಿಯಲ್ಲಿ ಜಾಕ್ಕಟ್ಟು ಹಾಗೂ ಅತೀವೃಷ್ಟಿ-ಅನಾವೃಷ್ಟಿಗಳಿಂದಾಗಿ ಗಣಿಗಾರಿಕೆ ಯಾಚೆ ಬದುಕುವ ಕೂಲಿಕಾರರಲಿ ಬಹುತೇಕರು ತೀವ್ರಸಂಕಷ್ಟವನ್ನು ಎದುರಿಸಿದರು . ಈ 04 ವರ್ಷಗಳಲ್ಲಿ ಇವರ ಸಕಾಸರಿ ವಾರ್ಷಿಕ ತಲಾಆದಾಯದವು ತೀವ್ರ ಬೆಲೆ ಏರಿಕೆಯ ಹಾಗೂ ಹಣದುಬ್ಬರದ ಕಾಲದಲ್ಲಿ ಕೇವಲ 4000 ರೂ ಗಳಿಗೂ ಕಡಿಮೆಯಾಗಿದ್ದು ಖಳವಳಕಾರಿಯಾಗಿದೆ. ನೀರಾವರಿ ಪ್ರದೇಶದ ಕೆಲಕೂಲಿಗಾರರು ಬಡರೈತರ ಜೊತೆ ಸೇರಿ ಗೇಣಿದಾರರಾಗಿ ಜಾಗತೀಕರಣದ ಭಾಗವಾಗಿ ಕಳೆದುಕೊಂಡ ಕೂಲಿಕೆಲಸವನ್ನು ಮರಳೀ ಪಡೆಯಲು ಯತ್ನಿಸಿದ್ದಾರೆ ಆದರೆ ಉತ್ಪಾದನೆ ಬಹುತೇಕ ಪಡೆದು ಎಲ್ಲಾ ಪಾಲು, ಸಾಲಬಂಡವಾಳಿಗರ ವರ್ತಕರ ಹಾಗೂ ಭೂಮಾಲಿಕರ ಪಾಲಾಗಿದೆ. ಹಸಿದ ಹೊಟ್ಟಿಗಿಷ್ಟು ಕೂಲಿಕಾಳು ಪಡೆದು ಕೊಂಡುದು ಬಿಟ್ಟರೇ. ಉಳಿದ ದೇನಿಲ್ಲ ಆದಾಗಲೂ ಸ್ಥಿರ ಕೂಲಿಕೆಲಸ ಕಂಡು ಕೊಂಡ ನೆಮ್ಮದಿ ಇವರಲ್ಲಿ ಕಂಡುಬರುತ್ತಿದೆ. ಇವರಲ್ಲಿ ಅತೀವೃಷ್ಟಿಯಾದಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಲ್ಲಿನ ಕೂಲಿಯನ್ನೇ ಆಧರಿಸಿದ ಕೂಲಿಕಾರರು ಕೂಡ ಹಸಿವಿನ ಸಾವಿನ ಸಂಕಷ್ಟದಿಂದ ಹೊಬರುವಷ್ಟು ಆದಾಯ ಪಡೆಯಲಾಗಲಿಲ್ಲ.

ಮಧ್ಯಮ ರೈತರನ್ನು ಅತೀವೃಷ್ಠಿ ಹಾಗೂ ಏರಿದ ಹೂಡಿಕೆಯ ಬೆಲೆಗಳು ಕುಸಿದ ಬೆಳೆಯ ಬೆಲೆಗಳು ತೀವ್ರವಾಗಿ ಭಾಧಿಸಿವೆ. ಇವರ ಆದಾಯದಲ್ಲಿ ಹೆಚ್ಚಳ ವೇನೂ ಕಂಡು ಬಂದಿಲ್ಲ ಬಹುತೇಕ ಇವರ ಆದಾಯವು ಮಧ್ಯವರ್ತಿಗಲಿಗೆ ವರ್ತಕರಿಗೆ ಸಾಲ ಬಂಡವಾಳ ನೀಡುವವರಿಗೆ ಹೋಗಿದೆ. ಹಳೆಯ ಶಾಲಗಳು ಬೆಳೆದಿವೆ ಮನೆಯ ವೆಚ್ಚಗಳು ಹೆಚ್ಚಾಗಿವೆ ಒಟ್ಟಾರೇ ನಕರಾತ್ಮಕ ಬೆಳೆವಣಿಗೆ ಇಲ್ಲಿದೆ.

ಕೃಷಿರಂಗದ ಆದಾಯುವನ್ನು ಕೊಳ್ಳೆ ಹೊಡೆದವರಲ್ಲಿ ಭೂಮಾಲಿಕ-ಬಂಡವಾಳ ಶಾಹಿಗಳೇ ಹೆಚ್ಚಿನ ಪಾಲನ್ನು ಪಡೆದಿದ್ದಾರೆ ಗೇಣಿದಾರರು ಈ ಅವಧಿಯಲ್ಲಿ ತಲಾ ಎಕರೆಗೆ 10 ಸಾವಿರದಿಂದ 15 ಸಾವಿರದವರೆಗೆ ನೀರಾವರಿ ಹೆಚ್ಚಿಸಿದೆ. ಇದರ ಜೊತೆ ಗೇಣಿದಾರರಿಗೆ ಬಡ-ಮಧ್ಯಮರೈತರಿಗೆ ನೀಡಿದ ದುಬಾರಿ ಬಡ್ಡಿಯ ಸಾಲ ಬಂಡವಾಳ ಆದಾಯ. ವರ್ತಕನಾಗಿ ನೀಡಿದ ಬೀಜ, ಗೊಬ್ಬರ -ಕ್ರೀಮಿನಾಶಕಗೆಳ ವ್ಯಾಪಾರ ಮತ್ತು ಖರೀದಿದಾರನಾಗಿ ಕಡಿಮೆ ಬೆಲೆಗೆ ಪಡೆದ ಕೃಷಿ ಉತ್ಪನ್ನಗಳ ಆದಾಯವು ಇವರಲ್ಲಿ ಹತ್ತಾರು ಕೋಟಿ ಹಣಕಾಸು ಬಂಡವಾಳ ಸೇರುವಂತೆ ಮಾಡಿದೆ. ಇವರ ಸಂಖ್ಯೆಯು ಜಿಲ್ಲೆಯ ಮುಖ್ಯವಾಗಿ ನೀರಾವರಿ ಪ್ರದೇಶದಲ್ಲಿ 300 ಕ್ಕೂ ಅಧಿಕವಾಗಿ ಬೆಳೆದಿದೆ.

ಶ್ರೀಮಂತ ರೈತರು ಮೇಲ್ಮಧ್ಯಮರೈತರು ಜಾಗತೀಕರಣದ ಬೆಳವಣಿಗೆ ಫಲವಾಗಿ ಕೃಷಿಕರಾಗಿ ಉಳಿಯದೇ ಬಡವರಿಗೆ ಗೇಣಿ ಮಾಡಲು ಜಮೀನು ನೀಡಿ 50 ಸಾವಿರದಿಂದ 1 ಲಕ್ಷ ಮತ್ತು ಕೆಲವರು 2 ರಿಂದ 4 ಲಕ್ಷದವರೆಗೆ ಆದಾಯ ಪಡೆದಿದ್ದಾರೆ.

ಕೃಷಿ ರಂಗದ ತಳಮಳಗಳು:

ಕೇಂದ್ರ ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಿರುವ ಖಾಸಗೀಕರಣ ಉದಾರೀಕರಣ ಹಾಗೂ ಜಾಗತೀಕರಣದ 2ನೇ ಹಂತದ ಕ್ರಮಗಳು ಮತ್ತು ಜಾಗತಿಕ ತಾಪಮಾನ ಏರಿಕೆಯು ಮತ್ತು ಜಾಗತಿಕ ಬಿಕ್ಕಟ್ಟು ಜಿಲ್ಲೆಯ ಕೃಷಿ ರಂಗದ ತಳಮಳಗಳನ್ನು ಹೆಚ್ಚಿಸಿದೆ. ಈ ಅವಧಿಯಲ್ಲಿ ವ್ಯಾಪಕವಾಗಿ ಏರಿದ ಆಹಾರಧಾನ್ಯ ಮತ್ತಿತರೇ ಬೆಲೆಗಳು ಕೂಲಿಕಾರರು ಬಡರೈತರನ್ನು ಅಪೌಷ್ಠಿಕತೆ ತೆಕ್ಕೆಗೆ ತಳ್ಳಿವೆ. ಏರುತ್ತಿರುವ ನಿವೇಶನದ ಬೆಲೆಗಳು ನಿವೇಶನ ಹೊರವುದು ಕನಸಿನ ಮಾತೆಂಬಂತೆ ಬೆಳೆದಿವೆ. ಪಡಿತರ ವ್ಯವಸ್ಥೆ ಬಲಪಡಿಸದೇ ದುರ್ಬಲಗೊಳಿಸುತ್ತಿರುವುದು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ..

ಗಡಿಯಾಚೆ ನೀರಾವರಿಯಾಚೆ ಬದುಕುವ ಬಹುಸಂಖ್ಯಾತ ಕೂಲಿಕಾರರು 2009 ಹಾಗೂ 2011 ರಲ್ಲಿ ಬರಗಾಲವನ್ನು ಎದುರಿಸಿದ್ದಾರೆ. ಈ ಎರಡು ವರ್ಷಗಳಲ್ಲಿ ಕೃಷಿರಂಗ ಇವರಿಗೆ ಉದ್ಯೋಗ ಒದಗಿಸಿದ್ದು ಅತ್ಯಲ್ಪವೇ ಅದು 25-30 ದಿನಗಳಷ್ಟು ಆಗಿರಲಿಲ್ಲ ಅದೇ ರೀತಿ ನೀರಾವರಿ ಪ್ರದೇಶದ ಕೂಲಿಕಾರರು 2009 ರ ಅತಿವೃಷ್ಠಿಯಲ್ಲಿ ಅವರು ಕೂಡು ಪಡೆದ ಕೂಲಿಕೆಲಸದ ದಿನಗಳು 40-50 ದಿನಗಳಷ್ಟು ಆಗಿರಲಿಲ್ಲ.

ಕೃಷಿ ಭೂಮಿಯಲ್ಲಿ ಕಡಿತ.

ಬಳ್ಳಾರಿ ಜಿಲ್ಲೆಯಲ್ಲಿ 1950-91 ರಲ್ಲಿ ಒಟ್ಟು ಕೃಷಿ ಭೂಮಿಯು 6.38.533 ಹೆಕ್ಟರ್‌ಗಳಾಗಿದ್ದರೇ 2005-06 15 ವರ್ಷಗಳ ನಂತರ 548000 ಹೆಕ್ಟಾರ್‌ಗಳಾಗಿದೆ ಅಂದರೇ ಸುಮಾರು 90000 ಹೆಕ್ಟರ್ ಭೂಮಿ ಕಡಿತಗೊಂಡು ಕೃಷಿ ಭೂಮಿಯಲ್ಲಿ ಗಣಿಗಾರಿಕೆ ಡಿಗ್ಗಿಂಗ್ ಸಾವಿರಾರು ಹೆಕ್ಟಾರ್ ಪ್ರದೇಶದಲ್ಲಿ ನಡೆದಿದೆ. ಅದೇ ರೀತಿ ರಿಯಲ್ ಎಸ್ಟೇಟ್ ಬೆಳವಣಿಗೆಯಿಂದ ಹತ್ತು ಸಾವಿರಕ್ಕೂ ಅಧಿಕ ಎಕರೆ ಕಡಿತಗೊಂಡಿದೆ. ಹಾಗೇನೆ ಕೈಗಾರಿಕೆಗಳಿಗಾಗಿ 25 ಸಾವಿರಕ್ಕು ಅಧಿಕ ಜಮೀನನ್ನು ಸ್ವಾಧೀನ ಪಡಿಸಿ ಕೊಳ್ಳಲಾಗಿದೆ. ಮತ್ತು ರಸ್ತೆ , ಟಾನ್‌ಸಿಪ್‌ಗಾಗಿ ಸಾವಿರಾರು ಎಕರೆ ಸ್ವಾಧೀನವಾಗಿದೆ. ಮಾತ್ರವಲ್ಲಾ ಮುಂದಿನ ಅವಧಿಯೊಳಗೆ ಇನ್ನಷ್ಟು ಭೂಸ್ವಾಧೀನಕ್ಕೆ ಸರ್ಕಾರ ಮುಂದಾಗುವುದರಿಂದ ರಾಷ್ಟ್ರೀಯ ಹೆದ್ದಾರಿ-53 ನ್ನು ಎಕ್ಸ್‌ಪ್ರೆಸ್ ಹೈವೇ ಯಾಗಿ ಬದಲಿಸುತ್ತಿರುವುದರಿಂದ ಇನ್ನೂ ಹಲವು ಟಾನ್‌ಸಿಪ್‌ಗಳು ಕೈಗಾರಿಗಕೆಗಳು ಬೆಳೆಯುವುದರಿಂದ ಅದು 4.1-2 ಲಕ್ಷ ಹೆಕ್ಟಾರ್‌ಗೆ ಕುಸಿತಗೊಂಡರೆ ಆಶ್ಚರ್ಯ ಪಡಬೇಕಿಲ್ಲ.

ಭೂಸಂಬಂಧಗಳು: ಈ ಅವಧಿಯಲ್ಲಿ ಬಡರೈತ-ಕೂಲಿಕಾರರ ಪರವಾಗಿ ಭೂ ಸಂಬಂಧಗಳು ಬದಲಾಗಲಿಲ್ಲ ಬದಲಿಗೆ ಕಂಪನಿಗಳೀಗೆ ಹಾಲೂ ಭೂಮಾಲಿಕರ ಬೇನಾಮಿ ಹೆಸರಿಗೆ ಬದಲಾಗಿವೆ.

2005-06 ಅಂಕಿ ಅಂಶಗಳತೆ ಜಿಲ್ಲೆಯ 172231 ಸಣ್ಣ ಅತಿಸಣ್ಣ ರೈತರ ಕೈ ನಲ್ಲಿ 396542 ಎಕರೆ ಜಮೀನಿದ್ದು ಒಟ್ಟು ರೈತರ ಶೇ66 ರಷ್ಟಿರುವ ಈ ಬಡರೈತರ ಕೈಯಲ್ಲಿ ಒಟ್ಟು ಭೂಮಿಯ ಶೇ28.91 ಜಮೀನಿದೆ.

(ಮುಂದುವರೆಯಲಿದೆ)

ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಹಲ್ಲೆ-ದಾಂದಲೆ,ವಿವಾದ ಭುಗಿಲೆದ್ದಿದೆ. ಈ ತಿಕ್ಕಾಟಗಳ ಹಿಂದೆ ಏನಿದೆ?

ಜಾತೀಯತೆ-ಭ್ರಷ್ಟಾಚಾರದ ಕೂಪವಾಗಿರುವ ಬೆಂಗಳೂರು ವಿಶ್ವವಿದ್ಯಾಲಯ ಸಮಸ್ಯೆಗಳು ನೂರು-ಸಂಕಷ್ಟದಲ್ಲಿ ವಿದ್ಯಾರ್ಥಿಗಳು

ಹುಳ್ಳಿ ಉಮೇಶ್
ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ

ವಿಶ್ವವಿದ್ಯಾಲಯಗಳು ಚಿಂತನೆಯ ಆಲಯಗಳು ; ದೇಶದ ಬೌದ್ಧಿಕ ಸ್ವಾವಲಂಬನೆಯ ತಾಣಗಳು ಎನ್ನಲಾಗುತ್ತದೆ. ಆದರೆ ಬೆಂಗಳೂರು ವಿಶ್ವವಿದ್ಯಾಲಯವನ್ನು ಕಟ್ಟುವ ಶಿಕ್ಷಣ ತಜ್ಞರ ಕನಸು ಈಗ ಕಮರಿ ಹೋಗುತ್ತಿದೆ. ಇತ್ತೀಚಿನ ಕೆಲವು ದಿನಗಳಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಾಗುತ್ತಿರುವ ಬೆಳವಣಿಗೆಗಳು ವಿಶ್ವವಿದ್ಯಾಲಯದ ಘನತೆಯನ್ನು ಹಾಳು ಮಾಡಿವೆ. ಸಮಾಜವನ್ನು ಒಂದು ಸಮಗ್ರ ದೃಷ್ಟಿಕೋನದಿಂದ ನೋಡಬೇಕಾಗಿದ್ದ ವಿಶ್ವವಿದ್ಯಾಲಯದಲ್ಲೇ ಸಂಕುಚಿತ ಹಾಗೂ ಜಾತಿವಾದಿ ಪ್ರವೃತ್ತಿಗಳು ಹೆಚ್ಚಾಗಿ ವಿಶ್ವವಿದ್ಯಾಲಯದ ಬೆಳವಣಿಗೆಗೆ ಮಾರಕವಾಗಿವೆ. ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ ಕುಸಿದು ಹೋಗಿದೆ. ಉನ್ನತ ಶಿಕ್ಷಣದ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಒಂದೆಡೆಯಾದರೆ, ಜಾತಿ ರಾಜಕೀಯದ ಕೈಗೊಂಬೆಗಳಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವರ ನಡುವಿನ ವೈಷಮ್ಯ, ಭ್ರಷ್ಟಾಚಾರಕ್ಕಾಗಿ ನಡೆದಿರುವ ಪೈಪೋಟಿ ಇನ್ನೊಂದೆಡೆ. ಇವುಗಳ ಮಧ್ಯೆ ಅಡಕತ್ತರಿಯಲ್ಲಿ ಸಿಕ್ಕ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುತ್ತಿದ್ದಾರೆ.

ಇತ್ತೀಚಿನ ಕೆಲವು ಬೆಳವಣಿಗೆಗಳು


ಬೆಂಗಳೂರು ವಿ.ವಿ ಯ ಕುಲಪತಿಯಾಗಿರುವ ಡಾ॥ಎನ್.ಪ್ರಭುದೇವ್ ರವರು ಕಳೆದ ಕೆಲವು ತಿಂಗಳುಗಳಿಂದ ಜ್ಞಾನ ಭಾರತಿ ಕ್ಯಾಂಪಸ್‌ಗೆ(ವಿ.ವಿ ಆವರಣಕ್ಕೆ) ಆಗಮಿಸದಿರುವುದನ್ನು ಖಂಡಿಸಿ ನೂರಾರು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಿದ್ದರು. ಇದಕ್ಕೆ ಉತ್ತರವಾಗಿ ವಿ.ವಿ ಕ್ಯಾಂಪಸ್‌ನಲ್ಲಿ ಕಾರ್ಯ ನಿರ್ವಹಿಸದಂತೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನನ್ನನ್ನು ನಿರ್ಬಂಧಿಸುತ್ತಿದ್ದಾರೆ, ನನ್ನ ವಿರುದ್ಧ ವಿನಾ ಕಾರಣ ವಿದ್ಯಾರ್ಥಿಗಳನ್ನು ಎತ್ತಿಕಟ್ಟುತ್ತಿದ್ದಾರೆ, ಎಲ್ಲಾ ಸಮಸ್ಯೆಗಳಿಗೆ ನಾನೇ ಕಾರಣವೆಂಬಂತೆ ಬಿಂಬಿಸಿ ನನ್ನ ವಯಕ್ತಿಕ ತೇಜೋವಧೆಗೆ ಕುಲಸಚಿವರೂ ಸೇರಿದಂತೆ ಕೆಲವರು ಪ್ರಯತ್ನಿಸುತ್ತಿದ್ದಾರೆಂದು ಕುಲಪತಿಗಳು ಹೇಳಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ನಾನು ಯಾರನ್ನೂ ನಿರ್ಬಂಧಿಸಿಲ್ಲ, ತೇಜೋವಧೆ ಮಾಡಿಲ್ಲ, ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ಬರುವುದಾದರೆ ನಾಮ ರಕ್ಷಣೆ ಕೊಡಲು ಸಿದ್ಧ ಎಂದು ಕುಲಸಚಿವರಾದ ಡಾ॥ಮೈಲಾರಪ್ಪ ರವರ ಸಂಜೋಣ. ಇತ್ತೀಚಿನ ಕೆಲವು ದಿನಗಳಿಂದ ವಿಶ್ವವಿದ್ಯಾಲಯದ ಕೆಲವು ವಿಭಾಗದ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ಪಾಠ ಮಾಡದೆ ಬಹಿಷ್ಕರಣ ಮಾಡುತ್ತಿರುವುದು ವಿ.ವಿ ಯಲ್ಲಿ ಚರ್ಚೆಗೊಳಗಾಗುತ್ತಿರುವ ವಿಷಯ.

ಸರ್ಕಾರದ ನಿರ್ಲಕ್ಷ್ಯ

ಗಮನಿಸಬೇಕಾದ ಸಂಗತಿಯೆಂದರೆ , ಒಂದು ವಿಶ್ವವಿದ್ಯಾಲಯದ ಕುಲಪತಿಯಾಗಿರುವವರು ತಾವು ತಮ್ಮ ಕೆಲಸ ನಿರ್ವಹಿಸಲು ವಿಶ್ವವಿದ್ಯಾಲಯದಲ್ಲಿರುವವರು ಬಿಡುತ್ತಿಲ್ಲವೆಂದು ಹೇಳುತ್ತಿರುವುದನ್ನು ನೋಡಿದರೆ, ವಿಶ್ವವಿದ್ಯಾಲಯ ಗಂಭೀರ ಬಿಕ್ಕಟ್ಟಿನಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ದುರಂತದ ಸಂಗತಿಯೆಂದರೆ ಇಷ್ಟೆಲ್ಲಾ ಬೆಳವಣಿಗೆಗಳಾದರೂ ಸರ್ಕಾರ ಈ ಬಗ್ಗೆ ಕ್ಯಾರೇ ಎನ್ನಲಿಲ್ಲ. ವಿ.ವಿ ಕುಲಪತಿಗಳು ಹಾಗೂ ಕುಲಸಚಿವರಿಗೆ ಸರಿಯಾದ ಸೂಚನೆ ನೀಡಿ ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ ಸರಿಪಡಿಸಲು ಮುಂದಾಗಬೇಕಿದ್ದ ಉನ್ನತ ಶಿಕ್ಷಣ ಸಚಿವರು ಜವಾಬ್ದಾರಿ ಮರೆತು ಕುಳಿತಿದ್ದಾರೆ.

ಭ್ರಷ್ಟಾಚಾರ ಪ್ರಕರಣಗಳು ಹಾಗೂ ಪರೀಕ್ಷಾ ಅಕ್ರಮಗಳು

ಏಷ್ಯಾದಲ್ಲೇ ಅತಿದೊಡ್ಡ ವಿಶ್ವವಿದ್ಯಾಲಯ ಎಂಬ ಹೆಸರು ಪಡೆದಿರುವ ಬೆಂಗಳೂರು ವಿ.ವಿ ಭ್ರಷ್ಟಾಚಾರದಲ್ಲಿಯೂ ಪ್ರಥಮ ಸ್ಥಾನ ಪಡೆಯಲು ವಿಶ್ವವಿದ್ಯಾಲಯದೊಳಗೆ ಪೈಪೋಟಿ



ನಡೆಯುತ್ತಿದೆ. ಕೋಲಾರದ ಪಿ.ಜಿ ಕೇಂದ್ರದ ಕಟ್ಟಡ ಕಾಮಗಾರಿಯೂ ಸೇರಿದಂತೆ ವಿವಿಧ ಕಾಮಗಾರಿಗಳು ಹಾಗೂ ನೇಮಕಾತಿಗಳಲ್ಲಿ , ಹೊಸ ಖಾಸಗೀ ಕಾಲೇಜುಗಳಿಗೆ ಅಫಿಲಿಯೇಷನ್ ನೀಡುವಾಗ ವಿಶ್ವವಿದ್ಯಾಲಯದಲ್ಲಿ ಭ್ರಷ್ಟಾಚಾರ ನಡೆದಿರುವ ವರದಿಯಿದೆ. ಇದಲ್ಲದೇ ಪ್ರಶ್ನೆಪತ್ರಿಕೆ ಬಹಿರಂಗ, ಮೌಲ್ಯ ಮಾಪನ ಹಾಗೂ ಮರು ಮೌಲ್ಯಮಾಪನ ನಡೆಸುವಾಗ ಹಾಗೂ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆ ಪ್ರತಿ ಒದಗಿಸುವಾಗ ನಡೆದಿರುವ ಅಕ್ರಮಗಳಿಗೆ ಲೆಕ್ಕವಿಲ್ಲ. ಅಂಕಪಟ್ಟಿ ತಿದ್ದುಪಡಿ ಹಾಗೂ ಅಂಕಪಟ್ಟಿ ಬದಲಾವಣೆ ಪ್ರಕರಣಗಳೂ ಇವೆ. ಹೀಗೆ ಭ್ರಷ್ಟಾಚಾರ ಹಾಗೂ ಪರೀಕ್ಷಾ ಅಕ್ರಮಗಳಿಗೆ ಈ ವಿಶ್ವವಿದ್ಯಾಲಯ ಕುಖ್ಯಾತಿಯಾಗಿದೆ. ಅಲ್ಲದೇ ಬೆಂ ವಿ.ವಿ ದೂರ ಶಿಕ್ಷಣ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಪರೀಕ್ಷೆಗಳಲ್ಲಿ ಅಕ್ರಮ ನಡೆದು ಪರೀಕ್ಷೆಗಳನ್ನು ರದ್ದು ಮಾಡಲಾಗಿದೆ.

ಸಂಶೋಧನೆಯೇ ಇಲ್ಲ

ಕಳೆದ ಎರಡೂವರೆ ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್‌ಡಿ ಗೆ ಪ್ರವೇಶ ಪರೀಕ್ಷೆ ನಡೆದೇ ಇಲ್ಲ. ಸಾಮಾಜಿಕ-ಆರ್ಥಿಕ-ರಾಜಕೀಯ-ವಿಜ್ಞಾನ-ತಂತ್ರಜ್ಞಾನ-ಭಾಷೆ-ಲಿಂಗ ತಾರತಮ್ಯ ಸೇರಿದಂತೆ ಅನೇಕ ವಿಷಯಗಳ ಮೇಲೆ ಮಹತ್ತರವಾದ ಸಂಶೋಧನಾ ಕಾರ್ಯ ನಡೆಯಬೇಕಿದ್ದ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್‌ಡಿ ಪ್ರವೇಶ ಪರೀಕ್ಷೆ ನಡೆಸದಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ.

ಕನಸಾಗುತ್ತಿವೆ ಮೂಲಸೌಕರ್ಯಗಳು

ವಿಶ್ವವಿದ್ಯಾಲಯಡಲ್ಲಿ ಮೂಲ ಸೌಕರ್ಯಗಳ ಕೊರತೆ ವ್ಯಾಪಕವಾಗಿದೆ. ಯಾವುದೇ ವಿಭಾಗಗಳಲ್ಲಿ ಸರಿಯಾದ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲ. ಇರುವ ಶೌಚಾಲಯ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ವಿಶ್ವವಿದ್ಯಾಲಯ ಆವರಣದಲ್ಲಿ ವಿದ್ಯಾರ್ಥಿಗಳು ಅನಾರೋಗ್ಯಕ್ಕೊಳಗಾದಲ್ಲಿ ಚಿಕಿತ್ಸೆ ನೀಡುವಂತಹ ಸೌಲಭ್ಯವಿಲ್ಲ. ವಿದ್ಯಾರ್ಥಿನಿಲಯಗಳಲ್ಲಿ 1500 ವಿದ್ಯಾರ್ಥಿಗಳಿದ್ದಾರೆ. ಆದರೆ ಸಂಖ್ಯೆಗನುಗುಣವಾಗಿ ಶೌಚಾಲಯ, ಸ್ನಾನ ಗೃಹಗಳಿಲ್ಲ. ಎರಡೂವರೆ ವರ್ಷದಿಂದ ಹೊಸ ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿ ಸ್ಥಗಿತಗೊಂಡಿದೆ. ಅಲ್ಲದೇ ಅಂಕಪಟ್ಟಿ ದೋಷ, ವಿತರಣೆಯಲ್ಲಿ ವಿಳಂಬ, ಮೌಲ್ಯಮಾಪನ ದೋಷ ಸೇರಿದಂತೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಗಂಭೀರ ಸಮಸ್ಯೆಯಲ್ಲಿ ಬಳಲುತ್ತಿದ್ದಾರೆ. ಸಮಸ್ಯೆ [illegible] [illegible]. ಕುಲಸಚಿವರಾಗಲಿ ಗಮನ [illegible] [illegible] [illegible] ತೊಡಗಿರುವುದು ವಿದ್ಯಾರ್ಥಿಗಳನ್ನು [illegible] ಕೆರಳಿಸಿದೆ.

ಎಬಿವಿಪಿ-ಶ್ರೀರಾಮಸೇನೆ ಗೂಂಡಾಗಿರಿ ಖಂಡಿಸಿ, ವಿ.ವಿ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಿ ಎಸ್.ಎಫ್.ಐ ಪ್ರತಿಭಟನೆ

ವಿ.ವಿ ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ಬರುತ್ತಿಲ್ಲವೆಂದು ಎ.ಬಿ.ವಿ.ಪಿ ಸಂಘಟನೆ ಸೆಂಟ್ರಲ್ ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿತು. ಈ ಸಂದರ್ಭದಲ್ಲಿ ಆಗಮಿಸಿದ ಕುಲಪತಿಗಳ ಮೇಲೆ ಎ.ಬಿ.ವಿ.ಪಿ ಕಾರ್ಯಕರ್ತರು ದೈಹಿಕ ಹಲ್ಲೆಗೆ ಮುಂದಾಗಿರುವುದು ಈ ಸಂಘಟನೆಯ ಗೂಂಡಾ ಪ್ರವೃತ್ತಿ ಮತ್ತೊಮ್ಮೆ ಬಯಲಾಗಿದೆ. ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದ ಎ.ಬಿ.ವಿ.ಪಿ ಸಂಘಟನೆ ವಿಶ್ವವಿದ್ಯಾಲಯದ ಉನ್ನತ ಸ್ಥಾನದಲ್ಲಿರುವವರ ಮೇಲೆ ದಾಳಿ ಮಾಡಿರುವುದು ಖಂಡನೀಯ.

ಅಲ್ಲದೇ ಬೆಂಗಳೂರು ವಿ.ವಿ ದೂರ ಶಿಕ್ಷಣ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ರದ್ದು ಮಾಡಲಾಗಿದೆ. ಆದರೆ ಇದನ್ನೇ ನೆಪ ಮಾಡಿಕೊಂಡು ದೂರ ಶಿಕ್ಷಣ ಕೇಂದ್ರದ ನಿರ್ದೇಶಕರಾದ ಡಾ॥ ನಿರಂಜನ್ ರವರ ಮೇಲೆ ಪ್ರಮೋದ್ ಮುತಾಲಿಕ್ ಸೇರಿದಂತೆ ಶ್ರೀರಾಮಸೇನೆ ಕಾರ್ಯಕರ್ತರು ಹಲ್ಲೆ ನಡೆಸಿ ಗೂಂಡಾವರ್ತನೆ ಪ್ರದರ್ಶಿಸಿದ್ದಾರೆ. ಈ ಎರಡು ಘಟನೆಗಳನ್ನು ಖಂಡಿಸಿ, ಹಲ್ಲೆ ನಡೆಸಿರುವ ಎ.ಬಿ.ವಿ.ಪಿ ಹಾಗೂ ಶ್ರೀರಾಮಸೇನೆ ಕಾರ್ಯಕರ್ತರನ್ನು ಬಂಧಿಸಲು ಆಗ್ರಹಿಸಿ, ವಿಶ್ವವಿದ್ಯಾಲಯದ ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆ ನಡೆಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ಬೆಂಗಳೂರಿನ ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿತು.

ನಂತರ ಎಸ್.ಎಫ್.ಐ ರಾಜ್ಯ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಬೆಂಗಳೂರು ವಿಶ್ವವಿದ್ಯಾಲಯದ ಬಿಕ್ಕಟ್ಟನ್ನು ಪರಿಹರಿಸಲು ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕೆಂದು ಎಸ್.ಎಫ್.ಐ ಮನವಿ ಮಾಡಿದೆ.

ವಿಶ್ವವಿದ್ಯಾಲಯದ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಸಿಂಡಿಕೇಟ್ ಸಭೆ ನಡೆಸಲು ಎ.ಬಿ.ವಿ.ಪಿ ಒತ್ತಾಯಿಸಿದೆ. ಸಿಂಡಿಕೇಟ್‌ನಲ್ಲಿರುವ ಬಹುತೇಕ ಸದಸ್ಯರು ಸಂಘ ಪರಿವಾರದ ಮೂಲದವರು. ಈ [illegible] [illegible] ಭ್ರಷ್ಟ ವ್ಯವಸ್ಥೆಯನ್ನು ಮುಂದುವರೆಸ [illegible]

ಸಿಪಿಐ(ಎಂ) ಉ.ಕ. ಜಿಲ್ಲಾ 8ನೇ ಸಮ್ಮೇಳನ

ಭೂ ಹೋರಾಟ ತೀವ್ರಗೊಳಿಸಲು ಯೋಜನೆ

ಹಲವಾರು ರಾಷ್ಟ್ರೀಯ ಯೋಜನೆಗಳಾದ ಕಾಳಿ ಜಲವಿದ್ಯುತ್ ಯೋಜನೆಗಳು, ಕೈಗಾ ಅಣುವಿದ್ಯುತ್ ಯೋಜನೆ, ಸೀಬರ್ಡ ನೌಕಾನೆಲೆ, ಶರಾವತಿ ವಿದ್ಯುತ್ ಯೋಜನೆಗಳು, ಕೊಂಕಣ ರೇಲ್ವೆ, ರಾಷ್ಟ್ರೀಯ ಹೆದ್ದಾರಿಗಳಿಗೆ, ಸಿ.ಆರ್.ಝಡ್. ಮುಂತಾದವುಗಳಿಂದ ಉತ್ತರ ಕನ್ನಡ ಜಿಲ್ಲೆಯ ಸಾವಿರ ಸಾವಿರ ಕುಟುಂಬಗಳು ನಿರಾಶ್ರಿತರಾಗಿವೆ. ಈಗ ಕಾರವಾರ-ಜೋಯಿಡಾ 2 ತಾಲೂಕುಗಳಲ್ಲಿ ಆವರಿಸಿ 'ಹುಲಿ ಯೋಜನೆ' ಬಂದಿದೆ.

ಸರಕಾರದ ಪರಿಹಾರ-ಪುನರ್‌ವಸತಿ ಸರಿಯಾಗಿ ನೀಡದೆ ಇರುವುದರಿಂದ ಜನ ಅರಣ್ಯಭೂಮಿಯಲ್ಲಿ ವಾಸ ಮಾಡುವ ಅನಿವಾರ್ಯ ಬಂತು. ಇವತ್ತಿಗೂ ಯೋಜನೆಗಳು ಬಂದು 20-30 ವರ್ಷಗಳಾದರೂ ತಗಡಿನ ಸೆಡ್‌ಗಳಲ್ಲೆ ಜನ ವಾಸ ಮಾಡಬೇಕಾದ ವ್ಯವಸ್ಥೆ ಇದೆ. ಇಂತಹ ಸಂದರ್ಭದಲ್ಲಿ 2006ರ ಅರಣ್ಯ ಕಾಯ್ದೆಯಂತೆ 45 ಸಾವಿರ ಅರಣ್ಯವಾಸಿಗಳು ಅರ್ಜಿ ಹಾಕಿಕೊಂಡು ಪಟ್ಟಾ ನೀಡಲು ಒತ್ತಾಯಿಸುತ್ತಿದ್ದಾರೆ. ಇದಲ್ಲದೆ ನಗರವಾಸಿಗಳು 8-10 ಸಾವಿರ ಕುಟುಂಬಗಳು ಅರ್ಜಿ ಹಾಕಿಕೊಳ್ಳಲಾಗದೆ ತಮ್ಮ ಸೂರು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ




ಜಿಲ್ಲೆಯಾದ್ಯಂತ ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕೆ ಒತ್ತಾಯಿಸಿ, ಬಗರ್ ಹುಕ್ಕುಂ ಸಾಗುವಳಿದಾರರ ಹಕ್ಕು ರಕ್ಷಣೆಗಾಗಿ, ಮನೆ ನಿವೇಶನಕ್ಕಾಗಿ ಒತ್ತಾಯಿಸಿ ಭೂ ಹೋರಾಟ ತೀವ್ರಗೊಳಿಸಲು ಸಿಪಿಐ(ಎಂ) ಪಕ್ಷದ ಉತ್ತರ ಕನ್ನಡ ಜಿಲ್ಲಾ 8ನೇ ಸಮ್ಮೇಳನ ನಿರ್ಣಯ ಅಂಗೀಕರಿಸಿದೆ. ಜಿಲ್ಲೆಗೆ ಪರಿಸರ ಸ್ನೇಹಿ ಕೈಗಾರಿಕೆಗಳನ್ನು ತರುವ ಮೂಲಕ ಯುವಜನರಿಗೆ ಉದ್ಯೋಗ ಕಲ್ಪಿಸಲು ಒತ್ತಾಯಿಸಿ ಹೋರಾಟ ನಡೆಸಲು ಜಿಲ್ಲಾ ಸಮ್ಮೇಳನ ತೀರ್ಮಾನಿಸಿದೆ.

ಡಿಸೆಂಬರ 18-19 ರಂದು 2 ದಿನಗಳ ಕಾಲ ಹೊನ್ನಾವರದಲ್ಲಿ ನಡೆದ ಮಾರ್ಕ್ಸವಾದಿ ಕಮ್ಯುನಿಷ್ಟ ಪಕ್ಷದ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ ಆಕರ್ಷಕ ಬೃಹತ್ ರ‍್ಯಾಲಿ ಬಹಿರಂಗ ಸಭೆಯೊಂದಿಗೆ ದಿ. 18 ರಂದು ಪ್ರಾರಂಭವಾಯಿತು. ಮುಖ್ಯ ಭಾಷಣಕಾರರಾಗಿ ಆಗಮಿಸಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಮಾರುತಿ ಮಾನ್ಪಡೆಯವರು ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡಿರುವ ರಾಜ್ಯ ಸರಕಾರ ಅಭದ್ರವಾಗಿದೆ. ಗಣಿಗಳ್ಳರಿಂದ, ಭೂಗಳ್ಳರಿಂದ ಕೂಡಿರುವ 420 ಸರಕಾರ ಬಿ.ಜೆ.ಪಿ.ಯವರದು. ಸಚಿವ ಸಂಪುಟದ ಬಹುಸಂಖ್ಯಾತ ಮಂತ್ರಿಗಳು ಆಡಳಿತ ಪಕ್ಷದ ಹತ್ತಾರು ಎಂ.ಎಲ್.ಎ.ಗಳು 420 ಕೆಲಸದಲ್ಲಿದ್ದಾರೆ. ಬದಲಿ ಸರಕಾರ ಕೊಡುತ್ತೇವೆ ಎಂದವರು ಇದೇ ಬದಲಿ ಸರಕಾರ ಎಂದು ರಾಜ್ಯದ ಜನತೆ ತಿಳಿಯಬೇಕೆಂದರು.

ಮತ್ತೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಬಿ. ಮಾಧವರವರು ಬಹಿರಂಗ ಸಭೆಯಲ್ಲಿ ಮಾತನಾಡುತ್ತ ಬೆಲೆ ಏರಿಕೆಯಿಂದ ಜನ ತತ್ತರಿಸುತ್ತಿದ್ದಾರೆ. ಇಂತಹ ಗಂಭೀರ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು ತಮ್ಮ ಖುರ್ಚಿ ರಕ್ಷಣೆಯಲ್ಲೇ ಮಗ್ನರಾಗಿದ್ದಾರೆ. ಸರಕಾರವೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಅನುಮತಿ ನೀಡಿ ಎಲ್ಲ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಈ ಸರಕಾರಗಳ ವಿರುದ್ಧ ತೀವ್ರ ಚಳುವಳಿ ನಡೆಸಬೇಕಾಗಿದೆ ಎಂದರು.

ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಶಾಂತಾರಾಮ ನಾಯಕ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ತಿಲಕ ಗೌಡ ಸ್ವಾಗತಿಸಿದರು. ಕಾರ್ಯದರ್ಶಿ ಗೀತಾ ನಾಯ್ಕ ವಂದಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಂಜುನಾಥ ಪುಲ್ಕರ ಸುಭಾಶ ಕೊಪ್ಪಿಕರ, ಯಮುನಾ ಗಾಂವಕರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಪ್ರತಿನಿಧಿ ಅಧಿವೇಶವನ್ನು ಕಾಂ। ಬಿ. ಮಾಧವ ಉದ್ಘಾಟಿಸಿದರು. ಕಾಂ। ಹರಕಿಶನ್ ಸಿಂಗ್ ಸುರ್ಜಿತ್ ವೇದಿಕೆಯಲ್ಲಿ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಅತಿ ಹಿಂದುಳಿದ ತಾಲೂಕಾದ ಜೋಯಿಡಾ ಗಡಿ ತಾಲೂಕಾಗಿದ್ದು, ಹಿಂದುಳಿದ ಬುಡಕಟ್ಟು ಜನರೆ ಹೆಚ್ಚಿನದಾಗಿ ವಾಸವಾಗಿರುವುದರಿಂದ ಈ ತಾಲೂಕಿನ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಬೇಕೆಂದು ಒತ್ತಾಯಿಸಿ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟ ನಡೆಸಲು ನಿರ್ಧರಿಸಿ ಅಂಗೀಕರಿಸಲಾಯಿತು. ಬಸವ-ಇಂದಿರಾ ವಸತಿ ಫಲಾನುಭವಿಗಳ ಆಯ್ಕೆ ಅಧಿಕಾರ ಗ್ರಾಮಸಭೆಗಳಿಗೆ ನೀಡಬೇಕೆಂದು ಒತ್ತಾಯಿಸಿ, ದಲಿತರು ಮತ್ತು ಬುಡಕಟ್ಟು ಜನರ ಹಕ್ಕುಗಳ ರಕ್ಷಣೆಗೆ ಒತ್ತಾಯಿಸಿ, ವಿದ್ಯುತ್ ಖಡಿತ ನಿಲ್ಲಿಸಲು ಆಗ್ರಹಿಸಿ ಇನ್ನು ಮುಂತಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.



ನೂತನ ಕಾರ್ಯದರ್ಶಿ
ಶಾಂತಾರಾಮ ನಾಯಕ್



ನೂತನ ಸಮಿತಿ ಆಯ್ಕೆ : ಜಿಲ್ಲಾ ಸಮ್ಮೇಳನದಲ್ಲಿ 17 ಜನರ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಶಾಂತಾರಾಮ ನಾಯಕ ಪುನರಾಯ್ಕೆಗೊಂಡರು. ಕಾರ್ಯದರ್ಶಿ ಮಂಡಳಿಗೆ ತಿಲಕ ಗೌಡ, ಮಂಜುನಾಥ ಪುಲ್ಕರ, ಸುಭಾಶ ಕೊಪ್ಪಿಕರ, ಯಮುನಾ ಗಾಂವ್ಕರ ಆಯ್ಕೆಯಾದರು. ಜಿಲ್ಲಾ ಸಮಿತಿ ಸದಸ್ಯರಾಗಿ ಸಿ.ಆರ್. ಶಾನಭಾಗ, ಎಚ್.ಬಿ. ನಾಯಕ, ರೋಹಿತ, ತಿಮ್ಮಪ್ಪ ಗೌಡ, ಸವಿತಾ ತನ್ಮಡಗಿ, ಪ್ರೇಮಾನಂದ ವೇಳಿಪ, ಶ್ಯಾಮನಾಥ ನಾಯ್ಕ, ಗುಲಾಬಿ ನಾಯ್ಕ, ಕಲ್ಪನಾ ನಾಯ್ಕ, ಮೋಹಿನಿ ನಮಸೇಕರ, ಆರ್.ಎಂ. ಮುಲ್ಲಾ ಮತ್ತು ಹರೀಶ ನಾಯ್ಕ ಆಯ್ಕೆಯಾದರು.

ಬೆಳ್ತಂಗಡಿ ನಿವೇಶನ ರಹಿತರು

ಪುಟ 5 ರಿಂದ

ಕವಿತ, ಸವಿತ, ಈಶ್ವರಿ, ಲಾರೆನ್ಸ್, ಸುಜಿತ್, ದೇವಕಿ,(ಪಂಚಾಯ್ತು ಸದಸ್ಯೆ) ಜಯಶ್ರೀ, ಸಂಜೀವ ನಾಣ್ಕು ಹಾಗೂ ಶಾಖಾ ಕಾರ್ಯದರ್ಶಿಗಳ ಶ್ರಮ ನಿರಂತರ ಸಾಗಿದೆ.

ನಿವೇಶನ ರಹಿತರಿಗೆ ನಿವೇಶನ, ಆಕ್ರಮಿತ ನಿವೇಶನದಾರರಿಗೆ ಹಕ್ಕು ಪತ್ರ ಇದು ಪ್ರಮುಖ ಬೇಡಿಕೆ. ಈ ಪ್ರಮುಖ ಬೇಡಿಕೆ ಈಡೇರದೆ ಈ ಹೋರಾಟ ನಿಲ್ಲುವುದಿಲ್ಲ ಎಂಬ ಪ್ರಚಾರ ತಾಲೂಕಿನಾದ್ಯಂತ ನಡೆದಿದೆ. ಇದರಿಂದ ಸಿ.ಪಿ.ಐ.(ಎಂ) ಕಛೇರಿ ನಿವೇಶನ ರಹಿತರಿಗೆ ಅರ್ಜಿ ಸಲ್ಲಿಸುವ ಕೇಂದ್ರವಾಗಿ ಪರಿಣಮಿಸಿದೆ. ನಿವೇಶನ ವಂಚಿತರು ಈಗ ಸಿ.ಪಿ.ಐ.(ಎಂ) ಯನ್ನು ಬೆಂಬಲಿಸಿ ಹೋರಾಟಕ್ಕೆ ಸಿದ್ಧರಾಗಿ ಬರುತ್ತಿರುವುದು ಒಳ್ಳೆಯ ಬೆಳವಣಿಗೆ.

ಈ ಹಿಂದೆ 1997 ರಿಂದ 1999ರ ತನಕ ಪಕ್ಷ ಬೆಳ್ತಂಗಡಿ ತಾಲೂಕಿನ ಲ್ಯಾಲ ಗ್ರಾಮದಲ್ಲಿ ನಿವೇಶನ ನಿವೇಶನ ಹಕ್ಕುಪತ್ರಕ್ಕಾಗಿ ಹೋರಾಟ ನಡೆಸಿ ಯಶಸ್ವಿಯಾದದ್ದೇ ಈಗಿನ ಹೋರಾಟಕ್ಕೆ ಸ್ಫೂರ್ತಿ. 75 ಜನರನ್ನು ಲ್ಯಾಲ ಗ್ರಾಮದ ಸರಕಾರಿ ಭೂಮಿಯಲ್ಲಿ ಆಕ್ರಮಿಸಿ ಗುಡಿಸಲು ಕಟ್ಟಿಸಿ ಕೂರಿಸಿದ ಪಕ್ಷ, ಅದರ ಪಕ್ಕ ಇದ್ದ 250 ಮನೆಗಳಿಗೆ 36 ವರ್ಷಗಳಿಂದ ಹಕ್ಕುಪತ್ರ ಇಲ್ಲದೆ ಒದ್ದಾಡುತ್ತಿರುವವರನ್ನು ಸೇರಿಸಿ 2 ವರ್ಷ ಎಡೆಬಿಡದೆ ನಡೆಸಿದ ಹೋರಾಟದ ಪರಿಣಾಮ ಎಲ್ಲರಿಗೂ ಹಕ್ಕುಪತ್ರ ದೊರೆಯುವಂತಾಯಿತು. ಪ್ರತಿ ಚುನಾವಣೆ ಸಮಯ ಈ ಬಾರಿ ಮತ ಕೊಡಿ ನಿಮಗೆ ಹಕ್ಕುಪತ್ರ ಗ್ಯಾರಂಟಿ ಎಂದು 36 ವರ್ಷಗಳಿಂದ 7 ಎಂ.ಎಲ್.ಎ.ಗಳೂ ಗೆದ್ದರೂ ಹಕ್ಕುಪತ್ರ ಸಿಗದಿದ್ದಾಗ ಸಿ.ಪಿ.ಐ.(ಎಂ) ಪಕ್ಷದ ನೇತೃತ್ವದಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಹೋರಾಡಲು ಮುಂದಾದರು. ಸಿ.ಪಿ.ಐ.(ಎಂ) ಪಕ್ಷದ ಹೋರಾಟದಿಂದ 300ಕ್ಕೂ ಮಿಕ್ಕಿ ಜನರಿಗೆ ಈ ಹಕ್ಕುಪತ್ರ ಸಿಕ್ಕಿತ್ತು. ಇದುಸಿ.ಪಿ.ಐ.(ಎಂ) ಪಕ್ಷದಿಂದಾಯಿತು ಎಂದು ಜನರು ಹೇಳುವಂತಹ ಯಶಸ್ಸು ಪಕ್ಷದ ಹೋರಾಟಕ್ಕೆ ದೊರೆಯಿತು.

ಈ ಬಾರಿ ನಿವೇಶನ ರಹಿತರಿಗೆ ನಿವೇಶನ ಸಿಗದೆ, ಆಕ್ರಮಿತರಿಗೆ ಹಕ್ಕುಪತ್ರ ಸಿಗದೆ ಸಿ.ಪಿ.ಐ.(ಎಂ) ಪಕ್ಷ ಹೋರಾಟ ನಿಲ್ಲಿಸುವುದಿಲ್ಲ, ನಮಗೆಲ್ಲಾ ಹಕ್ಕುಪತ್ರ ಸಿಕ್ಕೇ ಸಿಗುತ್ತದೆ ಎಂಬ ಧೈರ್ಯ ಜನರಿಗೆ ಬಂದಿದೆ. ಎಲ್ಲರೂ ಸ್ಫೂರ್ತಿಯೊಂದ ಹೋರಾಟಕ್ಕೆ ಮುನ್ನುಗ್ಗುತ್ತಿದ್ದಾರೆ. ಹೋರಾಟ ಯಶಸ್ವಿಗುತ್ತದೆ ಎಂಬ ಧೈರ್ಯ ಜನರಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ೀಕಪಾಲ ಮಸೂದೆಗೆ ಕೊನೆಗೂ, ನಾಲ್ಕು ದಶಕಗಳ ಹೋರಾಟದ ನಂತರ ಲೋಕಸಭೆ ಅಂಗೀಕಾರ ಡಿದೆ. ಆದರೆ ಈಗಲೂ ಅದು ಕನಿಷ್ಟ ನಾಲ್ಕು ಕೊರತೆಗಳಿಂದ ನರಳುತ್ತಿದೆ. ಉನ್ನತ ಸ್ಥಾನಗಳಲ್ಲಿ ಷ್ಟಾಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವುದು ಇವನ್ನು ಸರಿಪಡಿಸದೆ ಸಾಧ್ಯವಿಲ್ಲ ಎಂದು ಪಿಐ(ಎಂ) ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೇಳುತ್ತಿದ್ದರೂ ಭಾರತದ ಆಳುವ ವರ್ಗಗಳು ದಕ್ಕೆ ಬೇಕೆಂದೇ ಗಮನ ಕೊಡುತ್ತಿಲ್ಲ (ಈ ಬಗ್ಗೆ ವಿವರಗಳಿಗೆ ಇದೆ ಸಂಚಿಕೆಯಲ್ಲಿ ಪ್ರಕಟವಾಗಿರುವ ೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ನೋಡಿ). ಇದರಿಂದಾಗಿ ಇದಕ್ಕೆ ಸಂವಿಧಾನಿಕ ಸ್ಥಾನಮಾನ ಡುವ ಸರಕಾರದ ಸಂವಿಧಾನ ತಿದ್ದುಪಡಿ ಮಸೂದೆ ಬಿದ್ದು ಹೋಗಿದೆ. ರಾಜ್ಯಸಭೆ ಇದನ್ನು ಂಗೀಕರಿಸದೆಯೇ ಅನಿರ್ದಿಷ್ಟ ಕಾಲ ಮುಂದೂಡಲ್ಪಟ್ಟಿದೆ. ಲೋಕಪಾಲ ಮಸೂದೆಗಾಗಿ ಹೋರಾಟದಲ್ಲಿ ತ್ತೀಚೆಗೆ ಸೇರಿಕೊಂಡ ಅಣ್ಣಾ ಹಝಾರೆ 'ತಂಡ' ಕೂಡ ಅಸಮಾಧಾನ ವ್ಯಕ್ತಪಡಿಸಿದರೂ ತಮ್ಮ ಉಪವಾಸ ಸತ್ಯಾಗ್ರಹವನ್ನು, ಜೈಲ್ ಭರೋ ಕಾರ್ಯಕ್ರಮವನ್ನು ಹಿಂತೆಗೆದುಕೊಂಡಿದೆ. ಆದರೆ ಇದರ ಡುವೆಯೂ ಮನಮೋಹನ ಸಿಂಗ್ ಸರಕಾರದ ನವ-ಉದಾರವಾದಿ ತೆವಲುಗಳು ುಂದುವರೆಯುತ್ತಲೇ ಇವೆ.

ಭೂಸ್ವಾಧೀನ ಮಸೂದೆ: ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ ತಡೆಯಿಲ್ಲ

ಯುಪಿಎ-2 ಸರಕಾರ ತಯಾರಿಸಿರುವ ೂಸ್ವಾಧೀನ ಮತ್ತು ಪುನರ್ವಸತಿ ಮಸೂದೆ, 011 'ಭೂಮಿ ಕಳಕೊಳ್ಳುವವರು ಮತ್ತು ಇತರ ಂತ್ರಸ್ತ ಕುಟುಂಬಗಳನ್ನು ಅಭಿವೃದ್ಧಿಯ ಾಲುದಾರರನ್ನಾಗಿ ಮಾಡಿ ಸ್ವಾಧೀನದ ನಂತರ ವರ ಸಾಮಾಜಿಕ-ಆರ್ಥಿಕ ಸ್ಥಾನಮಾನವನ್ನು ುತ್ತಮ ಪಡಿಸುತ್ತದೆ' ಎಂದು ೀಳಿಕೊಂಡಿದ್ದರೂ, ವಾಸ್ತವವಾಗಿ ಇದು ಅದರ ುಡಕಟ್ಟು ಜನ-ವಿರೋಧಿ ಸ್ವರೂಪವನ್ನು ಮರೆ ಾಚುವ ಮಾತು ಎಂದು 'ಆದಿವಾಸಿ ಅಧಿಕಾರ್ ಾಷ್ಟ್ರೀಯ ಮಂಚ್' ಬಲವಾಗಿ ಟೀಕಿಸಿದೆ.

ಈ ಮಸೂದೆ ಕಾನೂನಾದರೆ, ನವ-ಉದಾರವಾದೀ ವ್ಯವಸ್ಥೆಯಲ್ಲಿ ಗಟ್ಟಿಗೊಂಡ ಂದು ಪ್ರವೃತ್ತಿಯನ್ನು, ಅಂದರೆ, ಆದಿವಾಸಿ ಮುದಾಯಗಳಿಂದ ಭೂಕಬಳಿಕೆ ಮತ್ತು ರಭಾರೆ ಪ್ರವೃತ್ತಿಯನ್ನು ಇನ್ನಷ್ಟು ಟ್ಟಿಗೊಳಿಸುವ ಸಾಧನವಾಗಲಿದೆ. ಈ ದನೇ ಶೆಡ್ಯೂಲಿನ ಪ್ರದೇಶದ ನೆಲದ ಳಗಿರುವ ಖನಿಜ ಸಂಪತ್ತಿನ ಲೂಟಿಯನ್ನು ಮಸೂದೆ ತಡೆಯಲಾರದು. ಬದಲಾಗಿ ದಿವಾಸಿ ಜನತೆ ತಾವು ವಾಸಿಸುವ ಈ ್ರದೇಶದಿಂದ ಕಾನೂನಾತ್ಮಕವಾಗಿಯೇ ೊರಗುಳಿಯುತ್ತಾರೆ. ಅವರ ಜೀವನಾಧಾರದ ಕ್ಕಿಗೆ ಯಾವ ರಕ್ಷಣೆಯೂ ಉಳಿಯುವುದಿಲ್ಲ. ದು ಖಾಸಗಿ ಕಂಪನಿಗಳು ಬುಡಕಟ್ಟು ್ರದೇಶಗಳನ್ನು ಪ್ರವೇಶಿಸಲು ಅವಕಾಶ ಾಡಿಕೊಡುತ್ತದಷ್ಟೇ ಅಲ್ಲ, 80ಶೇ. ಜನರ ಪ್ಪಿಗೆಯು ಅಗತ್ಯವಿಲ್ಲವಾದ್ದರಿಂದ ಇದು ಾವುದೇ ತಕರಾರಿಲ್ಲದೆ ಅವರಿಗೆ ವಹಿಸುವ ೊಡುಗೆಯೇ ಆಗಿದೆ.

ಆದ್ದರಿಂದ ಇದು ಯುಪಿಎ-2 ಸರಕಾರದ ವ-ಉದಾರವಾದಿ ತೆವಲುಗಳನ್ನು ಂಬಿಸಿಕೊಂಡ ಕರಾಳ ಶಾಸನ, ಇದರಲ್ಲಿ ೂಲಭೂತ ಬದಲಾವಣೆಗಳ ಅಗತ್ಯವಿದೆ ಂದು ಬುಡಕಟ್ಟು ಜನಗಳ ಮಧ್ಯೆ ಕೆಲಸ ಮಾಡುವ ಕಾರ್ಯಕರ್ತರು ಆಗ್ರಹಿಸುತ್ತಿದ್ದಾರೆ.

★

ಅಲ್ಪಸಂಖ್ಯಾತರಿಗೆ ನಾಮಮಾತ್ರದ ಮೀಸಲಾತಿ

ಯುಪಿಎ-2 ಸಂಪುಟ ಅಲ್ಪಸಂಖ್ಯಾತರಿಗೆ 27 ಶೇ. ಒಬಿಸಿ ಮೀಸಲಾತಿಯೊಳಗೇ 5ಶೇ. ಮೀಸಲಾತಿ ನೀಡಬೇಕು ಎಂದು ನಿರ್ಧರಿಸಿದೆ. ಇದು ಮೇಲ್ನೋಟಕ್ಕೆ ಅಲ್ಪಸಂಖ್ಯಾತರಿಗೆ ಉಪಕಾರ ಮಾಡುವಂತೆ ಕಂಡರೂ, ವಾಸ್ತವವಾಗಿ ಬಹಳ ತಡವಾಗಿ ಕೈಗೊಂಡ ಕೇವಲ ಕಣ್ಣೊರೆಸುವ ನಿರ್ಧಾರ. ನ್ಯಾಯಮೂರ್ತಿ ರಂಗನಾಥ ಮಿಶ್ರ ಆಯೋಗ ಐದು ವರ್ಷಗಳ ಹಿಂದೆ ಸಲ್ಲಿಸಿದ ವರದಿಯಲ್ಲಿ ಮುಸ್ಲಿಮರಿಗೆ 10ಶೇ. ಮತ್ತು ಇತರ ಅಲ್ಪಸಂಖ್ಯಾತರಿಗೆ 5ಶೇ. ಮೀಸಲಾತಿಯನ್ನು ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿಕೆಯ



ವೇದರಾಜ ಎನ್.ಕೆ.

ಆಧಾರದಲ್ಲಿ ಕೊಡಬೇಕು ಎಂದು ಶಿಫಾರಸು ಮಾಡಿತ್ತು.

ಇದು ವರೆಗೆ ಈ ಬಗ್ಗೆ ಸುಮ್ಮನಿದ್ದ ಯುಪಿಎ-2 ಸರಕಾರ ಇನ್ನೇನು ಉತ್ತರಪ್ರದೇಶ ವಿಧಾನಸಭೆಯ ಚುನಾವಣೆಗಳ ಘೋಷಣೆಯಾಗುತ್ತದೆ ಎಂದಿದ್ದಾಗ ಕೇವಲ 5ಶೇ. ಮೀಸಲಾತಿಯನ್ನು, ಅದೂ ಎಲ್ಲ ಅಲ್ಪಸಂಖ್ಯಾತರಿಗೆ, ಅದು ಕೂಡ ಒಬಿಸಿಯ 27 ಶೇ. ಕೋಟಾದೊಳಗೇ ಕೊಡುವ ನಿರ್ಧಾರವನ್ನು ಪ್ರಕಟಿಸಿದೆ. ಯುಪಿಎ-2 ರ ಚುನಾವಣಾ ಸಮಯಸಾಧಕತನದ ಮತ್ತೊಂದು ಉದಾಹರಣೆ.

★

ರೈತರ ಆತ್ಮಹತ್ಯೆಗಳ ಸಂಖ್ಯೆ ಅತಿರಂಜಿತವಂತೆ!

ಹೌದು, ಯುಪಿಎ-2 ಸರಕಾರದ ಮಾನ್ಯ ಕೃಷಿ ಮಂತ್ರಿಗಳು ರಾಜ್ಯಸಭೆಯಲ್ಲಿ ನೀಡಿರುವ ಹೇಳಿಕೆ ಇದು. 2010 ರಲ್ಲಿ ದೇಶದಲ್ಲಿ 15,964 ರೈತರು ಆತ್ಮಹತ್ಯೆ ಮಾಡಿಕೊಂಡರು ಎಂಬ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ)ಯ ಅಂಕೆ-ಸಂಖ್ಯೆ ಅತಿರಂಜಿತವಾದ ಸಂಖ್ಯೆ, ಈ ಎನ್ ಸಿಆರ್ ಬಿ ಸರ್ವೆಯಲ್ಲಿ ಸೇರಿದ್ದ 26 ರಾಜ್ಯಗಳಲ್ಲಿ 16 ರಾಜ್ಯಗಳು ಕೊಟ್ಟಿರುವ ಸಂಖ್ಯೆಗಳ ಪ್ರಕಾರ ರೈತರ ಆತಯ್ಮ ಹತ್ಯೆಗಳು ಕಡಿಮೆಯಾಗುತ್ತಿವೆ ಎಂದು ಅವರು ಹೇಳಿದರು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಿಜವಂತೆ, ಆದರೆ ಅದು ಕೃಷಿ ಸಂಕಟದಿಂದಾಗಿ ಹಾಗೆ ಮಾಡುತ್ತಿಲ್ಲ, ಅವರಿಗೆ ಸಿಕ್ಕ ವರದಿಗಳ ಪ್ರಕಾರ ಕೃಷಿ ಸಂಕಟದಿಂದ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಸುಮಾರು 800 ಮಾತ್ರವಂತೆ. ಈ ಎರಡು ಸಂಖ್ಯೆಗಳ ನಡುವೆ ಅಗಾಧ ಅಂತರ ಇರುವುದರಿಂದ ಒಂದು ಜಂಟಿ ಸಂಸದೀಯ ಸಮಿತಿಯನ್ನು ರಚಿಸಿ ಅದು 'ನಿಜ ಸಂಗತಿ' ತಿಳಿಯಲು ಈ ರಾಜ್ಯಗಳಿಗೆ ಭೇಟಿ ನೀಡಬಹುದು ಎಂದು ಮಂತ್ರಿಗಳು ಸೂಚನೆಯಿತ್ತರು. 'ಇದನನು ಹೆಚ್ಚಿನ ಎಂಪಿಗಳು ಸ್ವಾಗತಿಸಿದರಂತೆ. ಅದೇನೋ ಸರಿ, ಆದರೆ ಈ ಕುರಿತು ಚರ್ಚೆಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳು ಈ ಮೂಲಕ ಕೃಷಿ ಬಿಕ್ಕಟ್ಟೇನೂ ಇಲ್ಲ ಎಂದು ನಿರಾಕರಿಸುತ್ತಿರುವುದು, ಆಮೂಲಕ ನವ-ಉದಾರವಾದಿ ನೀತಿಗಳನ್ನು ಬದಲಾಯಿಸುವ ಅಗತ್ಯವೇನೂ ಇಲ್ಲ ಎಂದು ಬಿಂಬಿಸುತ್ತಿರುವುದು ಗಮನಾರ್ಹ ಸಂಗತಿ. ಈ ನೀತಿಗಳು ಹುಟ್ಟು ಹಾಕಿದ ಮಾನವ ದುರಂತದ ಪರಿವೆ ಈ ಯುಪಿಎ-2 ಸರಕಾರಕ್ಕೆ ಇದ್ದಂತಿಲ್ಲ.

★

ಕಾರ್ಮಿಕರ ಭವಿಷ್ಯ ನಿಧಿಗೆ ಮಾತ್ರವೇ ಬಡ್ಡಿದರ ಇಳಿಕೆ ಏಕೆ?

ಹಣದುಬ್ಬರ ತಡೆಯಲು ಬಡ್ಡಿದರಗಳನ್ನು ಏರಿಸುವುದು ಈಗ ಯುಪಿಎ-2 ಸರಕಾರದ ಹಣಕಾಸು ಧೋರಣೆಯ ಭಾಗವಾಗಿರುವಾಗ ಕಾರ್ಮಿಕರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು ಇಳಿಸುವ ಹುನ್ನಾರ ಏಕೆ? ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ರಿಝರ್ವ್ ಬ್ಯಾಂಕ್ ಬಡ್ಡಿದರಗಳನ್ನು ಏರಿಸುತ್ತಲೇ ಬರುತ್ತಿದೆ. ಆದರೆ ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿದರವನ್ನು 9.5% ದಿಂದ 8.25%ಕ್ಕೆ ಇಳಿಸಬೇಕು ಎಂಬ ಯುಪಿಎ-2 ಸರಕಾರದ ಪ್ರಸ್ತಾವ ಅದರ ಕಾರ್ಮಿಕ-ವಿರೋಧಿ ಸ್ವರೂಪದ ಪ್ರತೀಕವೇ. ಸಹಜವಾಗಿಯೇ ಎಡಪಂಥೀಯ ಕಾರ್ಮಿಕ ಸಂಘಗಳು ಮಾತ್ರವಲ್ಲ, ಕಾಂಗ್ರೆಸ್, ಬಿಜೆಪಿ, ಡಿಎಂಕೆ ಪರವಾಗಿರುವ ಕಾರ್ಮಿಕ ಸಂಘಗಳೂ ಇದನ್ನು ಬಲವಾಗಿ ವಿರೋಧಿಸಿವೆ. ಡಿಸೆಂಬರ್ 23 ರಂದು ನಡೆದ ನೌಕರರ ಭವಿಷ್ಯ ನಿಧಿಯ ಟ್ರಸ್ಟಿಗಳ ಕೇಂದ್ರೀಯ ಮಂಡಳಿಯ ಸಭೆಯಲ್ಲಿ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೆಲ್ಲರೂ ಸರಕಾರದ ಈ ಪ್ರಸ್ತಾವವನ್ನು ಏಕಕಂಠದಿಂದ ವಿರೋಧಿಸುತ್ತಾ, ಭವಿಷ್ಯ ನಿಧಿ ಕಾರ್ಮಿಕರ ಜೀವಮಾನದ ಉಳಿತಾಯ, ಇದರ ಮೇಲೆ ಬಡ್ಡಿದರವನ್ನು 9.5%ದಿಂದ ಇಳಿಸುವುದನ್ನು ತಾವು ಎಳ್ಳಷ್ಟೂ ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಕಾರ್ಮಿಕ ಇಲಾಖೆ ಕಾರ್ಮಿಕ ಪ್ರತಿನಿಧಿಗಳ ಈ ಅಭಿಪ್ರಾಯವನ್ನು ಹಣಕಾಸು ಇಲಾಖೆಗೆ ಕಳಿಸುವುದಾಗಿ ಹೇಳಿದೆ.



ಅಲ್ಪಸಂಖ್ಯಾತರಿಗೆ ಮೀಸಲಾತಿ ಸೂಚನೆ : ಏನೇನೂ ಸಾಲದು
ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿಕೆ - ಡಿಸೆಂಬರ್ 23

ಉದ್ಯೋಗಾವಕಾಶಗಳಲ್ಲಿ ಅಲ್ಪ ಸಂಖ್ಯಾತರಿಗೆ ಈಗಿನ ಇತರ ಹಿಂದುಳಿದ ವರ್ಗ (OBC) ಕೋಟಾ 27 ಶೇಕಡಾದ ಒಳಗೇ ಶೇ5 ಮೀಸಲಾತಿ ನೀಡುವ ಕೇಂದ್ರ ಸಚಿವ ಸಂಪುಟದ ನಿರ್ಧಾರ ಏನೇನೂ ಸಾಲದು. ಅದು ನ್ಯಾಯಮೂರ್ತಿ ರಂಗನಾಥ ಮಿಶ್ರ ಆಯೋಗದ ಪ್ರಮುಖ ಶಿಫಾರಸ್ಸನ್ನು ಪ್ರತಿಬಿಂಬಿಸುವುದಿಲ್ಲ. ಯುಪಿಎ ಸರ್ಕಾರವು ಮುಂಬರುವ ಉತ್ತರ ಪ್ರದೇಶದ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಸಾಂಕೇತಿಕ ಕ್ರಮವನ್ನು ಕೈಗೊಂಡಿದೆ.

ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಆಧಾರದಲ್ಲಿ ಮುಸ್ಲಿಮರಿಗೆ ಶೇ 10. ಮತ್ತು ಇತರ ಅಲ್ಪ ಸಂಖ್ಯಾತರಿಗೆ ಶೇ 5 ರಷ್ಟು ಮೀಸಲಾತಿ ನೀಡಬೇಕೆಂಬ ರಂಗನಾಥ ಮಿಶ್ರ ಆಯೋಗದ ವರದಿಯನ್ನು ಜಾರಿ ಮಾಡಬೇಕೆಂದು ಸಿಪಿಐ(ಎಂ) ಪುನರುಚ್ಚರಿಸುತ್ತದೆ.


ಇದನ್ನು ಸಾಧ್ಯಗೊಳಿಸಲು ಅಗತ್ಯವಾದ ಸಂವಿಧಾನ ತಿದ್ದುಪಡಿಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಯಶಸ್ವಿಯಾದ ರಾಯಚೂರು ಜಿಲ್ಲಾ ಸಿಪಿಐ(ಎಂ)ನ ಸಮ್ಮೇಳನ

ಡಿಸೆಂಬರ್ 9ರಿಂದ11ರವರೆಗೆ 3 ದಿನಗಳ ಕಾಲ ರಾಯಚೂರು ನಗರದಲ್ಲಿ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಜಿಲ್ಲೆಯ ವಿವಿಧ ತಾಲೂಕುಗಳಿಂದ ಬಂದ ಸಾವಿರಾರು ಅಭಿಮಾನಿಗಳು ನಗರದ ಉದ್ಯಾನವನದಲ್ಲಿ ಸೇರಿದರು. ಅಲ್ಲಿಂದ ಹೊರಟ ಕೆಂಬಾವುಟಗಳಿಂದ ಹೊಯ್ದಾಡುತ್ತಿದ್ದ ಆಕರ್ಷಕ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಾಗಿ ನಗರದ ಕೇಂದ್ರದಲ್ಲಿರುವ ಮಹಿಳಾಸಮಾಜದಲ್ಲಿ ಸೇರಿತು. ಸಾಂಪ್ರದಾಯಿಕ ವಾದ್ಯಗಳ ಭೋರ್ಗರೆತದ ಜೊತೆ ಮೆರವಣಿಗೆಕಾರರ ಘೋಷಣೆಗಳು ನಗರದಲ್ಲೆಲ್ಲಾ ಕಡೆ ಮಾರ್ದನಿಸಿದವು. ಲಂಬಾಣಿ ಜನಾಂಗದ ಸಾಂಪ್ರದಾಯಿಕ ನೃತ್ಯ ನಾಗರಿಕರು ಬೆರಗಾಗಿ ನೋಡುವಂತೆ ಮಾಡಿತು.

ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಕಾ॥ ನಿತ್ಯಾನಂದ ಸ್ವಾಮಿಗಳು ಜನತೆ ನಿರಂತರವಾಗಿ ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ವಿವರಿಸಿದರು. ಇಂತಹ ಸ್ಥಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನತೆಯ ಕಷ್ಟಗಳನ್ನು ನಿವಾರಿಸದೆ ಭ್ರಷ್ಟಾಚಾರದಲ್ಲಿ ಮುಳುಗಿ ಸಿಕ್ಕಿಬಿದ್ದು ಒಬ್ಬರಾದ ಮೇಲೆ ಮತ್ತೊಬ್ಬರಂತೆ ಹೇಗೆ ಜೈಲಿಗೆ ಪರೇಡ ನಡೆಸುತ್ತಿದ್ದಾರೆಂಬುದನ್ನು ವಿವರಿಸಿದರು. ಬಂಡವಾಳಶಾಹಿ ವ್ಯವಸ್ಥೆ ಜಗತ್ತಿನಲ್ಲಿ ಸಂಕಷ್ಟಗಳ ಸರಮಾಲೆಯನ್ನು ಹೇಗೆ ಹೆಚ್ಚಿಸುತ್ತಿದೆ ಎಂಬುದನ್ನು ವಿವರಿಸಿದರು. ಭೂಮಾಲಿಕ-ಬಂಡವಾಳಶಾಹಿ ಸರಕಾರಗಳು ಆಡಳಿತ ನಡೆಸಲು ಆಗದೆ ವಿಫಲವಾಗಿರುವುದನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಕಾರ್ಮಿಕವರ್ಗದ ನಾಯಕತ್ವದಲ್ಲಿ ದುಡಿಯುವ ವರ್ಗ ಮತ್ತು ಪ್ರಗತಿಪರರ ಪಡೆ ಹೋರಾಟಗಳ ಮುಖಾಂತರವೇ ಪರ್ಯಾಯವೊಂದನ್ನು ಪ್ರತಿಪಾದಿಸುವ ರೀತಿಯನ್ನು ತೋರಿಸಿಕೊಟ್ಟರು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ॥ ಕರಿಯಪ್ಪ ಅಚ್ಚೊಳ್ಳಿ ವಹಿಸಿದ್ದರು. ಸಿದ್ಧತಾಸಮಿತಿಯ ಕಾರ್ಯದರ್ಶಿ ಕಾ॥ ಶರಣಬಸವ ಸ್ವಾಗತಿಸಿದರು. ಕಾ॥ ಮಲ್ಲಯ್ಯ ಜಾಲಹಳ್ಳಿ ಜಿಲ್ಲೆಯ ನೀರಾವರಿ ಯೋಜನೆಗಳ ಜಾರಿಗೆ ಒತ್ತಾಯಿಸಿ ನಿರ್ಣಯವನ್ನು ಮಂಡಿಸಿದರು. ಬಹಿರಂಗ ಸಭೆ ಅಂಗೀಕರಿಸಿತು. ಜಿಲ್ಲಾಸಮಿತಿಯ ಎಲ್ಲಾ ಸದಸ್ಯರು ವೇದಿಕೆಯಲ್ಲಿ ಆಸೀನರಾಗಿದ್ದರು. ಅಂತಿಮವಾಗಿ ಕಾ॥ ಕೆ.ಜಿ.ವೀರೇಶ್ ವಂದನಾರ್ಪಣೆ ಸಲ್ಲಿಸಿದರು.

ಸಮ್ಮೇಳನದ ಕಲಾಪಗಳನ್ನು ಜಿ. ಸುರೇಶ್, ಎಚ್. ಪದ್ಮ ಮತ್ತು ಶೇಕ್ಷಾಖಾದ್ರಿ ಒಳಗೊಂಡ ಅಧ್ಯಕ್ಷ ಮಂಡಳಿ 3 ದಿನಗಳ ಕಾಲ ಸರಾಗವಾಗಿ ನಡೆಸಿ ಕೊಟ್ಟಿತು. ಕಾರ್ಯದರ್ಶಿ ಕಾ॥ ಕರಿಯಪ್ಪ ಅಚ್ಚೊಳ್ಳಿ ಕರಡು ವರದಿ ಮಂಡಿಸಿದರು. ಕಾ॥ ನಿತ್ಯಾನಂದ ಸ್ವಾಮಿ ಕರಡು ವರದಿ ಮೇಲೆ ಚರ್ಚೆ ಹೇಗೆ ಮಾಡಬೇಕೆಂದು ವಿವರಿಸಿದರು. ಒಟ್ಟಾರೆ ಕರಡು ವರದಿ ಮೇಲೆ 29 ಪ್ರತಿನಿಧಿಗಳು ಚರ್ಚೆ ಮಾಡಿದರು.



ಕಾ॥ ಮಲ್ಲಯ್ಯ ಜಾಲಹಳ್ಳಿ ಸಂಚಾಲಕತ್ವದ ನಿರ್ಣಯ ಸಮಿತಿ ಜಿಲ್ಲೆಯ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಬೇಕು, ಬರಪರಿಹಾರ ಕಾಮಗಾರಿಗಳನ್ನು ಆರಂಭಿಸಬೇಕು ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು, ಆನ್ಲೈನ್ ಪಡಿತರ ನೊಂದಾವಣಿ ರದ್ದುಗೊಳಿಸಿ ಕುಟುಂಬಕ್ಕೊಂದು ಕಾರ್ಡ ನೀತಿ ಅನುಸರಿಸಬೇಕು, ಭತ್ತಕ್ಕೆ ಬೆಂಬಲಬೆಲೆ ಮತ್ತು ಪ್ರೋತ್ಸಾಹಧನ ಘೋಷಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಸರಿಯಾಗಿ ಜಾರಿಗೊಳಿಸಬೇಕು ಮತ್ತು ಭ್ರಷ್ಟಾಚಾರ ತಡೆಗಟ್ಟಬೇಕು, ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ 371 ಕಲಂ ಜಾರಿಗೊಳಿಸಬೇಕು, ಜಿಲ್ಲೆಯ ಮಕ್ಕಳ ಅಪೌಷ್ಟಿಕತೆ ಮತ್ತು ಮಹಿಳೆಯರ ರಕ್ತಹೀನತೆ ನಿವಾರಣೆಗೆ ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು ಎಂದೂ, ಗಂಗಾವತಿಯಲ್ಲಾದ ವಿದ್ಯಾರ್ಥಿಗಳ ಮೇಲಾದ ದೌರ್ಜನ್ಯ ಖಂಡಿಸಿ ಮತ್ತು ಉಪನ್ಯಾಸಕರ ವೇತನ ತಾರತಮ್ಯ ನಿವಾರಣೆ ಒತ್ತಾಯಿಸಿ ಹಾಗೂ ಭೂಸ್ವಾಧೀನ ಮತ್ತು ಮನೆ-ನಿವೇಶನಗಳ ಪ್ರಶ್ನೆಗಳಾಧಾರದಲ್ಲಿ ಸಮ್ಮೇಳನದಲ್ಲಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

19 ಜಿಲ್ಲಾ ಸಮಿತಿ ಸದಸ್ಯರು ಆಯ್ಕೆಯಾದರು. ಮಲ್ಲಯ್ಯ ಜಾಲಹಳ್ಳಿ, ಜಿ. ಸುರೇಶ್, ಎಚ್. ಪದ್ಮ, ಡಿ.ಎಸ್. ಶರಣಬಸವ, ಕೆ.ಜಿ.ವೀರೇಶ್, ಚೆನ್ನಬಸವಯ್ಯ, ಶ್ರೀಧರ, ನಾರಾಯಣ, ಜಿ. ಎಸ್. ವೀರಭದ್ರ, ಹನುಮಗೌಡ ಮದರಕಲ್, ತಿಪ್ಪಯ್ಯನಾಯಕ, ಗಿರಿಯಪ್ಪ ಪೂಜಾರಿ, ನರಸಣ್ಣನಾಯಕ, ಶಂಶುದ್ದೀನ್, ಕೆ. ಶಿವಾನಂದ, ಕೆ ಸರಸ್ವತಿ ಕೆ. ರಂಗನಾಥ, ಎಂ.ಸಿ.ನಿಂಗಪ್ಪ ಮತ್ತು ನರಸಿಂಹಪ್ಪ ಆಯ್ಕೆಯಾದರು.

7 ಜನರ ಕಾರ್ಯದರ್ಶಿ ಮಂಡಳಿಯಾಗಿ. ಮಲ್ಲಯ್ಯ ಜಾಲಹಳ್ಳಿ, ಜಿ. ಸುರೇಶ್, ಎಚ್. ಪದ್ಮ, ಡಿ.ಎಸ್. ಶರಣಬಸವ, ಹನುಮಗೌಡ ಮದರಕಲ್, ಕೆ. ಶಿವಾನಂದ, ನರಸಿಂಹಪ್ಪ ಆಯ್ಕೆಯಾದರು.

ಕಾ॥ ಮಲ್ಲಯ್ಯ ಜಾಲಹಳ್ಳಿ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಕಾ॥ ಕೆ. ನೀಲಾ ಸಮಾರೋಪ ಸಮಾರಂಭ ನಡೆಸಿ ಕೊಟ್ಟರು. ಗೆಲುವು ನಮ್ಮದೇ ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

'ನಾರಾಯಣ ಬಲದಂಡೆ ಕಾಲುವೆ ಮುಂದುವರೆಸಿ ನೀರಾವರಿ ಸೌಲಭ್ಯ ವಿಸ್ತರಿಸಿ'

ನಾರಾಯಣ ಬಲದಂಡೆ ಕಾಲುವೆಯನ್ನು 95 ಕಿಲೋ ಮೀಟರ್ ನಿಂದ ಮುಂದುವರೆಸಬೇಕು, ತುಂಗಭದ್ರ ಎಡದಂಡೆ ಕಾಲುವೆಯ ನೀರಿನ ಕೊರತೆಯನ್ನು ನೀಗಿಸಬೇಕು ಅದರ ವ್ಯಾಪ್ತಿಯಲ್ಲಿ 5 ಸಮತೋಲನಾ ಜಲಾಶಯಗಳ ಎತ್ತರ ಹೆಚ್ಚಳವಾಗಬೇಕು, ನಂದವಾಡಗಿ, ಗೌಡೂರು, ಬೋಳಮಾನದೊಡ್ಡಿ ಸೇರಿದಂತೆ ಜಿಲ್ಲೆಯ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಬೇಕು.

ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಪ್ರದೇಶವೆಂದೇ ರಾಜ್ಯದಲ್ಲಿ ಗುರುತಿಸ ಲಾಗುತ್ತಿದೆ, ಪದೇ ಪದೇ ಬರಗಾಲ ಜಿಲ್ಲೆಯನ್ನು ಕಾಡುತ್ತಿದೆ, ಶೇ 80 ಜನ ಕೃಷಿಯನ್ನು ಅವಲಂಭಿಸಿ ಬದುಕುತ್ತಿದ್ದಾರೆ, ಬರ ಬಿದ್ದಾಗಲೆಲ್ಲ ರೈತರು ಮತ್ತು ಕೂಲಿಕಾರರು ದೊಡ್ಡಪ್ರಮಾಣದಲ್ಲಿ ನಗರಗಳಿಗೆ ಗುಳೆ ಹೋಗುತ್ತಿದ್ದಾರೆ, ಜಿಲ್ಲೆಯಲ್ಲಿ 13.91 ಲಕ್ಷ ಎಕರೆಗಳ ಕೃಷಿ ಯೋಗ್ಯ ಫಲವತ್ತಾದ ಜಮೀನು ಇದೆ, ಜಿಲ್ಲೆಯ ಎರಡು ಕಡೆ ನದಿಗಳು ಹರಿಯುತ್ತಿವೆ, ಆದರೆ ಇಲ್ಲಿಯವರೆಗೆ ಆಳಿದ ಸರ್ಕಾರಗಳ ವೈಫಲ್ಯದಿಂದಾಗಿ ನೀರಾವರಿ ಪ್ರದೇಶ ಹೆಚ್ಚಳವಾಗಿಲ್ಲ, ಸುಮಾರು 4 ಲಕ್ಷ ಎಕರೆಗಳಿಗೆ ಮಾತ್ರ ಇಲ್ಲಿಯವರೆಗೆ ನೀರು ಸಿಕ್ಕುತ್ತಿದ್ದು ಇನ್ನು 10 ಲಕ್ಷ ಎಕರೆ ಒಣ ಪ್ರದೇಶವಾಗಿಯೇ ಉಳಿದಿದೆ, ನೀರಾವರಿ ಪ್ರದೇಶ ಹೆಚ್ಚಳಕ್ಕೆ ಸಾಕಷ್ಟು ಅವಕಾಶಗಳಿವೆ, ಆದರೆ ಆಳುವ ಸರ್ಕಾರಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಯಾವ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿಲ್ಲ, ಈ ಹಿನ್ನೆಲೆಯಲ್ಲಿ ಜಿಲ್ಲೆಯ ನೀರಾವರಿ ಯೋಜನೆಗಳ ಜಾರಿಗಾಗಿ ಮತ್ತು ಆಮೂಲಕ ಜಿಲ್ಲೆಯ ಅಭಿವೃದ್ಧಿಗಾಗಿ ಕೆಳಕಾಣಿಸಿದ ಯೋಜನೆಗಳನ್ನು ಸರ್ಕಾರ ಶೀಘ್ರವಾಗಿ ಕೈಗೆತ್ತಿಕೊಳ್ಳಲು ಸಮ್ಮೇಳನ ಒತ್ತಾಯಿಸುತ್ತದೆ.

ನಾರಾಯಣ ಬಲದಂಡೆ ಕಾಲುವೆಯು 95 ಕಿಲೋ ಮೀಟರ್‌ವರೆಗೆ ನಿರ್ಮಾಣವಾಗಿ ಹಲವು ವರ್ಷಗಳೇ ಕಳೆದಿವೆ. 95 ಕಿಲೋ ಮೀಟರ್‌ನಿಂದ ಕಾಮಗಾರಿ ಮುಂದುವರೆಸಲು ಕೃಷ್ಣ ಬಿ. ತೀರ್ಪಿಗಾಗಿ ಕಾಯಲಾಗಿತ್ತು, ಬಿ ತೀರ್ಪು ಪ್ರಕಟವಾಗಿ ವರ್ಷವಾಗುತ್ತಾ ಬಂತು, ಅದರಲ್ಲಿ ಕರ್ನಾಟಕದ ಪಾಲಾಗಿ 177 ಟಿ.ಎಂ.ಸಿ. ನೀರು ಮಂಜೂರಾಗಿತ್ತು, ಯೋಜಿತವಾದಂತೆ ಬಲದಂಡೆ ಕಾಮಗಾರಿ ಕೈಗೆತ್ತಿಕೊಳ್ಳಬೇಕಾದ ಸರ್ಕಾರ ವಿಳಂಬ ಮಾಡುತ್ತಿದೆ, ಸರ್ಕಾರದ ಈ ವಿಳಂಬ ನೀತಿಯನ್ನು ಸಮ್ಮೇಳನ ಖಂಡಿಸುತ್ತಿದೆ.

ತುಂಗಭದ್ರ ಜಲಾಶಯದಿಂದ 230 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶವಿದೆ, ಆದರೆ ಈಗ ಜಲಾಶಯದಲ್ಲಿ 34 ಟಿ.ಎಂ.ಸಿ ಹೂಳು ತುಂಬಿ ನೀರಿನ ಸಾಮರ್ಥ್ಯ ಕಡಿಮೆಯಾಗಿದೆ ಮತ್ತೊಂದು ಕಡೆಗೆ 30 ಟಿ.ಎಂ.ಸಿ ನೀರನ್ನು ಕೈಗಾರಿಕೆಗಳಿಗೆ ಕೊಡಲಾಗುತ್ತಿದೆ. ಅಲ್ಲದೇ ಮಳೆಗಾಲದಲ್ಲಿ ಸಿಗುವ ಹೆಚ್ಚುವರಿ ನೀರು ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತದೆ, ತುಂಗಭದ್ರ ಎಡದಂಡೆ ಕಾಲುವೆಯ ಮುಖಾಂತರ 92 ಟಿ.ಎಂ.ಸಿ. ನೀರು ಕೊಡುವ ಗುರಿ ಇದ್ದರೂ ಇಲ್ಲಿಯವರೆಗೆ ಕೊಡಲಾಗಿಲ್ಲ, ಹೀಗಾಗಿ ಕಾಲುವೆಯ ತುದಿಯ ರೈತರು ನಿರಂತರವಾಗಿ ನೀರಿನ ಕೊರತೆಯಿಂದಾಗಿ ಕೃಷಿಯನ್ನೇ ಬಿಡುತ್ತಿದ್ದಾರೆ, ಈ ಎಲ್ಲಾ ಸಮಸ್ಯೆಗಳ ನಿವಾರಣೆಗಾಗಿ ಬುದುಗುಂಪಾ, ಹೂಳೆನೂರು-ಬೆನ್ನೂರು, ಬಳ್ಳಾರಿ, ಹಾಳವೆಂಕ್ಟಾಪುರ ಮತ್ತು ರಾಜಲಬಂಡಾ ಆಣೆಕಟ್ಟಿನ ಹೆಚ್ಚಳ ಈ 5 ಕಾಮಗಾರಿಗಳು ಸಮತೋಲನಾ ಜಲಾಶಯದ ಹೆಸರಿನಲ್ಲಿ ಮಂಜೂರಾತಿ ಪಡೆದಿವೆ. ಆದರೆ ಸರ್ಕಾರ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ನೀತಿಯನ್ನು ಅನುಸರಿಸುತ್ತಿದೆ, ಈ ವಿಳಂಬ ನೀತಿಯನ್ನು ಸಮ್ಮೇಳನ ಖಂಡಿಸುತ್ತದೆ.

ಜಿಲ್ಲೆಯಲ್ಲಿ ಬೃಹತ್ ಏತ ನೀರಾವರಿಯಾದ ನಂದವಾಡಗಿ ಸೇರಿದಂತೆ ಗೌಡೂರು ಮತ್ತು ಬೋಳಮಾನ ದೊಡ್ಡಿಯಂತಹ ಪ್ರಮುಖ ನೀರಾವರಿ ಯೋಜನೆಗಳನ್ನು ತಕ್ಷಣ ಆರಂಭಿಸಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ, ಈ ಎಲ್ಲಾ ಕಾಮಗಾರಿಗಳ ಆರಂಭಕ್ಕೆ ಒತ್ತಾಯಿಸಿ ಬೃಹತ್ ಹೋರಾಟಗಳಿಗೆ ಹೋಗಲು ಸಮ್ಮೇಳನ ಒತ್ತಾಯಿಸುತ್ತದೆ.

ಧಾರವಾಡ 9ನೇ ಜಿಲ್ಲಾ ಸಮ್ಮೇಳನ

ಟ 2 ರಿಂದ

ವಧಿಯಲ್ಲಿ ನಮ್ಮನ್ನಗಲಿದ ಸಂಗಾತಿಗಳಿಗೆ ಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಾ॥ ಎಸ್.ಪ್ರಸನ್‌ಕುಮಾರ ಪ್ರತಿನಿಧಿ ಅಧಿವೇಶನ ುದ್ಘಾಟನೆ ಮಾಡಿ, ಪ್ರಸ್ತುತ ಅಂತರಾಷ್ಟ್ರೀಯ, ಾಷ್ಟ್ರೀಯ ಪರಸ್ಥಿತಿ ಹಾಗೂ ಸಮ್ಮೇಳನ ುರಿತಂತೆ ಮಾತನಾಡಿದರು. ನಂತರ ಜಿಲ್ಲಾ ಾರ್ಯದರ್ಶಿ ಕಾಂ॥ ಬಿ.ಎಸ್.ಸೊಪ್ಪಿನ ಕರಡು ರದಿಯನ್ನು ಮಂಡಿಸಿದರು. ನಂತರ ವರದಿ ುರಿತು ಶಾಖಾವಾರು ಗುಂಪುಗಳು ಚರ್ಚೆ ಡೆಸಿದವು. ನಂತರ ಕೆಲ ತಿದ್ದುಪಡಿಗಳೊಂದಿಗೆ ರದಿಯನ್ನು ಸಮ್ಮೇಳನ ಸರ್ವಾನುಮತದಿಂದ ಂಗೀಕರಿಸಿತು.

ಲ್ಲಾ ಸಂಘಟನಾ ಸಮಿತಿ ಆಯ್ಕೆ

ಬಿ.ಎಸ್.ಸೊಪ್ಪಿನ, ಕಾರ್ಯದರ್ಶಿಯಾಗಿ ಾಗೂ ಜಿಲ್ಲಾ ಸಂಘಟನಾ ಸಮಿತಿಯು ದಸ್ಯರಾಗಿ ಆರ್.ಎಚ್.ಆಯಿ(ಧಾರವಾಡ), .ಐ.ಈಳಿಗೇರ(ಧಾರವಾಡ), ಮಹೇಶ ತ್ತಾರ(ಹುಬ್ಬಳ್ಳಿ), ಎಂ.ಎಸ್ ಡಪದ(ಗಜೇಂದ್ರಗಡ), ಬಸವರಾಜ ುಂತೂರ(ಬೆಳವಣಕಿ), ನಾರಾಯಣ ಕಾಳೆ ಹಾವೇರಿ), ಬಿ.ಎನ್.ಪೂಜಾರಿ(ಧಾರವಾಡ), ತ್ತಲ ನಾಯ್ಕ(ಗದಗ), ಬಸವರಾಜ ೂಜಾರ(ಹಾವೇರಿ), ಮಾಗುಂಡಪ್ಪ ಂಗಡಿ(ಬೆಳವಣಕಿ), ಮಹೇಶ ರೇವಂತ(ಬೆಳವಣಕಿ), ಪೀರು ಾತೋಡ(ಗಜೇಂದ್ರಗಡ) ಆಯ್ಕೆಯಾದರು.

ಸಿಪಿಎಂ 9ನೇ ಧಾರವಾಡ ಜಿಲ್ಲಾ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು

ರಾಜ್ಯ ಸರಕಾರ ಕನ್ನಡ ಶಾಲೆ ಮುಚ್ಚುವ ಮತ್ತು ವಿಲೀನಗೊಳಿಸುವ ಆದೇಶ ವಾಪಾಸ ಪಡೆಯಬೇಕು, ಗಂಗಾವತಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಅಮಾಯಕ ವಿದ್ಯಾರ್ಥಿಗಳ ಮೇಲೆ ಹಾಕಿದ ಮೊಕದ್ದಮೆಯನ್ನು ತಕ್ಷಣ ವಾಪಾಸ ಪಡೆಯಬೇಕು.

ಬೆಲೆ ಏರಿಕೆ, ಭ್ರಷ್ಟಾಚಾರ ವಿರೋಧಿಸಿ ಹಾಗೂ ಪ್ರಮುಖ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಜೆಸಿಟಿಯು ನೃತೃತ್ವದಲ್ಲಿ 2012 ಫೆಬ್ರುವರಿ 28ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಡೆಸಲು ಕರೆ ನೀಡಲಾಗಿದ್ದು ಈ ಪ್ರದೇಶದಲ್ಲಿ ಮುಷ್ಕರವನ್ನು ಯಶಸ್ವಿಗೊಳಿಸುವದು.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸೇರಿದಂತೆ ಇತರೆ ನಗರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆಯುತ್ತಿರುವ ಗುತ್ತಿಗೆ ಪೌರ ಕಾರ್ಮಿಕರ ಅಹೋರಾತ್ರಿ ಧರಣಿ ಸತ್ಯಾಗ್ರಹಕ್ಕೆ ಬೆಂಬಲ.

4. ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲವಾಗುವಂತೆ ಹುಬ್ಬಳ್ಳಿಯಿಂದ ಗದಗ ಮಾರ್ಗವಾಗಿ ಗುಲಬರ್ಗಾಕ್ಕೆ ನೇರ ರೈಲು ಸಂಪರ್ಕ ಆರಂಭಿಸಬೇಕು.
5. ಹುಬ್ಬಳ್ಳಿ–ಧಾರವಾಡ ಮಹಾನಗರ ಜನತೆಗೆ ಸಮರ್ಪಕ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಆಗಬೇಕು. ಈಗಿರುವ ಮೂರು ದಿನಗಳ ಅವಧಿಗೆ ಬದಲು ತಪ್ಪದೇ ಪ್ರತಿ ದಿನ ನಿರ್ದಿಷ್ಟ ಅವಧಿಗೆ ನೀರು ಪೂರೈಸಬೇಕು. ಸರಕಾರ ನೀರು ಸರಬರಾಜು ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ವಹಿಸುವ ಪ್ರಸ್ತಾವಣೆಯನ್ನು ಕೈಬಿಡಬೇಕು.
6. ರಾಜ್ಯ ಸರಕಾರ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಳ್ಳಿಗುಡಿ, ಮೆವುಂಡಿ ಜಂತ್ಲಿ ಶಿರೂರ ಗ್ರಾಮಗಳ ಸುಮಾರು 5000 ಎಕರೆ ಜಮೀನು ಭುಸ್ವಾಧೀನ ಪಡಿಸಿಕೊಂಡು ಪೋಸ್ಕೊ, ಎಸ್‌ಆರ್ ಗ್ರುಫ್ ಹಾಗೂ ಮೆಟಾಲಿಕ್ ಕೈಗಾರಿಕೆಗಳಗೆ ನೀಡಲು ಮುಂದಾಗಿದೆ. ಇದರಿಂದ ಜನರು ತೀವ್ರ ಪ್ರತಿರೋಧ ಒಡ್ಡಿದ ಹಿನ್ನಲೆಯಲ್ಲಿ ಸರಕಾರ ಭೂಮಿ ವಶಪಡಿಸಿಕೊಳ್ಳುವುದಿಲ್ಲ ಎಂದು ಲಿಖಿತ ಹೇಳಿಕೆ ನೀಡಿದೆ. ಆದರೆ, ನೋಟಿಫೈ ಆದ ಭೂಮಿಯನ್ನು ಡಿನೋಟಿಫೈ ಆಗಿರುವುದಿಲ್ಲ. ಸರಕಾರ ರೈತರ ತಾಳ್ಮೆ ಪರೀಕ್ಷಿಸದೇ ಕೂಡಲೇ ಡಿನೋಟಿಫೈ ಮಾಡಿ ಆದೇಶ ಹೊರಡಿಸಬೇಕು.
7. ಗದಗ–ಬೆಟಗೇರಿ ಅವಳಿ ನಗರಗಳಿಗೆ 10ರಿಂದ 15 ದಿನಗಳಿಗೊಮ್ಮೆ ಕುಡಿಯುವ ನೀಡು ಬಿಡುತ್ತಿದ್ದು ಜನರು ಸಾಕಷ್ಟು ತೊಂದರೆ ಎದುರಿಸುತ್ತಿದ್ದಾರೆ. ಇದಕ್ಕೆ ತಕ್ಷಣ ಸ್ಪಂದಿಸಬೇಕು. ಶಾಸ್ವತ ಪರಿಹಾರಕ್ಕೆ ಕ್ರಮ ವಹಿಸಬೇಕು.
8. ವೇತನ ತಾರತಮ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆ ನಿವಾರಣೆಗೆ ಆಗ್ರಹಿಸಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಹಾಗೂ ಪ್ರಾಚಾರ್ಯರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ. ಸರಕಾರ ತನ್ನ ಮೊಂಡುತನವನ್ನು ಬಿಟ್ಟು ಉಪನ್ಯಾಸಕರ ಸಮಸ್ಯೆಗಳನ್ನು ಬಗೆಹರಿಸಬೇಕು.
9. ಕೇಂದ್ರ ಸರಕಾರ ಸಾರ್ವಜನಿಕ ವಿಮಾ ಕ್ಷೇತ್ರವನ್ನು ಬಲಹೀನಗೊಳಿಸುವ ನಿಟ್ಟಿನಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಹಿಂಪಡೆಯಬೇಕು.

●

ಹೋರಾಟಗಳಿಗೆ ಶುಭಾಶಯಗಳು.....

ಪುಟ 7 ರಿಂದ

ಜನಗಳಿಗೆ ಒಂದು ಉತ್ತಮ ಬದುಕು ಸಿಗದಂತೆ ಮಾಡುತ್ತದೆ. ಈ ಹೋರಾಟವನ್ನು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರಕ್ಕೆ ಇದುವರೆಗೆ ಕಂಡು ಕೇಳರಿಯದ ಹಾದಿಗಳನ್ನು ಸತತವಾಗಿ ತೆರೆದು ಕೊಡುತ್ತಿರುವ ಈ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟದೊಂದಿಗೆ ಬೆಸೆಯದಿದ್ದರೆ ಇದು ಪರಿಣಾಮಕಾರಿಯಾಗುವುದಿಲ್ಲ. ಸಿಪಿಐ(ಎಂ) ಈ ದಿಕ್ಕಿನಲ್ಲಿ ಹೋರಾಟಗಳನ್ನು ಬಲಪಡಿಸಲು ಬದ್ಧವಾಗಿದೆ. ಅದರಿಂದ ಮಾತ್ರವೇ ಭ್ರಷ್ಟಾಚಾರಕ್ಕೆ ಸತತವಾಗಿ ಉಂಟು ಸೃಷ್ಟಿಸುತ್ತಿರುವ ತೂತುಗಳನ್ನು ಮುಚ್ಚಲು ಸಾಧ್ಯ.

ಭಾರತೀಯ ಜನತೆಯ ದುರದೃಷ್ಟವೆಂದರೆ, ಮನಮೋಹನ ಸಿಂಗ್ ಸರಕಾರ ಇಂತಹ ಸುಧಾರಣೆಗಳನ್ನು ಇನ್ನಷ್ಟು ಮುಂದಕ್ಕೆ ಒಯ್ಯಲು ಹಿಂದೆಂದಿಗಿಂತಲೂ ಹೆಚ್ಚು ದೃಢ ನಿರ್ಧಾರ ಮಾಡಿರುವಂತೆ ಕಾಣುತ್ತದೆ. ಇದು ಒಂದೆಡೆ, ಆಳಗೊಳ್ಳುತ್ತಿರುವ ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ನಮ್ಮ ಬಹುಪಾಲು ಜನತೆಯ ಜೀವನಾಧಾರವನ್ನು ನಾಶ ಮಾಡಿದರೆ, ಇನ್ನೊಂದೆಡೆ, ಭ್ರಷ್ಟಾಚಾರ ಮತ್ತು ನೀಚತನಗಳ ಮೂಲಕ ದೇಶದ ಸಂಪತ್ತು ಸೋರಿ ಹೋಗುತ್ತಿರುವ ಪ್ರಕ್ರಿಯೆ ಕೂಡ ಮುಂದುವರೆಯುತ್ತದೆ. ಆದ್ದರಿಂದ, ಹೊಸ ವರ್ಷದಲ್ಲಿ, ಭಾರತೀಯ ಜನತೆ ತಮ್ಮ ಜೀವನಾಧಾರದ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳಲು ಇಂತಹ ಸುಧಾರಣೆಗಳ ವಿರುದ್ಧ ಇನ್ನು ಬಲಿಷ್ಟ ಹೋರಾಟಗಳಿಗೆ ಸಿದ್ಧವಾಗಬೇಕು.

ಎಲ್ಲ ಜೀವನಾವಶ್ಯಕ ವಸ್ತುಗಳ ನಿರಂತರ ಬೆಲೆಯೇರಿಕೆಗಳಿಂದಾಗಿ ಜನತೆಯ ಬದುಕಿನ ಮೇಲೆ ಪ್ರಹಾರಗಳು ಎಗ್ಗಿಲ್ಲದೆ ಮುಂದುವರೆಯುತ್ತಿವೆ. ಇವು ನಮ್ಮ ಜನಗಳ ಬದುಕಿನ ಗುಣಮಟ್ಟವನ್ನು ಇನ್ನಷ್ಟು ಇಳಿಸುವುದರಿಂದಾಗಿ ಒಂದು ಉತ್ತಮ ಬದುಕಿಗಾಗಿ, ಒಂದು ಉತ್ತಮ ನಾಳೆಗಾಗಿ ಹೋರಾಟಗಳನ್ನು ತೀವ್ರಗೊಳಿಸಬೇಕಾಗಿದೆ.

ಆದ್ದರಿಂದ, ಮುಂಬರುವ ವರ್ಷ ಅತ್ಯುತ್ತಮವಾಗಿರಲಿ ಎಂದು ನಮ್ಮ ಓದುಗರಿಗೆ ಹಾರೈಸುತ್ತಲೇ, ಭಾರತೀಯ ಜನತೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ತಮ್ಮ ಸಾಮರ್ಥ್ಯವಮ್ಮಿ ಈಡೇರಿಸಿಕೊಳ್ಳಲು ಉತ್ತಮ ಪರಿಸ್ಥಿತಿಗಳನ್ನು ನಿರ್ಮಿಸುವ ಜನಗಳ ಸಂಘಟನೆಗಳನ್ನು, ಹೋರಾಟಗಳನ್ನು ಬಲಪಡಿಸುವಂತೆ ಕರೆ ನೀಡುತ್ತೇವೆ.

ಭಾರತೀಯ ಜನತೆಯ ವಿಶಾಲ ಜನಸಮೂಹಗಳ ಬದುಕಿನ ಗುಣಮಟ್ಟವನ್ನು ಉತ್ತಮ ಪಡಿಸುವ ಬಲಿಷ್ಟ ಹೋರಾಟಗಳಿಗೆ ನಮ್ಮ ಶುಭ ಹಾರೈಕೆಗಳು.

*

....ಬೆಂಗಳೂರು ವಿಶ್ವವಿದ್ಯಾಲಯ ಸಮಸ್ಯೆಗಳು ನೂರು

ಪುಟ 11 ರಿಂದ

ಪ್ರಯತ್ನಿಸುತ್ತಿದೆ.

ಆಯೋಗ ರಚನೆ

ಬೆಂಗಳೂರು ವಿಶ್ವವಿದ್ಯಾಲಯದ ಐದು ನಿರ್ದಿಷ್ಟ ಪ್ರಕರಣಗಳ ಕುರಿತು ತನಿಖೆ ನಡೆಸಲು ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಶಿವಶಂಕರ್ ಭಟ್ ನೇತೃತ್ವದ ಏಕ ಸದಸ್ಯ ಆಯೋಗವನ್ನು ನೇಮಕ ಮಾಡಿ ರಾಜ್ಯಪಾಲರು ಆದೇಶಿಸಿರುವುದು ಸ್ವಾಗತಾರ್ಹ.

ಒಟ್ಟಾರೆಯಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಘಪರಿವಾರದ ಗೂಂಡಾಗಿರಿ, ಭ್ರಷ್ಟಾಚಾರ, ಜಾತಿ ರಾಜಕಾರಣ ದಿಂದ ವಿ.ವಿ ಯ ಶೈಕ್ಷಣಿಕ ವಾತಾವರಣ ಕಲುಷಿತ ಗೊಂಡಿದೆ. **‘ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯ ಉಳಿಸಿ’ ಪ್ರಚಾರಾಂದೋಲನ** ನಡೆಸಲು ಎಸ್‌ಎಫ್‌ಐ ನಿರ್ಧರಿಸಿದೆ. ಅಲ್ಲದೇ ವಿಶ್ವವಿದ್ಯಾಲಯದ ಉಳಿವಿಗಾಗಿ ಪ್ರಗತಿಪರ ಶಕ್ತಿಗಳು ಕೈ ಜೋಡಿಸಬೇಕಿದೆ.

●

ತುಮಕೂರು ಜಿಲ್ಲಾ ಸಿಪಿಐ(ಎಂ) ಸಮ್ಮೇಳನ....

ಪುಟ 6 ರಿಂದ

ಊಟವೂ ಸಿಗುತ್ತಿಲ್ಲ. ಹೀಗಾಗಿ ಕೋಟ್ಯಂತರ ಬದುಕು ಬೀದಿಪಾಲಾಗುತ್ತಿದೆ. ನಮ್ಮ ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆ ಇಡಲಾಗಿದೆ. ಇದರಿಂದ ದೇಶ ಆತಂಕ ಎದುರಿಸುವಂತಾಗಿದೆ ಎಂದು ಹೇಳಿದರು.

ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ವರಲಕ್ಷ್ಮಿ ಮಾತನಾಡಿ ಆರೋಗ್ಯ, ಶಿಕ್ಷಣ ನೀಡುವ ಮಾತನಾಡುತ್ತಲೇ ಜನವಿರೋಧಿ ನೀತಿಗಳನ್ನು ಸರ್ಕಾರಗಳು ರೂಪಿಸುತ್ತಿವೆ. ಬೆಲೆ ಏರಿಕೆ ಗಗನಕ್ಕೆ ಏರುತ್ತಿದ್ದರೂ ಕಾರ್ಮಿಕರು, ಅಂಗನವಾಡಿ ನೌಕರರ ವೇತನ ಹೆಚ್ಚಿಸುತ್ತಿಲ್ಲ. ವಿದೇಶಿ ನೇರ ಬಂಡವಾಳ ಚಿಲ್ಲರೆ ಕ್ಷೇತ್ರಕ್ಕೆ ಹರಿದು ಬಂದರೆ ದೇಶದ 4 ಕೋಟಿ ಕುಟುಂಬಗಳು ಅವರನ್ನು ನಂಬಿಕೊಂಡವರು ಉದ್ಯೋಗ ಕಳೆದುಕೊಳ್ಳಿದ್ದಾರೆ. ಇದರ ಬಗ್ಗೆ ಬಿಜೆಪಿ ದ್ವಂದ್ವ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಸಮ್ಮೇಳನದಲ್ಲಿ ಸಿಐಟಿಯು ಮುಖಂಡ ಮೀನಾಕ್ಷಿ ಸುಂದರಂ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಕರ್ನಾಟಕ ಪ್ರಾಂತ ರೈತ ಸಂಘದ ಬಿ.ಉಮೇಶ್, ಹಿರಿಯ ಕಾರ್ಮಿಕ ಮುಖಂಡ ಮಹಮದ್ ದಸ್ತಗೀರ್ ಇತರರು ಉಪಸ್ಥಿತರಿದ್ದರು.

●

RNI No. KARKAN /2006/17926 Posted on every Saturd
Postal Reg. No. RNP/KA/BGS/2078/2010-12 Posted at MBC Bangalore G

ಒಳಚರಂಡಿಯಲ್ಲಿ ಕಾರ್ಮಿಕರ ಸಾವು ಸೂಕ್ತ ಪರಿಹಾರ ಹಾಗೂ ಗುತ್ತಿಗೆದಾರರ ಬಂಧನಕ್ಕೆ ಒತ್ತಾಯ



ತಿಪಟೂರಿನ ಒಳಚರಂಡಿಯಲ್ಲಿ ಕೆಲಸ ಮಾಡಲು ಹೋಗಿ ಮರಣ ಹೊಂದಿರುವ ಇಬ್ಬರು ಕಾರ್ಮಿಕರ ಕುಟುಂಬಗಳಿಗೆ ತಲಾ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು. ಹಾಗೂ ಗುತ್ತಿಗೆ ಪಡೆದು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡು ಸೂಕ್ತ ರಕ್ಷಣಾ ಸಲಕರಣೆಗಳನ್ನು ನೀಡದೆ ನಿರ್ಲಕ್ಷತೆ ವಹಿಸಿ ಕಾರ್ಮಿಕರ ಸಾವಿಗೆ ಕಾರಣರಾದ ಕೆ.ಬಿ.ಆರ್. ಕಂಪನಿಯ ಮಾಲೀಕರನ್ನು ಬಂಧಿಸಬೇಕೆಂದು ಒತ್ತಾಯಿಸಿ ಸಿಐಟಿಯು ಪೌರಕಾರ್ಮಿಕರ ಸಂಘ, ಕೊಳಗೇರಿನಿವಾಸಿಗಳ ಹಿತರಕ್ಷಣಾ ಸಮಿತಿ, ಮತ್ತು ಕಟ್ಟಡ ಹಾಗೂ ಇತರೇ ನಿರ್ಮಾಣ ಕಾರ್ಮಿಕರ ಫೆಡರೇಷನ್ ಸಿಐಟಿಯು ಜಂಟಿಯಾಗಿ ದಿನಾಂಕ 19-12-2011 ರ ಸೋಮವಾರ ಮಧ್ಯಾಹ್ನ 2-30 ರಿಂದ 3-30 ಗಂಟೆಯ ತನಕ ನಗರದ ಸ್ವತಂತ್ರಚೌಕದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಕಾರರು ನಿರಂತರವಾಗಿ ಯುಜಿಡಿಗಳಲ್ಲಿ ಹಾಗೂ ಪಿಟ್‌ಗುಂಡಿಗಳಲ್ಲಿ ಕಾರ್ಮಿಕರು ಸಾವನ್ನಪ್ಪುತ್ತಿದ್ದರೂ ಸರ್ಕಾರ ಈ ಬಗ್ಗೆ ಗಮನ ಹರಿಸುತ್ತಿಲ್ಲವೆಂದು ಬಂದಿಸಿದರು. ಕಟ್ಟಡ ನಿರ್ಮಾಣ ಕೈಗಾರಿಕೆಯಲ್ಲಿ ವಲಸೆ ಬರುವ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದ್ದು ಅವರನ್ನು ಅಮಾನವೀಯವಾದಂತಹ ರೀತಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ದಿನಕ್ಕೆ 10-12 ಗಂಟೆಗಳ ಕಾಲ ಯವುದೇ ಕಾನೂನುಗಳ ಸೌಲಭ್ಯವಿಲ್ಲದೆ, ಸುರಕ್ಷತಾ ಸಲಕರಣೆಗಳನ್ನು ನೀಡದೆ ದುಡಿಸುತ್ತಿದ್ದರು. ಈ ಬಗ್ಗೆ ಜಿಲ್ಲಾಡಳಿತ ಸರ್ಕಾರ ಗಮನಹರಿಸುತ್ತಿಲ್ಲವೆಂದು ಪ್ರತಿಭಟನಾಕಾರರು ಆರೋಪಿಸಿದರು. ಈ ಪ್ರತಿಭಟನೆಯನ್ನು ಉದ್ದೇಶಿಸಿ ಪೌರ ಕಾರ್ಮಿಕರ ಸಂಘದ ಖಜಾಂಚಿ. ಕೆ. ಮಂಜುನಾಥ್, ಕೊಳಗೇರಿ ಹಿತರಕ್ಷಣಾ ಸಮಿತಿಯ ಶೆಟ್ಟಳಯ್ಯ, ಕಟ್ಟಡ ಮತ್ತು ಇತರೇ ಕಾರ್ಮಿಕರ ಸಂಘದ ಅಧ್ಯಕ್ಷ ಬಿ.ಉಮೇಶ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯಂ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯುನ ಜಿಲ್ಲಾಧ್ಯಕ್ಷರು ಸೈಯದ್ ಮುಜೀಬ್, ಪೌರಕಾರ್ಮಿಕರ ಸಂಘಟನೆಯ ಮುಖಂಡರುಗಳಾದ ನರಸಿಂಹರಾಜು, ಉಮೇಶ್, ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಸೈಯದ್ ಅಲ್ತಾಫ್, ದರ್ಶನ್, ಕಟ್ಟಡ ಕಾರ್ಮಿಕ ಸಂಘಟನೆಯ ರಾಮಣ್ಣ, ರಾಮಚಂದ್ರ, ಮುಂತಾದವರು ನೇತೃತ್ವಸಹಿಸಿದರು.

ಗಲ್ಲು

ಕವನ



ಅವರು ಬಂದರು
ನಕಲಿ ದೇಶಭಕ್ತಿಯ
ವೇಷ ಧರಿಸಿದರು
ಅಫ್ಜಲ್ ಗುರುವಿಗೆ ಗಲ್ಲು
ಎಲ್ಲೆಲ್ಲೂ
ಎಬ್ಬಿಸಿದರು ಗುಲ್ಲು
ಅವರ ಧ್ವನಿಯನ್ನು
ಪ್ರತಿಧ್ವನಿಸಿದವು
ಪಾರ್ಲಿಮೆಂಟಿನ ಕಂಬಗಳು

ಮತ್ತೆ ಕೂಗಿದರು ಅವರು
ಕಸಬ್‌ನಿಗೂ
ಆಗಬೇಕು ಗಲ್ಲು
ಹೌದೆಂದವು
ನೆತ್ತರು ಚೆಲ್ಲಿದ
ಮುಂಬೈನ ಬೀದಿಗಳು

ಗುಜರಾತ್ ಗಲಭೆಯಲ್ಲಿ
ಸತ್ತವರ ಗೋರಿಗಳು
ಕೂಗಿ ಹೇಳಿದವು
ನರೇಂದ್ರ ಮೋದಿಗೂ
ಆಗಲೇ ಬೇಕು ಗಲ್ಲು
ಆಗ, ಇವರು
ಎತ್ತಲೇ ಇಲ್ಲ ಸೊಲ್ಲು.

– ಹುಲಿಕಟ್ಟಿ ಚನ್ನಬಸಪ್ಪ
ಸಿರುಗುಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH